# ಆಧುನಿಕತೆಯ ಹಿನ್ನೆಲೆಯಲ್ಲಿ ರೂಪಗೊಂಡ ಸಾಹಿತ್ಯಗಳು : ಭಾಷಿಕ ಅಧ್ಯಯನ

(ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪ್ರಬಂಧ)

ನೋಂದಣಿ ಸಂಖ್ಯೆ : ೧೬೦೧೦೨೦೩೦೦೦೩

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೫ ೧೨೮

೨೦೧೬-೧೭

ಪರಾಮರ್ಶೆಗೆ ಮಾತ್ರ

"ಸಿರಿಗನ್ನಡ" ಗ್ರಂಥಾಲಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ 583 276.

Shri Mahantesh
BOOK BINDING
Digital Colour Print
Laser Prints & Xerox
1st Flor Stadiaum Copelex KCD Road DWD

1321

ಶಿರಿಗನ್ನಡ ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ.ಹಂಪಿ.

Valued
30/10/17

# ಆಧುನಿಕತೆಯ ಹಿನ್ನೆಲೆಯಲ್ಲಿ ರೂಪಗೊಂಡ ನಾಣ್ಣುಡಿಗಳು : ಭಾಷಿಕ ಅಧ್ಯಯನ

(ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಸಂಪ್ರಬಂಧ)

ಶಿರಿಗನ್ನಡ ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ,ಹಂಪಿ.

ನೋಂದಣಿ ಸಂಖ್ಯೆ : ೧೬೦೧೦೨೦೩೦೦೦೩

ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ
ವಿದ್ಯಾರಣ್ಯ-೫೮೩೨೭೬
೨೦೧೬-೧೭

136995

8KS-02
KUH 9

ಕಿರಿಗನ್ನಡ
ಕನ್ನಡ ವಿಶ್ವವಿದ್ಯಾಲಯ,ಹಂಪಿ

# ಪರಿವಿಡಿ


ಅಧ್ಯಾಯ : ಒಂದು

**ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ, ಮತ್ತು ಸ್ವರೂಪ/೧–೭**

೧.೧. ಅಧ್ಯಯನದ ಉದ್ದೇಶ

೧.೨. ಅಧ್ಯಯನದ ವ್ಯಾಪ್ತಿ

೧.೩. ಅಧ್ಯಯನದ ವಿಧಾನ

೧.೪. ಅಧ್ಯಯನದ ಸ್ವರೂಪ

ಅಧ್ಯಾಯ : ಎರಡು

**ನಾಣ್ಣುಡಿಗಳ ಹುಟ್ಟು ಮತ್ತು ಬೆಳವಣಿಗೆ/೮–೧೯**

ಅಧ್ಯಾಯ : ಮೂರು

**ನಾಣ್ಣುಡಿಗಳು : ಒಳನುಡಿಗಳಲ್ಲಿ ಬಳಕೆ/೨೦–೩೨**

೩.೧. ಸಾಮಾಜಿಕ ನಾಣ್ಣುಡಿಗಳು

೩.೨. ಸಾಹಿತ್ಯಕ ನಾಣ್ಣುಡಿಗಳು

೩.೩. ಭಾಷಿಕ ನಾಣ್ಣುಡಿಗಳು

೪.೪. ಸಾಂಸ್ಕೃತಿಕ ನಾಣ್ಣುಡಿಗಳು

ಅಧ್ಯಾಯ : ನಾಲ್ಕು

**ಆಧುನಿಕ ನಾಣ್ಣುಡಿಗಳು : ಭಾಷಿಕ ಚಿಂತನೆ/೩೩–೪೪**

ಅಧ್ಯಾಯ : ಐದು

**ಆಧುನಿಕ ತಂತ್ರಜ್ಞಾನದಲ್ಲಿ ನಾಣ್ಣುಡಿಗಳ ಬಳಕೆ/೪೫–೬೦**

ಅಧ್ಯಾಯ : ಆರು

**ಸಮಾರೋಪ (ಅಧ್ಯಯನದ ಫಲಿತಗಳು)/೬೧–೬೯**

**ಅನುಬಂಧ**

**ಪಾರಿಭಾಷಿಕ ಪದಗಳ ಪಟ್ಟಿ**

**ಪರಾಮರ್ಶನ ಗ್ರಂಥಗಳು**

# ಅಧ್ಯಾಯ : ಒಂದು

## ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ, ಮತ್ತು ಸ್ವರೂಪ

**ಪ್ರಸ್ತಾವನೆ:**

ಜನಪದ ಸಾಹಿತ್ಯದ ಉಳಿದೆಲ್ಲ ಪ್ರಕಾರಗಳಿಗಿಂತ ನಾಣ್ಣುಡಿಗಳು ಹೆಚ್ಚು ಜನಪ್ರಿಯವಾದವು. ಜನಸಾಮಾನ್ಯರ ಬದುಕು ಭಾಷೆಗಳಲ್ಲಿ; ನಾಣ್ಣುಡಿಗಳಷ್ಟು ಹಾಸು ಹೊಕ್ಕಾಗಿರುವ ವಿಷಯ ಬೇರೊಂದಿಲ್ಲ. ಊಟಕ್ಕೆ ಉಪ್ಪಿನಕಾಯಿ ಹೇಗೋ ಹಾಗೆ. ನಾಣ್ಣುಡಿಗಳು ಮಾತಿನ ಮೂಲಕ ಮಹತ್ವವನ್ನು ಹಿರಿದು ಮಾಡಿ ಅದಕ್ಕೆ ಶಕ್ತಿ ಹಾಗೂ ಸಂಪನ್ನತೆಯನ್ನು ತಸಂದುಕೊಡುವವು. ನಾಣ್ಣುಡಿಗಳು ಮುತ್ತುಗಳಿದ್ದಂತೆ. "ಮಾತು ಆಡಿದರೆ ಹೋಯಿತು ಮುತ್ತು ಒಡೆದರೆ ಹೋಯಿತು" ಎಂಬ ನಾಣ್ಣುಡಿ ಅದರ ಮಹತ್ವವನ್ನು ತಿಳಿಸುತ್ತದೆ. ಆಡು ಮುಟ್ಟದ ಸೊಪ್ಪಿಲ್ಲ; ನಾಣ್ಣುಡಿ ಪ್ರವೇಶಿಸದ ಜೀವನಕ್ಷೇತ್ರವಿಲ್ಲ ಎನ್ನುವ ಹಾಗೆ, ನಾಣ್ಣುಡಿಗಳು ಸರ್ವವ್ಯಾಪ್ತಿಯಾಗಿವೆ. ಜೀವನದಲ್ಲಿ ಬೇರೆ ಬೇರೆ ಘಟ್ಟಗಳಿಗೆ ಸಂಬಂಧಿಸಿದ ಹಲವಾರು ವಿಷಯಗಳನ್ನು ಕುರಿತಾದ ನಾಣ್ಣುಡಿಗಳು ಈ ಪ್ರಬಂಧದಲ್ಲಿ ಹೇರಳವಾಗಿವೆ. ಇಂದಿಗೂ ಹಲವಾರು ಮೂಢನಂಬಿಕೆಗಳು, ಪರಂಪರಾನುಗತ ಪದ್ಧತಿ, ಸಂಪ್ರದಾಯಗಳು ಜನಪದರ ಮೇಲೆ ಪ್ರಭುತ್ವ ಸಾಧಿಸಿವೆ. ಆ ಎಲ್ಲ ಸಂಗತಿಗಳೂ ನಾಣ್ಣುಡಿಗಳಲ್ಲಿ ಮೈತಳೆದಿವೆ. ಗ್ರಾಮೀಣ ಜನತೆ ನಾಣ್ಣುಡಿಗಳನ್ನು ಬಳಸದೆ ಮಾತಾಡುವವರಲ್ಲ; ಮಾತಿನ ಒಂದು ಶಕ್ತಿಯಾಗಿ ಅವರು ನಾಣ್ಣುಡಿಗಳನ್ನು ಬಳಸುವವರು. ಹೀಗಾಗಿ ನಾಣ್ಣುಡಿಗಳು ಮಾನವನ ವೈಚಾರಿಕ, ಭಾವನಾತ್ಮಕ ನೆಲೆಯಲ್ಲಿ ರೂಪಗೊಂಡ ಜೀವನ ಅನುಭವದ ಬುತ್ತಿಯಾಗಿವೆ. ಇಲ್ಲಿ ಒಂದೊಂದು ನಾಣ್ಣುಡಿಯು ವಿಶಿಷ್ಟ ಅನುಭವದ ಹಿನ್ನೆಲೆಯಲ್ಲಿ ರೂಪಗೊಂಡಿರುತ್ತವೆ. ಹಾಗಾಗಿ ಪ್ರತಿಯೊಂದು ನಾಣ್ಣುಡಿಯು ತನ್ನ ಒಡಲಲ್ಲಿ ಕಥಾ ಬೀಜವನ್ನು ಇಟ್ಟುಕೊಂಡಿರುತ್ತದೆ. ಮಾತು ಮಾತಿಗೆ ಸಾಕ್ಷಿಯಾಗಿ ಅನೇಕ ನಾಣ್ಣುಡಿಗಳು ಜನಪದ ಕಥಾಘಟಕಗಳನ್ನು ನಿದರ್ಶನವಾಗಿ ಹೊಂದಿರುವುದನ್ನು ಕಾಣಬಹುದಾಗಿದೆ. ಹಾಗೆಯೇ ಕಥೆಗಳು ನಾಣ್ಣುಡಿಗಳ ಮೂಲಕ ತಮ್ಮ ಧೋರಣೆಗಳನ್ನು ಸ್ಪಷ್ಟಪಡಿಸಿರುವುದನ್ನು ನೋಡಬಹುದಾಗಿದೆ.

ಸಾಮಾನ್ಯವಾಗಿ ನಾಣ್ಣುಡಿ ಇಲ್ಲದ ಭಾಷೆಯಿಲ್ಲ; ನಾಣ್ಣುಡಿ ಬಳಸದ ಮನುಷ್ಯನಿಲ್ಲ. ಗಾಳಿ ಬೆಳಕಿನಂತೆ ಜನಜೀವನದ ಗದ್ದಲಗಳನ್ನು ಆವರಿಸಿಕೊಂಡಿರುವ ನಾಣ್ಣುಡಿ ಜನಪದ ಸಾಹಿತ್ಯದಲ್ಲಿ ಹುಲುಸಾಗಿ ಬೆಳೆದು ನಿಂತಿದೆ. ಒಂದು ರೀತಿಯಲ್ಲಿ ಅದು ಜನಸಾಮಾನ್ಯರ ವಿಶ್ವಕೋಶ ತಾವೇ ನಿರ್ಮಿಸಿಕೊಂಡು. ಪಾಲಿಸಿಕೊಂಡು ಬಂದ ಸಂವಿಧಾನ; ತಾವೇ ರಚಿಸಿದ ವೇದ, ಅದರಲ್ಲಿ ಸದನ ವಿವೇಚನೆ, ವಿಧಿನಿಷೇಧ, ಜೀವನದರ್ಶನ, ಸೌಂದರ್ಯಾಭಿರುಚಿ, ವ್ಯವಹಾರ ರೀತಿ-ನೀತಿಗಳು ಮೊದಲಾದವುಗಳೆಲ್ಲ ನಾಣ್ಣುಡಿಗಳ ಬಳಕೆಯ ಭಾಷೆಯಲ್ಲಿ ಭಟ್ಟಿ ಇಳಿದಿವೆ. ಸ್ವಾನುಭವದಿಂದ ಸಹಜವಾಗಿ ಮೂಡಿಬಂದಿರುವ ಇವುಗಳ ಉಸಿರು ಸರಳತೆ. ಆದರೆ ಆ ಸರಳತೆಯಲ್ಲೂ ನಾಣ್ಣುಡಿಗಳು ವಿಶಿಷ್ಟತೆಯನ್ನು ಕಾಪಾಡಿಕೊಂಡು ಬಂದಿರುವುದೇ ಇವುಗಳ ದೊಡ್ಡಗುಣ.

ನಾಣ್ಣುಡಿಗಳು ಒಂದು ರಾಷ್ಟದ ಸಾಮಾಜಿಕ, ಸಾಂಸ್ಕೃತಿಕ, ಜೀವನಚಿತ್ರವನ್ನೊಳಗೊಂಡ ಅಲಿಖಿತ ಇತಿಹಾಸ; ರಾಷ್ಟದ ಅಂತರಂಗವನ್ನು ಪ್ರತಿಬಿಂಬಿಸುವ ಕನ್ನಡಿ ಇನ್ನೊಂದು ದೃಷ್ಟಿಯಿಂದ ಜನಸಾಮಾನ್ಯರ ಬಾಳನ್ನು ರೂಪಿಸುವ ನಿಯಂತ್ರಿಸುವ ವಿಧಿ; ಶಿಕ್ಷಿಸುವ, ರಕ್ಷಿಸುವ, ಧೈರ್ಯತುಂಬುವ, ದಾರಿ ತೋರಿಸುವ, ಕೊನೆಗೆ ಕೈ ಹಿಡಿದು ನಡೆಸುವ ಗುರು; ತೊಂದರೆಗೆ ಸಿಕ್ಕಿದಾಗ ಸಮಾಧಾನ ಹೇಳುವ, ಸಾಂತ್ವನಗೊಳಿಸುವ ವಾತ್ಸಲ್ಯಮಯಿ ತಾಯಿ; ನೋವಿನ ಗಾಯವನ್ನು ಮಾಯಿಸುವ ಮದ್ದು; ಮನಸ್ಸಿನ ಮಾನ್ಯತೆ ಕಳೆಯುವ ತೊಳೆಯುವ ಮಾಪನ ಎಂದು ಹೇಳಲಾಗುತ್ತದೆ. ಹೀಗಾಗಿ ನಾಣ್ಣುಡಿಗಳನ್ನು ಪುಟ್ಟ ಪ್ರಬಂಧದ ಶೀರ್ಷಿಕೆಗಳು ಎನ್ನಬಹುದು. ಒಂದು ರೀತಿಯಲ್ಲಿ ಭಾವವಿಸ್ತರಣ ಕಲೆಯನ್ನು ಕಲಿಯಲು ಉತ್ತಮವಾದ ಸಾಧನ. ಬುದ್ಧಿ, ವಿಚಾರ ಹರಿತವಾಗಲು ಒಳ್ಳೆಯ ಸಾಹಿತ್ಯದ ಸಾಧನ. ನೆನಪಿಗೆ ಸುಲಭವಾದ ನುಡಿಗಟ್ಟು. ಅದರಲ್ಲಿ ಕಂಡುಬರುವ ಪ್ರಾಸ, ಲಯ, ಅರ್ಥಚಮತ್ಕಾರಗಳು ಸುಲಭವಾಗಿ ಮನಸೆಳೆಯುತ್ತವೆ.

ನಿತ್ಯ ಜೀವನದಲ್ಲಿ ಬಳಸುವ ಸಾಮಾನ್ಯ ನಾಣ್ಣುಡಿಗಳು ಎಲ್ಲರಿಗೂ ಪರಿಚಿತವಿರುತ್ತವೆ. ಅರ್ಥೈಸುವುದು ಸುಲಭ. ವಿಶಿಷ್ಟ ನಾಣ್ಣುಡಿಗಳು ಆಯಾ ಕೇತ್ರಕ್ಕೆ, ವೃತ್ತಿಗೆ ಸಂಬಂಧಿಸಿರುತ್ತವೆ. ಅದನ್ನು ಎಲ್ಲ ಸಂದರ್ಭದಲ್ಲಿ ಬಳಸಲಾಗದು. ಮತ್ತು ಪಾರಿಭಾಷಿಕ ಅರ್ಥದಿಂದ ಕೂಡಿರುತ್ತವೆ. ನಾಣ್ಣುಡಿಗಳು ಹೇಳುವ ಮಾತಿಗೆ ಸಮರ್ಥನೆ ಆಗಿ, ಹೋಲಿಕೆಯಾಗಿ ನಾಣ್ಣುಡಿಗಳನ್ನು ಜನಸಾಮಾನ್ಯರು ಬಳಸುತ್ತಾರೆ. ಹೀಗೆ ಜನರಿಗಾಗಿ ಜನರೇ ಸೃಷ್ಟಿಸಿಕೊಂಡ ಸಾಹಿತ್ಯವೇ ನಾಣ್ಣುಡಿ ಎಂದು ಹೇಳಬಹುದು.

ಒಂದು ಸಮುದಾಯದ ಜನರು ಪರಸ್ಪರ ವ್ಯವಹರಿಸುವ ಸಂದರ್ಭದಲ್ಲಿ ಜೊತೆಗೆ ಜನ ಸಾಮಾನ್ಯರಿಗೆ ತಿಳಿದಿರುವಂತಹ ವಿಚಾರಗಳನ್ನು ಅವರ ದಿನನಿತ್ಯದ ಅನುಭವಗಳನ್ನು ನಾಣ್ಣುಡಿಗಳ ಮೂಲಕ ಅಭಿವ್ಯಕ್ತಿಸುವುದನ್ನು ಮನಗಾಣಬಹುದು. ಗ್ರಾಮೀಣ ಪ್ರದೇಶದವರಾಗಲಿ, ನಗರಪ್ರದೇಶದವರಾಗಲಿ, ತಿಳಿದೋ ತಿಳಿಯದೆಯೋ ಮಾತಿನ ಮಧ್ಯೆ ಬಳಸುತ್ತಾರೆ. ಇದು ಒಂದು ರೀತಿಯಲ್ಲಿ ಕಲಿತವರು ಮತ್ತು ಕಲಿಯದವರ ಜ್ಞಾನ ಭಂಡಾರ. ಆದರಿಂದಲೇ ಜನಸಾಮಾನ್ಯರು ನಾಣ್ಣುಡಿಗೆ ವೇದ ಸಮಾನವೆಂದು

ಹೇಳಿರುವುದುಂಟು. ಈ ನಾಣ್ಣುಡಿಗಳನ್ನು ಯಾರು ಬೇಕಾದರೂ? ಹೇಗೆ ಬೇಕಾದರೂ? ಯಾವ ಸಂದರ್ಭದಲ್ಲಾಗಲಿ? ಬಳಕೆ ಮಾಡಬಹುದು. ಇದಕ್ಕೆ ನಿಯಮವೆನ್ನುವುದೇ ಇಲ್ಲ. ಮಾತಿನಿಂದ ಹಿಡಿದು ಬರಹ, ಭಾಷಣ, ಚರ್ಚೆ, ಭೋದನೆಯ ಸಂದರ್ಭದಲ್ಲೂ ಸಹ ಬಳಕೆ ಮಾಡಬಹುದು.

ಈ ನಾಣ್ಣುಡಿಗಳನ್ನು ಬಳಕೆಗೆ ತಂದವರು ಯಾರುವೆಂಬುದೂ ತಿಳಿದಿಲ್ಲ ಆದರೂ ತಲೆಮಾರಿನಿಂದ ತಲೆಮಾರಿಗೆ ವರ್ಗಾವಣೆ ಆಗಿವೆ. ಕಿರಿಯರು ತಪ್ಪು ಮಾಡಿದಾಗ ಅವರಿಗೆ ತಿದ್ದಿ ಬುದ್ಧಿ ಹಿರಿಯರು ಹೇಳುವ ಅರ್ಥಗರ್ಭಿತವಾದ ನುಡಿಗಳೇ ನಾಣ್ಣುಡಿಗಳಾಗಿ ಬಳಕೆಗೆ ಬಂದಿರಬಹುದು. ನಾಣ್ಣುಡಿಗಳು ಯಾವಾಗ ಜನ್ಮತಾಳಿದವೆಂದು ಲಿಖಿತ ಆಧಾರಗಳಿಲ್ಲ. ಮಾನವ ಭಾಷೆಯನ್ನು ಕಲಿತಾಗಲೆ ನಾಣ್ಣುಡಿಗಳನ್ನು ಬಳಕೆ ಮಾಡುವುದನ್ನು ಕಲಿತ. ಪುರಾತನ ಕಾಲದಿಂದಲೂ ಇವು ಬಳಕೆಯಲ್ಲಿ ಇರುವುದನ್ನು ಕಾಣಬಹುದು. ಈ ನಾಣ್ಣುಡಿಗಳು ಭೌಗೋಳಿಕ ಜನಾಂಗಿಕ. ಪರಿಸರಕ್ಕೆ ಅನುಗುಣವಾಗಿ ಜನಸಾಮಾನ್ಯರಲ್ಲಿ ಅಲ್ಪಸ್ವಲ್ಪ ಬದಲಾವಣೆಯನ್ನು ಪಡೆಯಬಹುದು. ಇದು ಸಹಜ ಅವರ ಅಭಿರುಚಿಗೆ ತಕ್ಕಂತೆ ಬಳಸಲಾಗುತ್ತದೆ. ನಾಣ್ಣುಡಿಗಳಿಂದ ಮನುಷ್ಯನ ಸ್ವಭಾವಗಳನ್ನು, ಅವನ ಹಾವಭಾವಗಳನ್ನು ಗುರುತಿಸುವಂತಹ ಸಹಜವಾದ ಲಕ್ಷಣಗಳನ್ನು ಕಂಡುಕೊಳ್ಳಬಹುದು. ಕೆಲ ವಿದ್ವಾಂಸರು 'ನಾಣ್ಣುಡಿಯು ಭಾಷೆಯ ಜೀವಾಳವಿದ್ದಂತೆ ಅನುಭವದ ವೇದಗಳು ಇದ್ದಂತೆ' ಎಂದಿದ್ದಾರೆ. ಜನ ಜೀವನದ ಸರಿ ತಪ್ಪುಗಳನ್ನು ಎತ್ತಿ ತೋರಿಸುವಲ್ಲಿ ರೀತಿ ನೀತಿಗಳನ್ನು ತಿಳಿಸಿಕೊಡುವಲ್ಲಿ ನಾಣ್ಣುಡಿಗಳು ಪ್ರಮುಖವಾಗಿ ಪ್ರಭಾವ ಬೀರುತ್ತವೆ. ನಾಣ್ಣುಡಿಗಳು ಚಿಕ್ಕ ವಾಕ್ಯಗಳಂತೆ ಇದ್ದರೂ ಕೂಡ ಕೊಡುವಂತಹ ಅರ್ಥ ಹಿರಿಯದಾಗಿದೆ. ನಾಣ್ಣುಡಿಗಳು ಜೀವನವನ್ನೆ ಪ್ರತಿಬಿಂಬಿಸುವ ಭಾಷೆಯಾಗಿ ಕಂಡುಬರುತ್ತದೆ.

ನಾಡಿನಲ್ಲಿ ಮಾನವ ಹುಟ್ಟಿದಂದಿನಿಂದ ಒಬ್ಬರನ್ನೊಬ್ಬರು ಸಂಪರ್ಕಿಸುವಾಗ ಭಾಷೆಯನ್ನು ಬಳಸಬೇಕಾಗುತ್ತದೆ. ಸಾಮಾನ್ಯವಾಗಿ ಮನುಷ್ಯ ಭಾಷೆ ಕಲಿತ ದಿನಗಳಲ್ಲಿ ನಾಣ್ಣುಡಿಗಳು ಬೆಳೆದವು ಎಂದರೆ ತಪ್ಪಾಗಲಾರದು. ಉದಾಹರಣೆಗೆ ಮನುಷ್ಯ ಹುಟ್ಟಿದಾಗಿನಿಂದಲೂ ನಾವು ಅನೇಕ ಆವಿಷ್ಕಾರಗಳು, ಹೊಸ ಹುಟ್ಟುಗಳು ಮತ್ತು ವಿಜ್ಞಾನಿಗಳು, ಗಣಿತಜ್ಞರು ಮುಂತಾದವರನ್ನು ನಾವು ನೋಡುತ್ತಾ ಬಂದಿದ್ದೇವೆ. ಹಾಗೆಯೇ ನಾಣ್ಣುಡಿಗಳು ಸಹ ಮನುಷ್ಯ ಭಾಷೆ ಕಲಿತಾಗಿನಿದಂಲೇ ಹುಟ್ಟಿದವೆಂಬುದಕ್ಕೆ ಅನೇಕ ಉದಾಹರಣೆಗಳು ಸಿಗುತ್ತವೆ. ಅದರಲ್ಲಿಯೂ ಪಾಶ್ಚಾತ್ಯರಲ್ಲಿ ಹೆಚ್ಚಾಗಿ ಮೊದಲು ಬರವಣಿಗೆ ರೂಪದಲ್ಲಿ ದೊರೆತದ್ದು, ನಾವು ಇತಿಹಾಸ ಪುಟಗಳಲ್ಲಿ ನೋಡಬಹುದು. ಅಂದರೆ ಭಾರತದ ಭಾಷೆಗಳಲ್ಲಿ ನಾಣ್ಣುಡಿಗಳು ಬೆಳೆದಿಲ್ಲವೆಂದು ಹೇಳಲಾಗುವುದಿಲ್ಲ. ಇಲ್ಲಿ ನಾಣ್ಣುಡಿಗಳು ಇದ್ದರು ಅವುಗಳನ್ನು ಬರವಣಿಗೆ ರೂಪದಲ್ಲಿಡಲು ನಮ್ಮ ಭಾರತೀಯರಿಗೆ ತಿಳಿಯಲಿಲ್ಲವೆನೋ ಎಂದು ಹೇಳುವುದಲ್ಲ ಆದರೆ ಅವು ಜನ ಸಾಮಾನ್ಯರ ಸಾಮಾನ್ಯ ನುಡಿಗಳಂತೆ ಕಂಸಡು ಬರುತ್ತಿದರಿಂದಾಗಿ ಬರವಣಿಗೆಗೆ ಬರುವಲ್ಲಿ ತುಂಬಾ ತಡವಾಗಿ ಬಂದಿರಬಹುದು. ಆದರೆ ನಾಣ್ಣುಡಿಗಳು ಒಂದು ತಲೆ ಮಾರಿನಿಂದ ಇನ್ನೊಂದು ತಲೆಮಾರಿಗೆ ಬೆಳೆಯುತ್ತಲೇ ಬಂದಿವೆ. ಅದರಲ್ಲಿ ಸಾಮಾನ್ಯವಾಗಿ ಜಾನಪದ ಹಾಡುಗಳು,

ಒಗಟುಗಳು, ಜಾನಪದ ಮಹಾಕಾವ್ಯಗಳು ನಮಗೆ ಸಿಗುತ್ತವೆ. ಮೌಕಿಕ ಕಾವ್ಯಗಳು ಒಬ್ಬರ ಬಾಯಿಂದ ಮತ್ತೊಬ್ಬರ ಬಾಯಿಗೆ ಇದುವರೆಗೂ ಬೆಳೆದುಬಂದಿರುವುದಕ್ಕೂ ಅನೇಕ ಉದಾಹರಣೆಗಳಿವೆ. ಅವುಗಳಲ್ಲಿ ಮಲೆಮಹಾದೇಶ್ವರ, ಕಾಲೇವಾಲ, ಮಂಟೇಸ್ವಾಮಿ ಮುಂತಾದ ಮೌಕಿಕ ಮಹಾಕಾವ್ಯಗಳನ್ನು ನೋಡಬಹುದು. ಹಾಗೆಯೇ ನಾಣ್ಣುಡಿಗಳು ಸಹ ಒಬ್ಬರ ಬಾಯಿಂದ ಒಬ್ಬರ ಬಾಯಿಗೆ ವರ್ಗಾವಣೆಯಾಗುತ್ತಲೇ ಬಂದಿವೆ. ಕೆಲವು ಸಂದರ್ಭಗಳಲ್ಲಿ ಅವುಗಳ ಅರ್ಥಗಳನ್ನು ಕಳೆದುಕೊಂಡು ಬೇರೆ ಅರ್ಥವನ್ನು ಕೊಡಬಹುದು ಅಥವಾ ಅವು ಬದಲಾವಣೆಯಾಗಬಹುದು. ಆದರೆ ನಾಣ್ಣುಡಿಗಳು ಅರ್ಥ, ಲಯ, ಪ್ರಾಸಗಳ ಮೂಲಕ ತನ್ನ ತನವನ್ನು ಉಳಿಸಿಕೊಂಡು ಬಂದಿರುವುದು ಕಂಡುಬರುತ್ತದೆ.

ಈ ಹಿನ್ನೆಲೆಯಲ್ಲಿ ಜಾಗತೀಕರಣ ಹೊಂದುತ್ತಿರುವ ಸಮಾಜದಲ್ಲಿ ಆಧುನಿಕತೆಯ ಪ್ರಭಾವದಿಂದಾಗಿ ಆಧುನಿಕ ತಂತ್ರಜ್ಞಾನ ಬದಲಾದಂತೆಲ್ಲಾ ಮಾನವನ ಭಾಷೆ ಬದಲಾಗುತ್ತಾ ಹೋಗುವುದು ಸಹಜವಾಗಿ ಎಲ್ಲರಿಗೂ ಗೊತ್ತಿರುವ ಸಂಗಾತಿ. ಭಾಷೆಯಲ್ಲಿ ಬಳಸುವಂತಹ ವ್ಯಂಗ.ಟೀಕೆ–ಟಿಪ್ಪಣಿಗಳು ಹಾಸ್ಯಸ್ಪಾದ ಹಾಗೂ ಢಾಂಭಿಕತೆಯಿಂದಾಗಿ ಮನುಷ್ಯ ನಾಣ್ಣುಡಿಗಳನ್ನು ಬದಲಾಯಿಸಿಕೊಂಡು ಬಳಸುವುದನ್ನು ಕಾಣಬಹುದಾಗಿದೆ. ಈ ನಾಣ್ಣುಡಿಗಳ ಭಾಷೆ ಯಾವಾಗ ಬೇಕಾದರೂ ಬದಲಾಗಬಹುದು. ಇದಕ್ಕೆ ನಿರ್ಧಿಷ್ಟವಾದ ಆಕರವಿಲ್ಲ. ಭಾಷೆ ಬದಲಾಗುವ ಸಮಾಜದ ಜೊತೆ ಇದು ಒಗ್ಗೂಡುತ್ತದೆ. ಮಾನವನಿಗೆ ಅಲೋಚನಾ ಶಕ್ತಿಯಿರುವುದರಿಂದ ಎಲ್ಲ ಪ್ರಾಣಿಗಳಿಗಿಂತ ಭಿನ್ನವಾಗಿರುತ್ತಾನೆ. ಹೀಗಾಗಿ ಇಂತಹ ಆಲೋಚನಾ ಶಕ್ತಿಯೇ ಭಾಷಾ ಬದಲಾವಣೆಗೆ ಮತ್ತು ನಾಣ್ಣುಡಿಗಳ ಬದಲಾವಣೆಗೆ ಮೂಲ ಕಾರಣವಾಗಿರಬಹುದು. ಜೊತೆಗೆ ಆಧುನಿಕತೆಯಲ್ಲಿ ಹೆಚ್ಚು ಅನ್ಯದೇಶಿಯ ಪದಗಳನ್ನು ಬಳಕೆ ಮಾಡುವುದರಿಂದ ಭಾಷೆ ಬದಲಾವಣೆಯ ವೇಗ ಹೆಚ್ಚಾದಂತೆ ನಾಣ್ಣುಡಿಗಳು ಸಹ ಬದಲಾಗುತ್ತ ಹೋಗುತ್ತದೆ. ಈ ರೀತಿಯ ಭಾಷೆ ಬದಲಾವಣೆಗೆ ತಂತ್ರಜ್ಞಾನವೂ ಹೇಗೆ ಕಾರಣವಾಗುತ್ತದೆಯೋ ಹಾಗೇ ನಾಣ್ಣುಡಿಗಳ ಬದಲಾವಣೆಗೆ ತಂತ್ರಜ್ಞಾನವು ಮೂಲ ಕಾರಣವೆಂದರೂ ತಪ್ಪಾಗಲಾರದು.

ಹೀಗಾಗಿ ಪ್ರಸ್ತುತ ಅಧ್ಯಯನಕ್ಕೆ ಒಳಪಡಿಸಿಕೊಂಡಿರುವಂತಹ ನಾಣ್ಣುಡಿಗಳು ಹಿಂದಿನ ತಲೆಮಾರಿಗಿಂತ ವಿಭಿನ್ನತೆಯಿಂದ ಕೂಡಿವೆ. ಅಂದರೆ ಆಯಾ ಜಗತ್ತು, ಆಯಾ ಕಾಲಕ್ಕೆ ಅನುಗುಣವಾಗಿ ರಚಿತವಾಗಿರುವಂತವು. ಇಂತಹ ನಾಣ್ಣುಡಿಗಳು ಸೃಷ್ಟಿಯಾದ ಕೆಲವು ದಿನಗಳ (ವರ್ಷಗಳ) ನಂತರ ಕಳೆದು ಹೋಗಬಹುದು. ಇವು ಕೇವಲ ಆಯಾ ಸಂದರ್ಭಕ್ಕೆ ಅನುಗುಣವಾಗಿ ರೂಪಿತವಾಗಿರುವಂತಹ ನಾಣ್ಣುಡಿಗಳು. ಇಲ್ಲಿ ಯಾರೂ ಎಲ್ಲಿ ಬೇಕಾದರೂ ಹೇಗೆ ಬೇಕಾದರೂ ಇಂತಹ ನಾಣ್ಣುಡಿಗಳನ್ನು ಬಳಕೆ ಮಾಡಬಹುದು. ಮೂಲ ನಾಣ್ಣುಡಿಗಳಿಗೂ ಆಧುನಿಕ ನಾಣ್ಣುಡಿಗಳಿಗೂ ಅಜಾಗಜಾಂತರ ವ್ಯತ್ಯಾಸವಿರುತ್ತದೆ. ಹೀಗೆ ಮುಂದಿನ ದಿನಮಾನಗಳಲ್ಲಿ ಇಂತಹ ನಾಣ್ಣುಡಿಗಳು ಹೊಸ ರೂಪಗಳಿಂದ ಜನ್ಮ ತಾಳಿದರೂ ಆಶ್ಚರ್ಯಪಡಬೇಕಾಗಿಲ್ಲ. ಮಾನವನ ವಿಕಾಸವೇ ಭಾಷೆಯ ವಿಕಾಸಕ್ಕೆ ಮೂಲಸೆಲೆ. ಇಂತಹ ನಾಣ್ಣುಡಿಗಳಿಗೆ ಕೆಲವು ದಿನಗಳೂ ಮಾತ್ರ ಮಹತ್ವವಿದ್ದು. ನಂತರ

ದಿನಮಾನಗಳಲ್ಲಿ ತನ್ನ ಮಹತ್ವವನ್ನು ಕಳೆದುಕೊಳ್ಳುತ್ತವೆ. ತಂತ್ರಜ್ಞಾನದ ಪಾರಿಭಾಷಿಕ ಪದಗಳಿಂದ ನಾಣ್ಣುಡಿಗಳು ಸಾರ್ವಜನಿಕ ವಲಯಗಳಲ್ಲಿ, ಸ್ನೇಹಿತರ ಜೊತೆ ಹರಟೆ ಹೊಡೆಯುವ ಸಂದರ್ಭದಲ್ಲಿ, ಬೇರೆಯವರನ್ನು ಅಪಹಾಸ್ಯ ಮಾಡುವ ಸಂದರ್ಭದಲ್ಲಿ, ವ್ಯಂಗ್ಯ, ಟೀಕೆ, ಹಾಸ್ಯಸ್ಪಾದವಾದ ಮಾತುಗಳನ್ನು ಬಳಕೆ ಮಾಡುವ ಸಮಯದಲ್ಲಿ ಬಳಕೆಯಾಗುತ್ತವೆ. ಹೀಗಾಗಿ ಇವು ಎಂದಿಗೂ ಮಹತ್ವವನ್ನು ಕಳೆದುಕೊಳ್ಳುವುದಿಲ್ಲ. ಈಗಿನ ತಲೆಮಾರಿನ ನಾಣ್ಣುಡಿಗಳು ಕೇವಲ ಆಯಾ ಕಾಲದಲ್ಲಿ, ಆಯಾ ಸಂದರ್ಭದಲ್ಲಿ ಮಾತ್ರ ಮಹತ್ವ ಪಡೆದುಕೊಳ್ಳುತ್ತವೆ. ಪ್ರಸ್ತುತ ನಾಣ್ಣುಡಿಗಳು ಹೆಚ್ಚಾಗಿ ನುಡಿಬೆರಕೆಯಾಗಿರುವುದು ಕಂಡುಬರುತ್ತವೆ.

### ೧.೧. ಅಧ್ಯಯನದ ಉದ್ದೇಶ:

"ಆಧುನಿಕತೆಯ ಹಿನ್ನೆಲೆಯಲ್ಲಿ ರೂಪಗೊಂಡ ನಾಣ್ಣುಡಿಗಳು: ಭಾಷಿಕ ಅಧ್ಯಯನ" ಎಂಬ ವಿಷಯ ಕುರಿತಾಗಿ ಇದುವರೆಗೂ ಜಾನಪದ ನೆಲೆಯಲ್ಲಿ ಮತ್ತು ಸಾಂಸ್ಕೃತಿಕ ನೆಲೆಯಲ್ಲಿ ನಾಣ್ಣುಡಿಗಳ ಕುರಿತಾಗಿ ಅಧ್ಯಯನಗಳು ನಡೆದಿವೆ. ಆದರೆ ಭಾಷಿಕವಾಗಿ ನಾಣ್ಣುಡಿಗಳ ಅಧ್ಯಯನಗಳು ನಡೆದಿರುವುದು ತುಂಬಾ ಕಡಿಮೆ. ಹೀಗಾಗಿ ನಾಣ್ಣುಡಿಗಳ ಕುರಿತಾಗಿ ಭಾಷಿಕ ಹಿನ್ನೆಲೆಯಲ್ಲಿ ಆಧುನಿಕ ತಂತ್ರಜ್ಞಾನದ ಪ್ರಭಾವದಿಂದಾಗಿ ಹಿಂದಿನ ನಾಣ್ಣುಡಿಗಳಿಗೂ ಮತ್ತು ಪ್ರಸುತ್ತ ಆಧುನಿಕ ತಂತ್ರಜ್ಞಾನದ ಪ್ರಭಾವದಿಂದಾಗಿ ರೂಪಗೊಂಡ ನಾಣ್ಣುಡಿಗಳಿಗೂ ಇರುವ ವಿಶಿಷ್ಟತೆಯನ್ನು ಕುರಿತು ಅದರಲ್ಲಿಯೂ ೧೮ ನೇ ಶತಮಾನದಲ್ಲಿ ಯುರೋಪಿನಲ್ಲಾದ ಕೈಗಾರಿಕಾ ಕ್ರಾಂತಿಯಿಂದಾಗಿ ಭಾಷೆಗಳ ಮೇಲೆ ಅನೇಕ ಪ್ರಭಾವ ಬೀರಿ ಬದಲಾವಣೆಯಾದಂತೆ ಮಾನವ ತಾನು ಶ್ರಮವಹಿಸಿ ಮಾಡುವ ಕೆಲಸಗಳನ್ನು ಯಂತ್ರಗಳಿಂದ ಮಾಡಲು ಶುರು ಮಾಡಿದ್ದೇ ಇದಕ್ಕೆ ಕಾರಣವೆನ್ನಬಹುದು. ಹೀಗಾಗಿ ಆಧುನಿಕ ಯುಗದಲ್ಲಿ ಮಾನವ ಯಂತ್ರಗಳನ್ನು ಬಳಸಿ ಯಂತ್ರಮಾನವನಾದ ಅದರಲ್ಲಿ ಪ್ರತಿಯೊಂದು ಯಂತ್ರಗಳಿಂದ ಹೊಸದೊಂದನ್ನು ಹುಡುಕುವ ಪ್ರವೃತ್ತಿ ಪ್ರತಿಯೊಬ್ಬರಲ್ಲಿ ಕುತೂಹಲ ಕೆರಳಿಸಿತು. ಆದ್ದರಿಂದಾಗಿ ಆಧುನಿಕತೆಯ ಹಿನ್ನೆಲೆಯಲ್ಲಿ ರೂಪಗೊಂಡ ನಾಣ್ಣುಡಿಗಳು: ಭಾಷಿಕ ಅಧ್ಯಯನ ಎಂಬ ವಿಷಯವನ್ನು ಕುರಿತು ಅಧ್ಯಯನ ಮಾಡಲು ಆಸಕ್ತಿದಾಯಕವಾಗಿರುವುದರಿಂದಾಗಿ ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ. ನಾಣ್ಣುಡಿಗಳು ಆಧುನಿಕತೆಯನ್ನು ಒಳಗೊಂಡು ತಂತ್ರಜ್ಞಾನ ಯುಗದಲ್ಲಿ ತನ್ನದೇ ಆದ ಚಾಪು ಮೂಡಿಸಿವೆ. ಆಧುನಿಕ ತಂತ್ರಜ್ಞಾನದ ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್, ವ್ಯಾಟ್ಸಪ್, ಟ್ವಿಟ್ಟರ್, ಇನ್ನು ಮುಂತಾದ ಸಾಮಾಜಿಕ ಜಾಲತಾಣಗಳು ಮಾನವ ಸಮಾಜದ ಮೇಲೆ ತುಂಬಾ ಪ್ರಭಾವ ಬೀರಿವೆ. ಇಂತಹ ಆಧುನಿಕ ತಂತ್ರಜ್ಞಾನಕ್ಕೆ ಮಾನವ ಬಹುಬೇಗ ಹೊಂದಿಕೊಂಡಂತೆ ಮಾನವನ ಭಾಷೆ ಸಹಜವಾಗಿ ಬದಲಾವಣೆಯಾಗುವ ಪ್ರಕ್ರಿಯೆ ನಡೆದು ಹೋಗುತ್ತದೆ. ಹಾಗೆಯೇ ನಿತ್ಯ ಜೀವನದಲ್ಲಿ ಬಳಸುವ ನುಡಿಗಟ್ಟುಗಳಲ್ಲಿ ಮತ್ತು ನಾಣ್ಣುಡಿಗಳಲ್ಲಿ ಬದಲಾವಣೆಯಾಗಿರುವುದು ಕಂಡುಬರುತ್ತದೆ. ಹಾಗಾಗಿ ಬದಲಾದ ಸಮಾಜದಲ್ಲಿ ಜನರು ಬಳಸುವ ಭಾಷೆ ಮತ್ತು ನುಡಿಗಟ್ಟುಗಳು, ನಾಣ್ಣುಡಿಗಳು ಭಿನ್ನತೆಯಿಂದ ಕೂಡಿರುತ್ತವೆ.

ಇಲ್ಲಿ ಹಿಂದಿನ ತಲೆಮಾರಿನ ನಾಣ್ಣುಡಿಗಳಿಗೂ ಮತ್ತು ಈಗಿನ ನಾಣ್ಣುಡಿಗಳಿಗೂ ಇರುವ ವ್ಯತ್ಯಾಸವೇನು? ಎಂಬುದನ್ನು ಕುರಿತು ಚರ್ಚಿಸಲಾಗಿದೆ. ಈಗಿನ ನಾಣ್ಣುಡಿಗಳು ಕೇವಲ ಬದಲಾದ ಸಮಾಜದ ನಡುವೆ ಕೆಲಕಾಲ ಬೆಳಕಿಗೆ ಬಂದು ಮಾರೆಯಾಗಬಹುದು ಆದರೆ ಹಿಂದಿನ ಕಾಲದ ನಾಣ್ಣುಡಿಗಳು ಎಂದಿಗೂ ತನ್ನ ಮಹತ್ವವನ್ನು ಕಳೆದುಕೊಳ್ಳುವುದಿಲ್ಲ.

ಮಾನವನಿಗೆ ಆಲೋಚನಾ ಶಕ್ತಿಯಿರುವುದರಿಂದ ಆತ ಬೇರೆಲ್ಲ ಪ್ರಾಣಿಗಳಿಗಿಂತ ಭಿನ್ನವೆನಿಸಿಕೊಂಡಿದ್ದಾನೆ. ಇಂತಹ ಆಲೋಚನಾ ಶಕ್ತಿಯೇ ಸಂವಹನಕ್ಕೆ ದಾರಿ ಮಾಡಿಕೊಟ್ಟಿದೆ. ಹಾಗಾಗಿ ತನ್ನ ಅನುಭವಗಳನ್ನು, ಭಾವನೆಗಳನ್ನು ವ್ಯಕ್ತಪಡಿಸಿ ಬೇರೋಬ್ಬರಿಗೆ ತಿಳಿಹೇಳುವುದಕ್ಕೆ ನಾಣ್ಣುಡಿಗಳು ಅವಶ್ಯಕ. ಆದ್ದರಿಂದಲೇ ಮಾನವ ಸಮಸಮಾಜದ ನಡುವೆ ತಂತ್ರಜ್ಞಾನದ ವೇಗದಂತೆ ಮುಂದುವರೆಯುತ್ತಾ ಸಾಗುತ್ತಾನೆ. ಆದ್ದರಿಂದಲೇ ಭಾಷೆ, ಸಮಾಜ, ಸಂಸ್ಕೃತಿ, ಮಾನವ ತಂತ್ರಜ್ಞಾನ ಯುಗದ ಮಧ್ಯ ಸಾಗುತ್ತದೆ. ಇಲ್ಲಿ ಜನರು ಆಡು ಮಾತಿನಲ್ಲಿ ಬಳಕೆ ಮಾಡುವ ಸಂದರ್ಭದಲ್ಲಿ ಕಂಡು ಬರುವ ಹೊಸ ತಲೆಮಾರಿನ ನಾಣ್ಣುಡಿಗಳನ್ನು ಹೇಗೆ ಸಾಮಾನ್ಯ ಜನರು ತಂತ್ರಜ್ಞಾನ ಯುಗಕ್ಕೆ ಒಳಪಡಿಸಿ ಹೊಸ ನಾಣ್ಣುಡಿಗಳನ್ನು ಬಳಕೆ ಮಾಡುತ್ತಾರೆ ಎಂಬುದನ್ನು ಮನಗಾಣಬಹುದು. ಆಧುನಿಕ ಯುಗಕ್ಕೆ ಹೊಂದಿಕೊಂಡು ರಚನೆಯಾಗಿ ಬದಲಾದ ಸಮಾಜದಲ್ಲಿ ಹೇಗೆ ರೂಪಗೊಂಡಿವೆ ಎಂಬುದನ್ನು ಚರ್ಚಿಸಲಾಗಿದೆ.

### ೧.೨. ಅಧ್ಯಯನದ ವ್ಯಾಪ್ತಿ:

ಯಾವುದೇ ಅಧ್ಯಯನವು ಒಂದು ನಿರ್ದಿಷ್ಟವಾದ ವ್ಯಾಪ್ತಿಯನ್ನು ಒಳಗೊಂಡಿರುತ್ತದೆ. ಇಲ್ಲದಿದ್ದರೆ ಮುಖ್ಯ ವಿಷಯದ ಇಡೀ ಭಾಗ ಅರ್ಥವಾಗುವುದಿಲ್ಲ ಹಾಗಾಗಿ ಅಧ್ಯಯನಕ್ಕೆ ವ್ಯಾಪ್ತಿ ಬಹಳ ಮುಖ್ಯ. ಪ್ರಸುತ್ತ ಆಧುನಿಕ ಹಿನ್ನೆಲೆಯಲ್ಲಿ ರೂಪಗೊಂಡ ನಾಣ್ಣುಡಿಗಳು : ಭಾಷಿಕ ಅಧ್ಯಯನ ಎಂಬ ವಿಷಯವು ಆಧುನಿಕ ಸಂದರ್ಭದಲ್ಲಿನ ನಾಣ್ಣುಡಿಗಳಿಗೆ ಹೋಲಿಕೆಯಾಗುವಂತೆ ಆಧುನಿಕ ಭಾಷೆಯ ಕೆಲವು ಪ್ರಾಸಬದ್ಧ ಪದಗಳನ್ನು ಸೇರಿಸಿ ಜೋಡಣೆ ಮಾಡಿ ಅವುಗಳ ಅರ್ಥಗರ್ಭಿತ ಆಧುನಿಕ ವಿಷಯವನ್ನು ನಿರೂಪಿಸುವುದಾಗಿದೆ. ಹಾಗಾಗಿ ಪ್ರಸ್ತಕ ಅಧ್ಯಯನದ ವ್ಯಾಪ್ತಿ ಸುಮಾರು ೧೮-೧೯ ನೇ ಶತಮಾನದಿಂದ ಪ್ರಸ್ತುತ ಕಾಲದವರೆಗೂ ಹೊಂದಿದೆ. ಆದರೂ ಪ್ರಸ್ತುತ ಪದಗಳನ್ನು ಬಳಕೆಮಾಡುವುದರ ಹಿನ್ನೆಲೆಯಲ್ಲಿ ಪ್ರಾಚೀನ ಜಾನಪದ ಭಾಷೆಯನ್ನು ಗಮನಿಸುವುದು ಮುಖ್ಯವಾಗಿರುತ್ತದೆ.

### ೧.೩. ಅಧ್ಯಯನದ ವಿಧಾನ:

"ಆಧುನಿಕತೆಯ ಹಿನ್ನೆಲೆಯಲ್ಲಿ ರೂಪಗೊಂಡ ನಾಣ್ಣುಡಿಗಳು: ಭಾಷಿಕ ಅಧ್ಯಯನ" ಎಂಬ ವಿಷಯ ಕುರಿತು ಇದುವರೆಗೂ ಯಾವುದೇ ಅಧ್ಯಯನ ನಡೆದಿಲ್ಲ. ಇಲ್ಲಿನ ನಾಣ್ಣುಡಿಗಳು ಆಧುನಿಕ ಜಗತ್ತಿಗೆ ಮಾದರಿಯಾಗಿರುತ್ತವೆ. ಇವುಗಳ ಅಧ್ಯಯನದಿಂದ ಮಹತ್ವಪೂರ್ಣವಾದ ಮಾಹಿತಿಯನ್ನು ಸಂಗ್ರಹಿಸಬಹುದು. ಜೊತೆಗೆ ಹೊಸ ಮಾದರಿಯ

ನಾಣ್ಣುಡಿಗಳು ಬೆಳಕಿಗೆ ತರುವ ಕೆಲಸ ಮಾಡಲಾಗುತ್ತದೆ. ಆಧುನಿಕತೆಯ ಹಿನ್ನೆಲೆಯಲ್ಲಿ ರೂಪಗೊಂಡ ನಾಣ್ಣುಡಿಗಳು ಭಿನ್ನ ಹಾಗೂ ವಿಶಿಷ್ಟತೆಯಿಂದ ಕೂಡಿವೆ. ಹೀಗಿರುವಾಗ ಈ ನಾಣ್ಣುಡಿಗಳ ಬಳಕೆ ಮತ್ತು ಭಾಷಿಕತೆಯನ್ನು ಕುರಿತು ಅಧ್ಯಯನವನ್ನು ಮಾಡಲಾಗಿದೆ. ಈ ನಾಣ್ಣುಡಿಗಳನ್ನು ದಿನನಿತ್ಯ ಬಳಕೆ ಮಾಡುವ ಸಾಮಾಜಿಕ ಜಾಲತಾಣಗಳಾದ ವ್ಯಾಟ್ಸಪ್, ಫೇಸ್‌ಬುಕ್, ಮತ್ತು ಇನ್ನಿತರ ದಿನಪತ್ರಿಕೆಗಳ ಮೂಲಕ ಮಾಹಿತಿಯನ್ನು ಸಂಗ್ರಹಿಸಿ ವಿಶ್ಲೇಷಣಾತ್ಮಕ ವಿಧಾನದ ಮೂಲಕ ಅಧ್ಯಯನ ಮಾಡಲಾಗಿದೆ.

**೧.೪. ಅಧ್ಯಯನದ ಸ್ವರೂಪ:**

ಅಧ್ಯಯನದ ಉದ್ದೇಶಕ್ಕನುಗುಣವಾಗಿ ಆಧ್ಯಾಯಗಳನ್ನು ಈ ರೀತಿ ವರ್ಗೀಕರಿಸಿದೆ.

**ಅಧ್ಯಾಯ : ಒಂದು : ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಸ್ವರೂಪ**

ಈ ಅಧ್ಯಯನದ ಉದ್ದೇಶ, ವ್ಯಾಪಿ ಮತ್ತು ವಿಧಾನವನ್ನು ಸ್ಪಷ್ಟವಾಗಿ ನಿರೂಪಿಸಲಾಗಿದೆ. ಅಧ್ಯಯನದ ಸ್ವರೂಪ ಭಾಗದಲ್ಲಿ ಅಧ್ಯಯನಕ್ಕೆ ಪೂರಕವಾಗಿ ಅಧ್ಯಾಯಗಳನ್ನು ಸಂಕ್ಷಿಪ್ತವಾಗಿ ಅರ್ಥೈಸಿಕೊಳ್ಳಲಾಗಿದೆ.

**ಅಧ್ಯಾಯ : ಎರಡು : ನಾಣ್ಣುಡಿಗಳ ರಚನೆಯ ಹಿನ್ನಲೆ (ಹುಟ್ಟು ಮತ್ತು ಬೆಳವಣಿಗೆ)**

ಈ ಅಧ್ಯಾಯದಲ್ಲಿ ನಾಣ್ಣುಡಿಗಳ ಹುಟ್ಟು ಮತ್ತು ಬೆಳವಣಿಗೆಗೆ ಸಂಬಂಧಿಸಿದಂತೆ ನಾಣ್ಣುಡಿಗಳು ಹೇಗೆ ರೂಪಗೊಂಡವು. ಅವು ಜನಸಾಮಾನ್ಯರ ಬಾಯಲ್ಲಿ ಹೇಗೆ ಬಳಕೆಯಾಗುತ್ತವೆ ಎಂಬುದನ್ನು ಅಧ್ಯಯನದಲ್ಲಿ ವಿಶ್ಲೇಷಣೆ ಮಾಡಲಾಗಿದೆ.

**ಆಧ್ಯಾಯ : ಮೂರು : ನಾಣ್ಣುಡಿಗಳು : ಒಳನುಡಿಗಳಲ್ಲಿ ಬಳಕೆ**

ಈ ಅಧ್ಯಾಯದಲ್ಲಿ ಒಳನುಡಿಗಳಲ್ಲಿ ನಾಣ್ಣುಡಿಗಳು ಹೇಗೆ ಬಳಕೆಯಾಗುತ್ತವೆ ಎಂಬುದನ್ನು ಸಾಮಾಜಿಕ, ಸಾಹಿತ್ಯಕ, ಭಾಷಿಕ ಮತ್ತು ಸಾಂಸ್ಕೃತಿಕ ಎಂಬ ನಾಲ್ಕು ಉಪಶೀರ್ಷಿಕೆಗಳನ್ನು ಅಳವಡಿಸಿಕೊಂಡು ಅಧ್ಯಯನದಲ್ಲಿ ಚರ್ಚಿಸಲಾಗಿದೆ.

**ಆಧ್ಯಾಯ : ನಾಲ್ಕು : ಆಧುನಿಕ ನಾಣ್ಣುಡಿಗಳು: ಭಾಷಿಕ ಚಿಂತನೆ**

ಆಧುನಿಕ ನಾಣ್ಣುಡಿಗಳು : ಭಾಷಿಕ ಚಿಂತನೆಯ ಅಡಿಯಲ್ಲಿ ಆಧುನಿಕ ನಾಣ್ಣುಡಿಗಳಲ್ಲಿ ಭಾಷಿಕತೆಯನ್ನು ಕುರಿತು ಕೂಲಂಕುಶವಾಗಿ ಈ ಅಧ್ಯಯನದಲ್ಲಿ ವಿವರಿಸಲಾಗಿದೆ.

**ಅಧ್ಯಾಯ : ಐದು: ಆಧುನಿಕ ತಂತ್ರಜ್ಞಾನದಲ್ಲಿ ನಾಣ್ಣುಡಿಗಳ ಬಳಕೆ**

ಈ ಅಧ್ಯಾಯದಲ್ಲಿ ಆಧುನಿಕ ತಂತ್ರಜ್ಞಾನದ ಮುಖಾಂತರ ನಾಣ್ಣುಡಿಗಳು ಹೇಗೆ ಬಳಕೆಯಾಗಿವೆ ಮತ್ತು ದೇಶಿಯ ಪದಗಳಿಂದಲ್ಲೇ ಆಧುನಿಕತೆಗೆ ಅನುಗುಣವಾಗಿ ಹೊಸ ನಾಣ್ಣುಡಿಗಳು ಹೇಗೆ ರೂಪಗೊಂಡಿವೆ ಎಂಬುದನ್ನು ಆಧುನಿಕತೆಯ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ.

**ಆಧ್ಯಾಯ : ಆರು : ಸಮಾರೋಪ**

ಸಮಾರೋಪ ಮತ್ತು ಅಧ್ಯಯನದ ಫಲಿತಗಳನ್ನು ಕಂಡುಕೊಳ್ಳಲಾಗಿದ್ದು ಜೊತೆಗೆ ಅನುಬಂಧದಲ್ಲಿ ಆಕರ ಗ್ರಂಥಗಳು ಮತ್ತು ಪಾರಿಭಾಷಿಕ ಪದಗಳ ಪಟ್ಟಿಯನ್ನು ನೀಡಲಾಗಿದೆ.

## ಅಧ್ಯಾಯ : ಎರಡು

## ನಾಣ್ಣುಡಿಗಳ ಹುಟ್ಟು ಮತ್ತು ಬೆಳವಣಿಗೆ

ಜನಪದ ಸಾಹಿತ್ಯ ಪ್ರಕಾರಗಳಲ್ಲೆಲ್ಲ ನಾಣ್ಣುಡಿಯೇ ಅತ್ಯಂತ ಜನಪ್ರಿಯವಾದುದು. ಮಾನವ ಸಮಾಜದಲ್ಲಿ ಇದರಷ್ಟು ವ್ಯಾಪಕವಾದ ಪ್ರಭಾವಶಾಲಿಯಾದ, ಆಕರ್ಷಣೀಯಾವಾದ, ಪ್ರಯೋಜನಕಾರಿಯಾದ ಸಾಹಿತ್ಯಪ್ರಕಾರ ಮತ್ತೊಂದಿಲ್ಲ. ಕಳ್ಳ–ಸುಳ್ಳ, ಜ್ಞಾನಿ–ಅಜ್ಞಾನಿ, ನಿರಕ್ಷರ–ಸಾಕ್ಷರ, ವೈದಿಕ–ಅವೈದಿಕ, ಸಾಮಾನ್ಯ–ಮಹಾಮಾನ್ಯ, ಕಾರ್ಮಿಕ–ಮಾಲೀಕ, ಕವಿ–ಪಂಡಿತ, ಬಡವ–ಬಲ್ಲಿದ, ಆಳು–ಅರಸು, ಮೇಲು–ಕೀಳು ಎಂಬ ತಾರತಮ್ಯವಿಲ್ಲದೆ ಅದು ಸರ್ವಮಾನವರ ಬಾಳನ್ನು ಪ್ರವೇಶಿಸುತ್ತದೆ. ಗೀತೆ, ಕತೆ, ಲಾವಣಿ ಮೊದಲಾದವುಗಳ ವಾಸನೆಯ ಸೊಂಕೇ ಇಲ್ಲದ ಗ್ರಾಮೀಣ ಮುಗ್ಧನ ಸ್ಮೃತಿಕೋಶದಲ್ಲಿ ನೂರಾರು ನಾಣ್ಣುಡಿಗಳು ಸುರಕ್ಷಿತವಾಗಿರುತ್ತವೆ, ಅದೇ ಅವನ ಸಾರಸತ್ವ ಸಂಪತ್ತು, ಯಾವ ಅಂತಸ್ತಿನ ಜನರೇ ಆಗಲಿ, ಮಾತುಕತೆಗಳಲ್ಲಿ, ಉಪದೇಶಗಳಲ್ಲಿ, ಬೋಧನೆಯಲ್ಲಿ, ಚರ್ಚೆಯಲ್ಲಿ, ಬರಹಗಳಲ್ಲಿ, ಭಾಷಣಗಳಲ್ಲಿ, ಭಾಷೆ ಬಳಸುವ ಕಡೆಯಲ್ಲೆಲ್ಲ ನಾಣ್ಣುಡಿಗಳನ್ನು ಬಳಸುತ್ತಾರೆ. ಹೀಗಾಗಿ ಒಂದು ಜನಾಂಗದ ಅನುಭವ ಸಂಪತ್ತಿಗೆ, ಒಂದು ಭಾಷೆಯ ಕಸುವುಗಳಿಗೆ ಮತ್ತು ಸಾರಸತ್ವಗಳಿಗೆ ಸಂಬಂಧಿಸಿದಂತೆ ಸಂಗ್ರಹಗೊಂಡಿರುವ ನಾಣ್ಣುಡಿಗಳ ನಿಧಿಯೇ ಸಾಕ್ಷಿಯಾಗಿರುತ್ತದೆ.

ನಾಣ್ಣುಡಿಗಳು ಹಲವರ ಅನುಭವಗಳು. ವ್ಯಷ್ಟಿ ಸೃಷ್ಟಿಗಳಾದರೂ ಸಮಷ್ಟಿ ಪ್ರಜ್ಞೆವುಳ್ಳವುಗಳು. ಹೀಗಾಗಿ ಒಂದು ನಾಣ್ಣುಡಿಯನ್ನು ತನ್ನದೆಂಬಂತೆ ಪ್ರತಿಯೊಬ್ಬ ಶ್ರೀಸಾಮಾನ್ಯನೂ ಬಳಸುತ್ತಾನೆ. ಅದಕ್ಕಾಗಿಯೆ ನಾಣ್ಣುಡಿಯೂ ಹಲವರ ಸೊತ್ತು ಎನಿಸುತ್ತದೆ. ಸಾರ್ವಜನಿಕ ಮುದ್ರೆಯೊತ್ತಿಸಿಕೊಂಡ ಅದು ಶ್ರೀಸಾಮಾನ್ಯನ ನಾಲಗೆಯ ಮೇಲೆ ಸಹಜವಾಗಿ ಹರಿದಾಡುತ್ತಿರುತ್ತದೆ. ಇಲ್ಲಿ ನಾಣ್ಣುಡಿಗಳಿಗೂ ಅಧಿಕಾರಕ್ಕೂ ಅಜಗಜಾಂತರ. ನಾಣ್ಣುಡಿ ಹೀಗೆ ಮಾಡು ಎಂದು ಒತ್ತಿ ಹೇಳಿ ಬೇಲಿ ಹಾಕುವುದಿಲ್ಲ. ಬದಲಾಗಿ ತಾನೊಂದು ಅನುಭವವನ್ನು ಸಾರಿ ಹೇಳುತ್ತವೆ. ಹೋತ್ತಾಯಿಸುವ ಬದಲು ವಿನಂತಿಸಿಕೊಳ್ಳುತ್ತದೆ. ನಾಣ್ಣುಡಿಗಳು ಅಭಿಪ್ರಾಯಗಳನ್ನು ವ್ಯಕ್ತಪಡಿಸುವಲ್ಲಿ ಕೊಂಕುಆಡಬಹುದು, ಚುಚ್ಚಿನುಡಿಯಬಹುದು, ಓರೆಕೋರೆಗಳನ್ನು ಗುರುತಿಸಬಹುದು.

ಆದರೆ ಒತ್ತಾಯ ಹೇರಲಾರದು ಹಾಗೂ ತನ್ನದೇ ಸರಿತೆಂದು ಸಾರಲಾರದು. ಹೀಗೆ ನಡೆಯಬೆಂಕೆಂದು ಆಜ್ಞೆ ಮಾಡಲಾರದು. ಹಾಗಾಗಿ ಆಯ್ಕೆಯನ್ನು ನಾಣ್ಣುಡಿಗಳ ಬಳಸುವವರಿಗೆ ಬಿಟ್ಟುಕೊಡುತ್ತದೆ. ಇದು ನಾಣ್ಣುಡಿಯ ಬಹು ದೊಡ್ಡಗುಣ ಈ ಗುಣ ಜನಪದ ಸಾಹಿತ್ಯದ ಇತರೆ ಪ್ರಕಾರಗಳಿಗೆ ಬರಲಾರದು. ಉದಾಹರಣೆಗೆ ಸುಭಾಷಿತಗಳು ಹೇಳಿದವನ ದೊಡ್ಡತನವನ್ನು ಎತ್ತಿತೋರಿಸಿದರೆ, ನಾಣ್ಣುಡಿಗಳು ತನ್ನಂತೆ ಅಸುಸರಿಸುವವನ ಗುಣಗಳನ್ನು ವೃದ್ಧಿಪಡಿಸುತ್ತವೆ. ಊಟಕ್ಕೆ ಮೊದಲು ಒಂದು ತುತ್ತನ್ನು ಪ್ರಾಣಿಗಳಿಗೆ ಹಾಕು, ಉಪ್ಪುಂಡ ಮನೆಗೆ ಎರೆಡು ಬಗೆಯಬೇಡ, ತೆರೆದಲ್ಲಿ ಮುಚ್ಚು ನೆರೆದಲ್ಲಿ ಹೋಗು ಕರೆದಲ್ಲಿ ಉಣ್ಣು ಈ ಮುಂತಾದ ಮೂಢ ಮನೋಭಾವನೆಗಳನ್ನು ನಿರ್ವಹಿಸಿ ಪಾಲಿಸಿದಂತೆ ಹಿತವಚನ ಮತ್ತು ಸುಭಾಷಿತಗಳೊಂದಿಗೆ ತತ್ವಶಾಸ್ತ್ರ ಮತ್ತು ನೀತಿಶಾಸ್ತ್ರಗಳು ಸಹ ಭೋದಿಸುತ್ತವೆ. ಆದರೆ ನಾಣ್ಣುಡಿಗಳು ಆದರ್ಶವಾದಿಯಲ್ಲ, ವಾಸ್ತವವಾದಿ. ಜೀವನವೇ ಅದರ ರಂಗಸಜ್ಜಿಕೆ, ಹಾಸು ಹೊಚ್ಚು, ಹೂರಣ ಹೊದಿಕೆ ಎಲ್ಲ. ಅದು ಆಕಾಶದೆಡೆ ಬಾಯಿ ತೆರೆಯುವುದಕ್ಕಿಂತ ಭೂಮಿಯೊಡನೆ ಕೈ ಚಾಚುತ್ತದೆ. ಹಾಗೂ ತತ್ವಶಾಸ್ತ್ರ ಮತ್ತು ನೀತಿಶಾಸ್ತ್ರಗಳನ್ನು ಮೀರಿ ನಿಲ್ಲುತ್ತದೆ. ಅದಕ್ಕಾಗಿ ಹಿತವಚನಗಳಾಗಲಿ, ಸುಭಾಷಿತಗಳಾಗಲಿ ಎಂದೂ ನಾಣ್ಣುಡಿಗಳನ್ನು ಸರಿಗಟ್ಟಲಾರವು.

ನಾಣ್ಣುಡಿ ವೇದಕ್ಕೆ ಸಮಾನ ಎಂಬ ಬಹುಜನವೇದ್ಯವಾದ ನಾಣ್ಣುಡಿಯೂ ಉಂಟು. ವೇದ ಎಂಬುದೊಂದು ಪ್ರವಿತ್ರ ಗ್ರಂಥ, ಆ ಅರ್ಥದಲ್ಲಿ ಈ ಮಾತನ್ನು ಬೈಬಲ್ಲು ಕೂರಾನುಗಳಿಗೂ ಅನ್ವಯಿಸಬಹುದು. ಅದು ಪ್ರಭು ಸಮ್ಮಿತ ವಿಧಾನದಲ್ಲಿ ಜನತೆಯನ್ನು ತಿದ್ದುತ್ತದೆಂದು ಹಿರಿಯರು ಹೇಳುವುದುಂಟು. ಆಯಾಯ ಜನಾಂಗಗಳನ್ನು ರೂಪಿಸುವುದರಲ್ಲಿ ಈ ಪವಿತ್ರ ಗ್ರಂಥಗಳ ಪಾತ್ರ ಮಹತ್ವಪೂರ್ಣವಾದದ್ದು ಸರ್ವ ಶ್ರೇಷ್ಠವಾದದ್ದು, ವೇದದಂತೆಯೆ ಅದು ನೀತಿಪ್ರಧಾನವಾದ ಉಪದೇಶಾತ್ಮಕವಾದ ಸತ್ಯನಿಷ್ಠವಾದ ರಚನೆ; ಅದರಂತೆಯೇ ಸನಾತವೂ ಪ್ರಭಾವಯುತವೂ ಸರ್ವಜ್ಞನ ಸಮ್ಮತವೂ ಆದ ವಾಙ್ಮಯ. ಒಂದು ದೃಷ್ಟಿಯಿಂದ ಅದು ವೇದಕ್ಕಿಂತ ಮಿಗಿಲಾದದ್ದು, ವ್ಯಾಪಕವಾದದ್ದು, ವೇದ ಕೆಲವರ ಸ್ವತ್ತಾದರೆ ನಾಣ್ಣುಡಿ ಸಕಲರ ಸ್ವತ್ತು, ಅಷ್ಟೇ ಅಲ್ಲ, 'ವೇದ ಸುಳ್ಳಾದರೂ ನಾಣ್ಣುಡಿ ಸುಳ್ಳಾಗದು' ಎಂಬ ಲೋಕೋಕ್ತಿ ನಾಣ್ಣುಡಿಗೆ ಅಗ್ರಸ್ಥಾನ ನೀಡುತ್ತದೆ. ವೇದ ಕಾಲ ಕಳೆದಂತೆ ಸಹಜ ಬದಲಾವಣೆ ಹೊಂದಿದಂತೆ ಸವಕಲಾಗುವ ನಾಣ್ಯ; ನಾಣ್ಣುಡಿ ಬಳಸಿದಷ್ಟೂ ಹೊಳಪಾಗುವ, ಪುರಾತನವಾದಷ್ಟೂ ಬಹುಮಾನ್ಯತೆಯನ್ನು ಪಡೆಯುವ ಅಪ್ಪಟ ಚಿನ್ನ. ಕೆಲವೇ ಕೆಲವು ಅರ್ಥಗರ್ಭಿತವಾದ ಮಾತುಗಳುಳ್ಳ ಚಿಕ್ಕದ್ದೂ ಚೊಕ್ಕವಾದದ್ದೂ ಆದ ವಾಕ್ಯವೇ ನಾಣ್ಣುಡಿ, ಅಲ್ಲಿಯ ಮಾತು ಮಿತವಾಗಿರಬೇಕು ಹಿತವಾಗಿರಬೇಕು ಹೊಳಪಾಗಿರಬೇಕು. ಅನವಶ್ಯ ಪದವಾಗಲಿ ಪ್ರತ್ಯಯವಾಗಲಿ ಅಲ್ಲಿ ಪ್ರವೇಶಿಸಕೂಡದು. ಹದಿನೈದು ಅಥವಾ ಇಪ್ಪತ್ತು ಪದಗಳಿಗಿಂತ ಅವು ಹೆಚ್ಚಾಗಿರಬಾರದೆಂದು ಕೆಲವರು ಅಭಿಪ್ರಾಯಪಟ್ಟಿರುವುದೂ ಉಂಟು. ಅವು ಪದ್ಯದಂತೆ ಲಯಬಂಧ ಪ್ರಾಸಗಳುಳ್ಳದ್ದು; ಗದ್ಯದಂತೆ ಗಣನಿಯಮವಿಲ್ಲದ್ದು. ಹರಿವುಳ್ಳದ್ದು, ಸ್ಪಷ್ಟತೆಯುಳ್ಳದ್ದು. ಈ ಎರಡೂ ಪ್ರಕಾರಗಳ ಗುಣಲಕ್ಷಣಗಳನ್ನೊಳಗೊಂಡಿರುವ ವಿಶಿಷ್ಟ

ಪ್ರಕಾರವದು. ಅದು ವಚನದಂತಿರುವುದು ಮಾತ್ರವಲ್ಲ, ವಚನ ತ್ರಿಪದಿಗಳಿಗೆ ಮೂಲವೆಂದರೂ ಸಲ್ಲುತ್ತದೆ. ಅದೆಂತು ಶ್ರೇಷ್ಠ ಗದ್ಯವಾಗಬಹುದೋ ಅಂತೆಯೇ ಸುಂದರ ಮುಕ್ತಕ ಅಥವಾ ಬಿಡಿಗವಿತೆಯಾಗಬಹುದು. ಅದರ ಭಾಷೆ ಸೂತ್ರಪ್ರಾಯವಾದುದು. ಅದು ಗಾತ್ರದಲ್ಲಿ ವಾಮನನಂತಿದ್ದರೂ, ಅರ್ಥವ್ಯಾಪ್ತಿಯಲ್ಲಿ ತ್ರಿವಿಕ್ರಮನಂತೆ. ಅದರಲ್ಲಿ ಮೊನಚು, ಖಾರ, ಬಿಗಿ, ಸವಿ, ನುಣ್ಣು, ಗುಣ್ಪು, ಬಿಣ್ಪು, ಕಂಪು ಎಲ್ಲ ರೀತಿಯ ಶಬ್ದಗುಣಗಳು ಯಥೇಚ್ಛವಾಗಿ ದೊರೆಯುತ್ತವೆ. ಪ್ರಾಸಾನುಪ್ರಾಸಾದಿ ಶಬ್ದಾಲಂಕಾರಗಳೂ, ಛಂದೋಲಕ್ಷಣಗಳೂ, ಉಪಮಾರೂಪಕಾದಿ ಅರ್ಥಾಲಂಕಾರಗಳೂ, ಪ್ರತಿಮಾ ಸಾಂಕೇತಿಕಾದಿ ಅರ್ಥವಿಧಾನಗಳೂ ಧ್ವನಿಶಕ್ತಿಯೂ, ತಲೆಕೆಳಗಾದ ವಾಕ್ಯ ರಚನೆಯೂ ಅಲ್ಲಿ ಯಥೋಚಿತವಾಗಿ ಗೋಚರಿಸುತ್ತವೆ.

"ನಾಣ್ಣುಡಿಗಳೆಂದರೆ ಜನಸಾಮಾನ್ಯರಲ್ಲಿ ಚಲಾವಣೆಯಲ್ಲಿರುವ, ಸಾರ್ವಜನಿಕ ಮುದ್ರೆ ಬಿದ್ದಿರುವ, ಪ್ರಚಲಿತವೂ ಸ್ವೀಕೃತ ಮೌಲ್ಯಭರಿತವೂ ಆಗಿರುವ ನಾಣ್ಯ. ಇದನ್ನು ಇನ್ನೂ ಸಂಕ್ಷಿಪ್ತವಾಗಿ ಹೇಳುವುದಾದರೆ, ಜನತೆಯ ಕೌಟುಂಬಿಕ ಪದವೇ ನಾಣ್ಣುಡಿಯೆನಿಸಿಕೊಳ್ಳುತ್ತದೆ". ಇದು ಇಸೆಲಿಯನ್ ಎಂಬ ಜರ್ಮನ್ ಗಾದೆಗಳ ಸಂಗ್ರಹಕಾರನ ನಿರೂಪಣೆ. ಎಸ್.ಜಿ. ಚಾಂಪಿಯನ್ ಈ ಬಗ್ಗೆ ಆಡಿರುವ ಮಾತುಗಳಿವು; "ನನ್ನ ಅಭಿಪ್ರಾಯದಲ್ಲಿ ನಾಣ್ಣುಡಿಗಳೆಂದರೆ, ಜನಬಳಕೆಯಲ್ಲಿದ್ದು, ಈಗಲೂ ಇರುವ, ಉಪದೇಶಾತ್ಮಕ ಅಥವಾ ಸಲಹೆಯನ್ನು ನೀಡುವ, ನಿಜವಾದ ಅರ್ಥವನ್ನೂ ಮರೆಸಿ ಅಲಂಕಾರಿಕವಾಗಿ ವ್ಯಕ್ತವಾಗಿರುವ ರೂಪಕ ಅಥವಾ ಗೂಢಾರ್ಥದ್ಯೋತಕವಾಗಿ ರೂಪ ಬದಲಿಸಿ ಕಾಣಿಸಿಕೊಳ್ಳುವ ಜನಾಂಗವೊಂದರ ಸೂಕ್ತಿಯೇ ಆಗಿದೆ". " ಒಂದು ರಾಷ್ಟ್ರದ ಪ್ರತಿಭೆ, ಬುದ್ಧಿ ಚಮತ್ಕಾರ ಮತ್ತು ಸತ್ವಗಳನ್ನು ಅದರ ನಾಣ್ಣುಡಿಗಳಲ್ಲಿ ಕಾಣಬಹುದು" ಎಂದು ಬೇಕನ್ ಹೇಳಿದ ಮಾತು ಉತ್ಪ್ರೇಕ್ಷೆಯಲ್ಲ"[೧]

ಮೇಲಿನ ಅಭಿಪ್ರಾಯಗಳನ್ನು ವಿಶ್ಲೇಷಿಸುವಾಗ, ನಾಣ್ಣುಡಿ ಆಕಾರ ಸಂಕ್ಷಿಪ್ತತೆಯೆಂದೂ, ಸಾವಿರ ಮಾತಿನಲ್ಲಿ ಹೇಳಬೇಕಾದದ್ದನ್ನು ನಾಲ್ಕು ಮಾತು ಒಳಗೊಳ್ಳುತ್ತವೆಂದೂ, ಒಂದು ಜನಾಂಗದ ದೀರ್ಘಕಾಲದ ವಿವೇಕಾನುಭವಗಳನ್ನು ಭಟ್ಟಿಯಿಳಿಸಿದ ಮಾತ್ರೆಗಳೆ ಅವೆಂದೂ, ಅನುಭವವೇ ಅವುಗಳ ಉಸಿರೆಂದೂ, ಕಲಾತ್ಮಕತೆ ಅವುಗಳ ಜೀವಾಳವೆಂದೂ, ಸಂಜೀವನ ಶಕ್ತಿ ಮತ್ತು ಲೋಕಪ್ರಿಯತೆ ಅವುಗಳ ಚಿರಂತನತೆಯ ಮರ್ಮವೆಂದೂ ಹೇಳಬಹುದಾಗಿದೆ. ನೂರಾರು ಜ್ಞಾನವೃದ್ಧರ ವಿವೇಕಿಗಳ ಅನುಭವಿಗಳ ಅನುಭವಾಮೃತದ ರಸಸಾರವೇ ನಾಣ್ಣುಡಿ, ಅದು ಬಹುಕಾಲದ ಪರಂಪರೆಯ ರಸಪಾಕ; ಹಲವು ತಿಳಿವಳಿಕೆಯುಳ್ಳವರ ಜೀವಸಾರ. ಅವು ಹಠತ್ತಾನೆ ಅನೈಚ್ಛಿವಾಗಿ ಚಿಮ್ಮಿದರೂ ಅವುಗಳ ಹಿಂದೆ ನೂರಾರು ಜನ್ಮಗಳ, ನೂರಾರು ಹಿರಿಯರ ಸಂಸ್ಕಾರಗಳ ಪರಂಪರೆಯಿದೆ, ಅನುಭವ ವೀಕ್ಷಣೆ ಮತ್ತು ಪ್ರಯೋಗಗಳೇ ಅದರ ಉಗಮಕ್ಕೆ ಕಾರಣವಾದುದರಿಂದ ನಾಣ್ಣುಡಿ ಎಲ್ಲ ಜ್ಞಾನ ವಿಜ್ಞಾನಗಳ ತವರು ಎಂದು ಹೇಳಿದರೆ ತಪ್ಪಾಗಲಾರದು. ಎಲ್ಲ ಜನಪದ ಸಾಹಿತ್ಯ ಪ್ರಕಾರಗಳ ಸಾಧಾರಣ ಲಕ್ಷಣಗಳಾದ ಅಜ್ಞಾನನ ಕರ್ತೃತ್ವ ಮತ್ತು ಮೌಖಿಕ ಸಂಪ್ರದಾಯಗಳು ಇದಕ್ಕೂ ಅನ್ವಯಿಸುತ್ತವೆಂದು

ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಒಟ್ಟಿನಲ್ಲಿ ಅನುಭವ ಸಾಂದ್ರತೆ, ಲೋಕಮಾನ್ಯತೆ, ಉಕ್ತಿ ರಮಣೀಯತೆ ಮತ್ತು ಸೊತ್ತಾತ್ಮಕತೆ ಅದರ ಗುಣಗಳೆಂದು ಹೇಳಬಹುದು.

ಸಮಾಜದ ಸುಖ ಸಂಪತ್ತುಗಳಿಗೆ ನೀತಿಯೇ ಅಡಿಗಲ್ಲು, ಮಾನವನ ಮನಸ್ಸನ್ನು ತಿದ್ದುವ, ಧರ್ಮವನ್ನು ರಕ್ಷಿಸುವ ಶಕ್ತಿ ಅದು. ಅದು ಪರಿವರ್ತನಶೀಲವಾದದ್ದು, ದೇಶದಿಂದ ದೇಶಕ್ಕೆ, ಕಾಲದಿಂದ ಕಾಲಕ್ಕೆ ಆಯಾಯ ಪರಿಸರಕ್ಕನುಗುಣವಾಗಿ ಅದು ಬದಲಾಗುತ್ತದೆ. ಆದರೂ ಮನುಷ್ಯನ ಕ್ಷೇಮಕ್ಕೆ, ಸಾಂಸ್ಕೃತಿಕ ಜೀವನಕ್ಕೆ ಅತ್ಯವಶ್ಯ. ಆಸ್ತೇಯ ವ್ಯಭಿಚಾರಗಳು ಸಾಮಾನ್ಯವಾಗಿ ದೋಷ್ಯವೆಂದು ಗಣನೆಗೊಂಡಿದೆ, ಅವುಗಳಿಂದ ಸಮಾಜದ ಶಾಂತಿಗೆ ಭಂಗವಾಗುತ್ತದೆ. ಆದರೆ ಅಪತ್ತು ಸಮಯದಲ್ಲಿ ಅವು ನಿಂದನೀಯವೆಂಬುದಕ್ಕೆ "ದಂಡಿನಲ್ಲಿ ಕಟ್ಟಿದ್ದು ಹಾದರವಲ್ಲ, ಬರದಲ್ಲಿ ಕದ್ದದ್ದು ಕಳವಲ್ಲ" ಎಂಬ ನಾಣ್ಣುಡಿಯನ್ನು ಗಮನಿಸಬಹುದು. ಯೋಧ ಪ್ರಾಣದ ಹಂಗು ತೊರೆದು ಯುದ್ಧದಲ್ಲಿ ತೊಡಗಿರುಗಾಗ, ಹಾದರದ ಮೂಲಕ ಕಾಮತೃಪ್ತಿಗೆಳೆಸುವುದು ಮಹಾಪರಾಧವಾಗಲಾರದು. ಅಂತೆಯೇ ಕ್ಷಾಮ ಕಾಲದಲ್ಲಿ ಅನ್ನ ನೀರು ಸಿಗದೆ ಪ್ರಾಣಾಪಾಯವೊದಗಿರುವಾಗ ಕಳ್ಳತನದಿಂದಲಾದರೂ ಹರಣ ಹೊರೆಯುವುದಾದರೆ ತಪ್ಪಲ್ಲ. ನೀತಿಶಾಸ್ತ್ರದ ರಚನೆಗಂತು ನಾಣ್ಣುಡಿಗಳಿಂದ ವಿಪುಲ ಸಾಮಾಗ್ರಿ ದೊರೆಯುತ್ತದೆ.

ನಾಣ್ಣುಡಿಗಳು ಒಂದು ನಾಡಿನ ಸಂಸ್ಕೃತಿಗೆ ಆದರ್ಶವೂ ಅಹುದು, ದೂರದರ್ಶಿಯೂ ಅಹುದು, ಸಂಸ್ಕೃತಿಯ ಅಧ್ಯಯನದಲ್ಲಿ ಶಾಸನ, ಕಾವ್ಯ, ಪುರಾತತ್ವ ವಸ್ತುಗಳು ಮತ್ತು ಪವಿತ್ರ ಗ್ರಂಥಗಳೆಷ್ಟು ಮುಖ್ಯವೋ ನಾಣ್ಣುಡಿಗಳೂ ಅಷ್ಟೆ ಮುಖ್ಯ, ಅವುಗಳನ್ನುಳಿದ ವ್ಯಾಸಂಗ ಅರೆಕೊರೆಯಾಗುತ್ತದೆ. ಅವು ಸಂಸ್ಕೃತಿಯ ಕೈಮರಗಳು ಅಹುದು, ದೀವಿಗೆಗಳೂ ಅಹುದು, "ಕಲ್ಲಲ್ಲಿಟ್ಟವನ ಬೆಲ್ಲದಲ್ಲಿಡಬೇಕು" ಎಂಬ ವಾಕ್ಯ ಜನತೆಯ ಔದರ್ಯವನ್ನೂ ಅವರ ಮನಸ್ಸಿನ ಪರಿಪಕ್ವತೆಯನ್ನೂ ನಡೆಯ ತಿಳಿಪಡಿಸುತ್ತದೆ. ಹೀಗಾಗಿ ಸಂಸ್ಕೃತದ ಭಿನ್ನ ಭಿನ್ನಾರ್ಥಕವಾದ ಪದಗಳು ತಂತಮ್ಮ ಮೂಲಾರ್ಥ ರೂಪಗಳನ್ನು ಕಳೆದುಕೊಂಡು ಕೆಲವು ದೇಶ ಭಾಷೆಗಳಲ್ಲಿ ಪ್ರಯೋಗವಾಗುತ್ತಿವೆ. ಕನ್ನಡದಲ್ಲಿ ಇದಕ್ಕೆ ಸಂವಾದಿಯಾದ ಮತ್ತೊಂದು ಪದ ನಾಣ್ಣುಡಿ. ನಾಡು+ನುಡಿ, ನಾಣ್ಣುಡಿಯಾಗಿದೆ. ಗಾದೆ ಎಂಬ ಶಬ್ದ ರೂಢಿಗೆ ಬಂದ ನಂತರ ಅದು ಮರೆಯಾಯಿತು. ಈಗಂತು ಗಾದೆ ಎಂಬುದೇ ಸಾಮಾನ್ಯರ ನಾಲಗೆಯ ಮೇಲೂ ಕುಣಿದಾಡುತ್ತಾ, ಅಚ್ಚಗನ್ನಡವಾಗುಳಿದಿದೆ. ಛಂದೋಪ್ರಕಾರವನ್ನು ಸೂಚಿಸುತ್ತ ಸಂಸ್ಕೃತದ ಗಾಥಾ ಶಬ್ದ ಪ್ರಾಕೃತದ ಮೂಲಕ ಕನ್ನಡಕ್ಕೆ ಬಂದಿದೆ. ಹಾಗೆ ಬರುವಾಗ ರೂಪದಲ್ಲಿ ಮಾತ್ರವಲ್ಲ, ಅರ್ಥದಲ್ಲಿಯೂ ವ್ಯತ್ಯಾಸವನ್ನು ಪಡೆದಿದೆ. ಆದ್ದರಿಂದ ಅದರಲ್ಲಿ ಕನ್ನಡತನವೇ ವಿಜೃಂಭಿಸುತ್ತಿದೆ. ಸಂಸ್ಕೃತದ ಪ್ರವಾದ ಮತ್ತು ಲೋಕೋಕ್ತಿಗಳು ಕನ್ನಡದ ನಾಣ್ಣುಡಿಗೆ ಸಮಾನವಾಗಿದೆ. ತೆಲುಗಿನ ಸಾಮೆತ ಸಂಸ್ಕೃತದ ಸಾಮ್ಯತಾ (ಸಾಮ್ಯಂ) ಪದದಿಂದ ಬಂದಂತೆ ಕಾಣುತ್ತದೆ. ಅಖ್ಯಾನ ಮರಾಠಿಯಲ್ಲಿ ಆಹಣಾ/ಆಣಾ ಆಗಿದ್ದರೆ, ಬಂಗಾಳಿಯಲ್ಲಿ ಸಂಸ್ಕೃತದ ಮೂಲರೂಪಗಳಾದ ಪ್ರವಾದ ಲೋಕೋಕ್ತಿಗಳೇ ಬಳಕೆಯಲ್ಲಿವೆ. ಹಿಂದಿಯಲ್ಲಿ ಲೋಕೋಕ್ತಿಯಿದೆ. ತಮಿಳು ಮತ್ತು ಮಲಯಾಳಿಗಳಲ್ಲಿ ಮಾತ್ರ ಹಳೆಯ ಮಾತು ಎಂಬರ್ಥ ರೂಢಿಯಲ್ಲಿರುತ್ತದೆ.

**ನಾಣ್ಣುಡಿಯ ಹುಟ್ಟು :**

ನಾಣ್ಣುಡಿಯು ಜನಪದರ ವೇದ; ಜನಸಾಮಾನ್ಯರ ಬಾಳಿನ ಆನಂತ ಸಾಗರದಿಂದ ಆರಿಸಿ ತೆಗೆದ ಆಣಿಮುತ್ತು, ಮನುಕುಲದ ನಂದಾದೀಪ. ಅದು ಆಯಾ ಸಂದರ್ಭನುಸಾರಿಯಾಗಿ ಹೊರಹೊಮ್ಮಿದ ಸೂಳ್‌ನುಡಿ, ಹಾಗೂ ನಾಣ್ಣುಡಿ ದೇಶ, ಕಾಲ, ಪರಿಸರಗಳನ್ನು ಸಾರ್ಥಕವಾಗಿ ಪ್ರತಿಬಿಂಬಿಸುವ ನುಡಿಗನ್ನಡಿ ಮತ್ತು ಜನಸಾಮಾನ್ಯರ ಸಂಸ್ಕೃತಿಯ ತೋರ್ಬೆರಳಂತೆ ಕಂಡು ಬರುತ್ತದೆ. ಇಂತಹ ನಾಣ್ಣುಡಿಗಳು ಗಾದೆಯ ಮಾತು, ನಾಣ್ಣುಡಿ, ನಾಲ್ನುಡಿ, ಲೋಕೋಕ್ತಿ, ನಾಟ್ಣುನುಡಿ, ನಾಡುನುಡಿ ಇನ್ನು ಮುಂತಾದ ಹೆಸರುಗಳು ನಮ್ಮಲ್ಲಿ ಬಳಕೆಯಲ್ಲಿವೆ. ನಾಣ್ಣುಡಿ ಅಥವಾ ಗಾದೆಯ ಮಾತು ನಾಡಿನ ಸಂಸ್ಕೃತಿಯ ಪಾರ್ಶ್ವಭೂಮಿಕೆಯನ್ನು ತೋರಿಸುತ್ತದೆ. ಜೀವನ ಸಂಸ್ಕೃತಿಯ ಅಂತರಂಗವನ್ನು ನಾಣ್ಣುಡಿಗಳ ಮಾತಿನಲ್ಲಿ ನಾವು ಕಾಣಬಹುದು. ನಾವೀಗ 'ನಾಣ್ಣುಡಿ' ಎಂದು ಕರೆಯುವ ನುಡಿಗಳಿಗೆ 'ಗಾದೆ' ಎಂದು ಕರೆಯುತ್ತಾರೆ. ಇದಕ್ಕೆ ಗಾದೆಯ ಮಾತು ಎಂದೂ ಹೆಸರು. ಇವನ್ನೇ ಕೆಲವರು 'ಲೋಕೋಕ್ತಿ' ಎಂದು ಕರೆಯುವರು, ಮತ್ತೆ ಕೆಲವರು 'ಸಾಮತಿ' ಎಂದೂ ಕರೆಯುವರು ಇವುಗಳಿಗೆ 'ಶಾಸ್ತ್ರ'ಎಂದು ಹೇಳುವುದುಂಟು. ಯಾರೊಬ್ಬರು ಮಾತಿನಲ್ಲಿ ನಾಣ್ಣುಡಿಗಳನ್ನು ಉಪಯೋಗಿಸಿದರೆ 'ಶಾಸ್ತ್ರ ಹಾಕುತ್ತಾರೆ' 'ಶಾಸ್ತ್ರ ಹೇಳುತ್ತಾರೆ' ಎಂದು ಎನ್ನುವರು.

"ಲೋಕೋಕ್ತಿ (ಲೋಕ+ಉಕ್ತಿ) ಎಂಬುದು ನಾಣ್ಣುಡಿ ಎಂಬುದಕ್ಕೆ ಸಮಾನಾರ್ಥಕ ಸಂಸ್ಕೃತ ಶಬ್ದ. 'ಸಾಮತಿ' ಎಂಬುದು ಸಾಮ್ಯತೆ ಎಂಬುದರ ತದ್ಭವ ರೂಪವೆಂದು ಡಾ. ಕಿಟೆಲ್ ಹೇಳುತ್ತಾರೆ"[೨]. ಹಲವು ನಾಣ್ಣುಡಿಗಳು ಒಂದು ಕೆಲಸವಾಗಿರಲು ಅದರಂತಹ ಬೇರೊಂದು ಕೆಲಸವನ್ನು ನೆನಪಿಗೆ ತಂದು ಕೊಡುವುದಕ್ಕಾಗಿ –ಅದು ಹಾಗೆ ಆಗತಕ್ಕುದೆ ಎಂಬ ಕಾರಣದಿಂದ ಈ ಹೆಸರು ಬಂದಿರಬಹುದು. 'ಗಾದೆ' ಎಂಬುದು ಗಾಥಾ ಎಂಬುದರ ಅಪಭ್ರಂಶ. ಗಾಥಾ ಶಬ್ದಕ್ಕೆ ಸಂಸ್ಕೃತದಲ್ಲಿ ವೃತ್ತ, ಛಂದೋಬದ್ಧ ಸೂತ್ರ, ಪದ್ಯ ಮೊದಲಾದ ಅರ್ಥಗಳಿವೆ. ಕನ್ನಡದಲ್ಲಿ ಗಾದೆ ಎಂಬುದಕ್ಕೆ ಅನುಭವದ ಮಾತು ಎಂದು ಅರ್ಥವಾಯಿತು. ನಾಣ್ಣುಡಿಗಳು ಅನುಭವದ ಮಾತುಗಳೇ ಆದುದುರಿಂದ ಅವಕ್ಕೆ ಈ ಹೆಸರು ಬಂದಿತು. ಶಾಸ್ತ್ರ ಎಂದು ಪ್ರಾರಂಭ ಮಾಡಿದ ಸಾಮಾನ್ಯ ಜನರು ಗಾದೆಯ ಮಾತುಗಳೆಲ್ಲವುಗಳಿಗೂ ಶಾಸ್ತ್ರ ಎನ್ನತೊಡಗಿದರು. 'ಅನ್ನುವುದಕ್ಕೆ ಮಾಡಿದ್ದು ಶಾಸ್ತ್ರ ಉಣ್ಣುವುದಕ್ಕೆ ಮಾಡಿದ್ದು ಊಟ' ಎಂಬ ನಾಣ್ಣುಡಿಯಂತೆ ಈ ಹೆಸರು ಬಂದಿದೆ. ಗಾದೆಯೆಂಬುದಕ್ಕಿದ್ದ ಅನುಭವ ಮಾತು ಎಂಬುದು ಶಾಸ್ತ್ರಶಬ್ದಕ್ಕೂ ಅನ್ವಯಿಸುವದರಿಂದ ಸಾಮಾನ್ಯ ಜನರು ತಿಳಿಯದೆ ಹೆಸರು ಕೊಟ್ಟುದು, ಎಂದು ಈ ಶಬ್ದವನ್ನು ದೂರೀಕರಿಸುವ ಕಾರಣವಿಲ್ಲ ಈ ಹೆಸರೂ ಸಾಹಿತ್ಯದಲ್ಲಿ ಕಂಡು ಬರುವುದು.

ಇಂಗ್ಲಿಷಿನ ಶಬ್ದಕ್ಕೆ ಸಂವಾದಿಯಾಗಿ ಕನ್ನಡದಲ್ಲಿರುವ ಶಬ್ಧಗಳೆಂದರೆ ನಾಣ್ಣುಡಿ ಮತ್ತು ಗಾದೆ. ನಾಡು+ನುಡಿ ನಾಣ್ಣುಡಿಯಾಗಿದೆ. ಆದರೆ ಗಾದೆ ಶಬ್ದದ ವ್ಯುತ್ಪತ್ತಿಯನ್ನು ಇಷ್ಟು ಸುಲಭವಾಗಿ ಹೇಳಲು ಸಾಧ್ಯವಿಲ್ಲ. ಅದು ಅಚ್ಚಗನ್ನಡ ಶಬ್ದವಾಗಿರದೆ ಸಂಸ್ಕೃತದ ಗಾಥಾ

ಶಬ್ದದಿಂದ ನೇರವಾಗಿ ಅಥವಾ ಪ್ರಾಕೃತದ ಮುಖಾಂತರವಾಗಿ ಕನ್ನಡಕ್ಕೆ ಬಂದ ತದ್ಭವ ಶಬ್ದವಾಗಿದೆ ಎನ್ನಿಸುತ್ತದೆ. ಸಂಸ್ಕೃತದ ಗಾಥಾ ಮೂಲತ: ಒಂದು ಛಂದೋ ವಿಧಾನ. ಕನ್ನಡದ ನಾಣ್ಣುಡಿಯ ಅರ್ಥದಲ್ಲಿ ಪ್ರವಾದ, ಲೋಕಪ್ರವಾದ, ಲೋಕೋಕ್ತಿ ಮೊದಲಾದ ಶಬ್ದಗಳು ಸಂಸ್ಕೃತದಲ್ಲಿವೆ. ಆದ್ದರಿಂದ ನಾಣ್ಣುಡಿಗೆ ಸಂವಾದಿಯಾಗಿ ಬಳಕೆಯಲ್ಲಿರುವ ಗಾದೆಯ ಮೂಲವನ್ನು, ಛಂದಸ್ಸಿನ ಜಾತಿಯನ್ನು ಸೂಚಿಸುವ ಸಂಸ್ಕೃತದ ಗಾಥಾ ಶಬ್ದಕ್ಕೆ ಲಗತ್ತಿಸಿರುವುದು ಹೇಗೆ? ಎಂದು ಅನುಮಾನ ಮೂಡುವುದು ಸಹಜ. ಆದರೆ ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಬಂದ ಶಬ್ಧ ಮೊದಲಾರ್ಥದಲ್ಲೇ ಬಳಕೆಯಾಗದೆ ಬೇರೊಂದು ಅರ್ಥದಲ್ಲಿ ಬಳಕೆಯಾಗುತ್ತಿರುವುದಕ್ಕೆ ಬೇಕಾದಷ್ಟು ನಿದರ್ಶನಗಳಿವೆ. 'ಅವಸರ' ಎಂಬ ಶಬ್ದ ಸಂಸ್ಕೃತದಲ್ಲಿ ಸಮಯ, ಸಂದರ್ಭ ಎಂಬ ಅರ್ಥದಲ್ಲಿ ಬಳಕೆಯಲ್ಲಿದ್ದರೂ ಕನ್ನಡದಲ್ಲಿ ಗಡಿಬಿಡಿ, ತುರ್ತು, ಅರ್ಜೆಂಟು ಎಂಬ ಬೇರೊಂದು ಅರ್ಥದಲ್ಲಿ ಬಳಕೆಯಾಗಿರುವುದನ್ನು ನಾವಿಲ್ಲಿ ಗಮನಿಸಬಹುದು. ಆದ್ದರಿಂದ ನಾಣ್ಣುಡಿ ಅರ್ಥದ ಗಾದೆ ಶಬ್ದಕ್ಕೆ ಮೂಲ ಛಂದೋಜಾತಿ ಸೂಚಕ ಗಾಥಾ ಶಬ್ಧ ಹೇಗಾದಿತು ಎಂದು ಶಂಕಿಸಬೇಕಾದ ಅಗತ್ಯವಿಲ್ಲ. ಮೇಲಾಗಿ ಗಾದೆಯು ಪ್ರಧಾನವಾಗಿ ಎರಡು ಸಾಲಿನ ದ್ವಿಪದಿ ರೂಪದಲ್ಲಿದ್ದು ಗಾಥಾ ಸ್ವರೂಪಕ್ಕೆ ಸದೃಶ್ಯವಾಗಿದ್ದುದರಿಂದ ನಾಣ್ಣುಡಿಗೆ ಪರ್ಯಾಯ ಶಬ್ಧವಾಗಿ ಗಾದೆಯನ್ನು ಬಳಕೆಗೆ ತಂದಿರಬೇಕು ಜನತೆ. ಗಾಥಾ ಶಬ್ಧದ ತದ್ಭವಾದ ಗಾದೆ ಕನ್ನಡಕ್ಕೆ ಕಾಲಿಕ್ಕಿದ ಕೂಡಲೇ "ಹೊಸನೀರು ಬಂದು ಹಳೇ ನೀರನ್ನು ಕೊಚ್ಚಿಕೊಂಡು ಹೋಯಿತು" ಎಂಬ ಗಾದೆಯಂತೆ ಕನ್ನಡದ ನಾಣ್ಣುಡಿಯನ್ನು ಮೂಲೆ ಗುಂಪಾಗಿಸಿ ವಿಭೃಂಜಿಸಿರಬೇಕು; ಉತ್ಸವಮೂರ್ತಿಯಾಗಿ ಮೆರೆದಿರಬೇಕು. ಹೀಗಾಗುವುದಕ್ಕೆ ಬೇಕಾದಷ್ಟು ನಿದರ್ಶನಗಳಿವೆ. ದಿಕ್ಕನ್ನು ಸೂಚಿಸುವ ಸಂಸ್ಕೃತದ ಶಬ್ಧಗಳ ಆಗಮನ ಹಾಗೂ ಪ್ರಾಚುರ್ಯದಿಂದ ಕನ್ನಡದ ಮೂಡಲು, ಪಡುವಲು, ತೆಂಕಲು, ಬಡಗಲು, ಶಬ್ಧಗಳು ಹೇಗೆ ತಲೆಮರೆಸಿಕೊಳ್ಳುತ್ತಿವೆ. ಎಂಬುದನ್ನು ಗಮನಿಸಿದಾಗ ಮೇಲಿನ ಸಾಧ್ಯತೆಯ ಅರಿವಾಗದಿರದು.

"ಇಂಗ್ಲೀಷಿನ Proverb ಶಬ್ಧಕ್ಕೆ ಮೂಲ ಲ್ಯಾಟಿನ್ನಿನ Proverbium ಶಬ್ಧ. ಅದರ ಅರ್ಥ 'a word uttered in public' ಎಂದು. ಇದಕ್ಕೆ ಸಂವಾದಿಯಾಗಿ ಭಾರತೀಯ ಭಾಷೆಗಳಲ್ಲಿ ಚಾಲ್ತಿಯಲ್ಲಿರುವ ಶಬ್ಧಗಳನ್ನು ಪರಿಶೀಲಿಸಬಹುದು.

ಸಂಸ್ಕೃತ–ಪ್ರವಾದ, ಲೋಕ ಪ್ರವಾದ, ಲೋಕೋಕ್ತಿ

ಮರಾಠಿ–ಆಹುಣಾ, ಆಣಾ, ಲೋಕೋಕ್ತಿ

ಹಿಂದಿ–ಕಹಾವತ್, ಲೋಕೋಕ್ತಿ

ಗುಜರಾತ – ಕಹೇವತ್, ಉಖಾಣು

ಉರ್ದು–ಜರ್ಬುಲ್ ಮಿಸಲ್

ರಾಜಸ್ಥಾನಿ–ಓಖಾಣೋ, ಕಹವತ್, ಕುವಾವಟ್

ತಮಿಳು–ಪಳಮೊಳಿ

ಮಲಯಾಳಿ–ಪಳಂಚೊಲ್

ತೆಲುಗು–ಸಾಮತಿ

ಕನ್ನಡ–ನಾಣ್ಣುಡಿ, ಗಾದೆ, ನಾಡನುಡಿ"[೩]

ಮರಾಠಿಯ ಆಹಣಾ, ಆಣಾ (>ಅಖ್ಯಾನ) ಗುಜರಾತಿನ ಉಖಾಣು ಮತ್ತು ರಾಜಸ್ಥಾನಿಯ ಓಖಾಣೋ (> ಉಪಾಖ್ಯಾನ) ಗಾದೆಗಳ ಕಥಾಮೂಲವನ್ನು ಸೂಚಿಸುವ ಶಬ್ಧಗಳಾಗಿವೆ. ಸಂಸ್ಕೃತದ ಲೋಕೋಕ್ತಿ ಹಾಗೂ ಕನ್ನಡದ ನಾಣ್ಣುಡಿ ಗಾದೆಯ ಪ್ರಮುಖ ಲಕ್ಷಣಗಳನ್ನು ಧ್ವನಿಸುವ ಸಮಂಜಸ ಶಬ್ಧಗಳಾಗಿವೆ. ಏಕೆಂದರೆ ಲೋಕದಲ್ಲಿ ಪ್ರಚಲಿತವಾಗಿರುವ ಉಕ್ತಿ, ನಾಡಿನಲ್ಲಿ ಬಳಕೆಯಲ್ಲಿರುವ ನುಡಿ ಎಂಬುವುಗಳಿಂದ ಸಾರ್ವಜನಿಕ ಅಂಗೀಕಾರದ ಮುದ್ರೆ ಬಿದ್ದು ಚಲಾವಣೆಯುಳ್ಳ ನಾಣ್ಯವೇ ನಾಣ್ಣುಡಿ ಎಂದು ಸೂಚಿತವಾಗುವಂತಯೇ ಸಮಷ್ಠಿಯ ಮುದ್ರೆ ಇಲ್ಲದಂಥವು ನಿಜವಾದ ಅರ್ಥದಲ್ಲಿ ನಾಣ್ಣುಡಿ ಎನ್ನಿಸಿಕೊಳ್ಳಲಾರವು ಎಂಬ ಸತ್ಯವೂ ಸೂಚಿತವಾಗಿವೆ.

**ನಾಣ್ಣುಡಿಗಳ ಬೆಳವಣಿಗೆ :**

"ನಾಣ್ಣುಡಿ ಲೋಕ ಸಂಚಾರಿ; ಅಂತರಾಷ್ಟ್ರೀಯ ಅಲೆಮಾರಿ, ಆದ್ದರಿಂದ ಒಂದು ದೇಶದ ಜನಪ್ರಿಯ ನಾಣ್ಣುಡಿಗಳ ಪ್ರಭಾವ ಇನ್ನೊಂದು ದೇಶದ ನಾಣ್ಣುಡಿಗಳ ಮೇಲೆ ಬಿದ್ದು, ಸಮಾನ ಸ್ವರೂಪದ ಸಮಾನ ನಾಣ್ಣುಡಿಗಳು ಲೋಕದಲ್ಲಿ ಹುಟ್ಟಿ ಬೆಳೆಯುತ್ತವೆ"[೪] ಎಂದು ವಾದಿಸಿ ಅನೇಕ ಪ್ರಸಿದ್ಧ ನಾಣ್ಣುಡಿ ವಿದ್ವಾಂಸರು ತಪ್ಪು ತೀರ್ಮಾನಕ್ಕೆ ಬಂದದ್ದುಂಟು. ಇದಕ್ಕೆ ಮುಖ್ಯ ಕಾರಣ ನಾಣ್ಣುಡಿಗಳಲ್ಲಿ ಎದ್ದು ಕಾಣುವ ಸಮಾನಗುಣ, ಒಂದೇ ಅಭಿಪ್ರಾಯ, ಅರ್ಥವನ್ನು ಸೂಚಿಸುವ ಸಮಾನ ರೂಪದ ನಾಣ್ಣುಡಿಗಳು ಪ್ರಸಿದ್ಧವಾದ ಬಹುಭಾಷೆಗಳಲ್ಲಿ ಕಾಣಸಿಗುತ್ತದೆ. ಇದಕ್ಕೆ ನಾಣ್ಣುಡಿಗಳ ಅಲೆಮಾರಿಪ್ರವೃತ್ತಿಯಾಗಲಿ ಜನಸಾಮಾನ್ಯರ ಅನುಕರಣಯಾಗಲಿ ಕಾರಣವಲ್ಲ. ಬದಲಾಗಿ ಮಹಾವಿದ್ವಾಂಸ ಛಾಂಪಿಯನ್ನರ ಮಾತುಗಳಲ್ಲೇ ಹೇಳುವುದಾದರೆ "ನಾಣ್ಣುಡಿಯ ಜ್ಞಾನ ಲೋಕದಲ್ಲೆಲ್ಲ ಒಂದೇ; ವಿಭಿನ್ನತೆ ಇರುವುದಿಲ್ಲ ನಾಣ್ಣುಡಿಗಳ ಅಭಿವ್ಯಕ್ತಿಯಷ್ಟೆ. (ಇದಕ್ಕೆ ಕಾರಣ) ಮನುಷ್ಯರೆಲ್ಲ ಒಂದೇ ಹಿಟ್ಟಿನಿಂದ ಮಾಡಲ್ಪಟ್ಟವರೆ, ಮೂಲಭೂತವಾಗಿ ಪೌರ್ವಾತ್ಯ ಪಾಶ್ಚಾತ್ಯರೆನ್ನದೆ, ಬಿಳಿ ಕರಿಯರೆನ್ನದೆ ಮಾನವಿಕವಾಗಿ ಅವರೆಲ್ಲ ಒಂದೇ ಆಗಿದ್ದಾರೆ"[೫]. ಮಾನವನ ಮೂಲಭೂತ ಪ್ರವೃತ್ತಿಗಳಾದ ಪ್ರೇಮ, ಹಸಿವು, ಭಯ ಮುಂತಾದವು ಅಸಂಸ್ಕೃತ ಸುಸಂಸ್ಕೃತರೆಂಬ ಭೇದವಿಲ್ಲದೆ ಎಲ್ಲರಿಗೂ ಸರಿ ಸಮಾನವಾಗಿರುವ ಗುಣಗಳು. ಇವರ ಮೇಲೆ ಪರಿಸರವಾಗಲಿ ನಾಗರಿಕತೆಯಾಗಲಿ

ಪ್ರಭಾವ ಬೀರದು. ಮನುಕುಲದ ಇಂಥ ಮೂಲಭೂತ ಪ್ರವೃತ್ತಿಗಳನ್ನು ಯುಗಯುಗಾಂತರಗಳ ನಾಗರಿಕತೆಗಳಾವುವೂ ಬದಲಿಸಲಾರವು.

'ದೇಶದಂತೆ ನಾಣ್ಣುಡಿ' ಎಂಬ ಜರ್ಮನ್ ನಾಣ್ಣುಡಿಯಾಗಲಿ, 'ಜನತೆಯಂತೆ ನಾಣ್ಣುಡಿ' ಎಂಬ ಸ್ಕಾಟ್ ದೇಶದ ನಾಣ್ಣುಡಿಯಾಗಲಿ ಇದೇ ತತ್ವವನ್ನು ಸಾರುತ್ತದೆ. ವಿಶೇಷವಾಗಿ "ಎಲಿಯೆಟ್ ಸ್ಮಿತನು ಹೇಳುವಂತೆ 'ಸಮಾನ ಪರಿಸ್ಥಿತಿಗಳು ತತ್ಸಮಾನ ಸಂಸ್ಕೃತಿಗಳಿಗೆ ಜಾಡುಮಾಡಿ ಕೊಡುತ್ತವೆ"[೬]. ಆದ್ದರಿಂದ ಮಾನವ ಕುಲಕ್ಕೆಲ್ಲ ಒಂದೇ ಭಾಷೆ ಇರದಿದ್ದರೂ ಭಾಷಾವೈವಿಧ್ಯ ಆಶ್ಚರ್ಯಕರವಾಗಿರುತ್ತಿದ್ದರೂ ಕೂಡ ಸಮಾನ ಗುಣ ಸ್ವರೂಪ ಲಕ್ಷಣಗಳನ್ನುಳ್ಳ ನಾಣ್ಣುಡಿಗಳು ಪರಸ್ಪರ ಸಂಬಂಧವೇ ಇಲ್ಲದಿರುವಂಥ ದೇಶ ಭಾಷೆಗಳಲ್ಲಿ ಬೇಕಾದಷ್ಟು ಕಾಣಿಸಿಕೊಳ್ಳಬಹುದು. ಅಂತರರಾಷ್ಟ್ರೀಯ ನಾಣ್ಣುಡಿಗಳ ಬೃಹತ್ ಸಂಗ್ರಹವಾದ ಮಹಾಕೃತಿ 'ಜಾನಾಂಗಿಕ ಗಾದೆಗಳು' ಇಂಥ ತೌಲನಿಕ ಅಧ್ಯಯನಕ್ಕೆ ವಿಪುಲ ಸರಕನ್ನೊದಗಿಸುವ ಏಕಮಾತ್ರ ಆಕರ ಗ್ರಂಥವಾಗಿದೆ. ನಾಣ್ಣುಡಿಗಳೇನೋ ವಿಶ್ವವ್ಯಾಪಿಯಾಗಿವೆ. ಆದರೆ ಮೂಲತ: ಅತ್ಯಂತ ಪ್ರಾಚೀನತಮ ನಾಣ್ಣುಡಿಗಳು ಮೊದಲು ಯಾವ ಭಾಷೆಯಲ್ಲಿ ಹುಟ್ಟಿದವು? ಪ್ರಾಚೀನತಮ ಭಾಷೆಯಲ್ಲೇ ಅವು ಮೊದಲು ಕಾಣಿಸಿಕೊಂಡಿರಬೇಕು. ಈ ವಿಷಯದಲ್ಲೂ ತಕ್ಕಮಟ್ಟಿಗೆ ಜಿಜ್ಞಾಸೆ ನಡೆದಿದೆ, ಜೆ.ಎ.ಕೆಲ್ಲೋ ಅವರು "ಪ್ರಾಚೀನ ಯುಗಕ್ಕೆ ಹೋಗಿ ನೋಡಿದರೆ, ನಾಣ್ಣುಡಿಗಳು ಬೇಬಿ ಲೋನಿಯಾ ಮತ್ತು ಈಜಿಪ್ಟಿನ ಪಳೆಯುಳಿಕೆಯ ಸಾಹಿತ್ಯ ಕೃತಿಗಳಲ್ಲಿ ಅದ್ದು ಕೊಂಡಿರುವುದನ್ನು ನಾವು ಸಂಶೋಧನೆಯಿಂದ ಕಂಡುಕೊಳ್ಳಬಹುದು"[೭] ಎಂದಿರುವುದು ತುಂಬ ಗಮನಾರ್ಹವಾಗಿದೆ.

ನಾಣ್ಣುಡಿಗಳನ್ನುಳ್ಳ ಧರ್ಮಗ್ರಂಥಗಳನ್ನು ಹೊಂದಿರುವ ಯಹೂದಿಗಳು ಮತ್ತು ಕ್ರಿಶ್ಚಿಯನ್ನರು ಮತ್ತು ಹಿಂದೂಗಳ ವೈದಿಕ ಬರಹಗಳಲ್ಲಿ, ಮುಸ್ಲಿಂಮರ ಕುರಾನಿನಲ್ಲಿ ಬಳಕೆಗೊಂಡಿರುವ ನಾಣ್ಣುಡಿಗಳು ಆ ಗ್ರಂಥಗಳ ಧಾರ್ಮಿಕ ಮಹತ್ವದ ದೆಸೆಯಿಂದ ಅತ್ಯಪೂರ್ವವಾದ ಪರಮಾಧಿಕಾರವನ್ನು ಪಡೆದುಕೊಂಡಿದೆ. ಯೇಸುವಿನ ಬಹಳಷ್ಟು ಸುವಾರ್ತೆಗಳು ನಾಣ್ಣುಡಿಗಳ ರೂಪದಲ್ಲಿವೆ. ಮತ್ತು ಯೇಸು ತನ್ನ 'ಸುವಾರ್ತೆ'ಗಳನ್ನು ಪರಿಣಾಮಕಾರಿಯಾಗುವಂತೆ ಮಾಡುವ ಸಲುವಾಗಿ ನಾಣ್ಣುಡಿಗಳನ್ನು ಮೇಲಿಂದ ಮೇಲೆ ಧಾರಳವಾಗಿ ಬಳಸಿದ. ಆ ನಾಣ್ಣುಡಿಗಳ ಪೈಕಿ ಕೆಲವನ್ನು ಯೆಹೂದೀ ಸಾಹಿತ್ಯದಿಂದ ಎತ್ತಿಕೊಂಡ; ಮತ್ತೆ ಹಲವಾರನ್ನು ಸಾಮಾನ್ಯ ಜನತೆಯ ರೂಢಿನುಡಿ ಭಂಡಾರದಿಂದ ಆರಿಸಿಕೊಂಡ. ಮತ್ತೆ ಕೆಲವು ನಾಣ್ಣುಡಿಗಳನ್ನು ತಾನೇ ಸ್ವಂತವಾಗಿ ಸೃಷ್ಟಿಸಿದ. ಹೀಗಿರುವುದರಿಂದ ಆ ನಾಣ್ಣುಡಿಗಳ ಪರಮಪ್ರಮಾಣ ಮತ್ತು ಪರಮಾಧಿಕಾರ, ಅವರ ನೈತಿಕ, ಧಾರ್ಮಿಕ ಪ್ರಭಾವ ಕ್ರೈಸ್ತಧರ್ಮ ಸಂಸ್ಥಾಪಕನ ಅಧಿಕಾರದಂತೆಯೆ ಅಲ್ಲಿನ ನಾಣ್ಣುಡಿಗಳಿಗೆ ಇರುತ್ತಿರುವ ಮಹಾಪ್ರಾಚುರ್ಯವನ್ನು ಸಾರುತ್ತವೆ. "ಯೇಸುವಿನ ನಾಣ್ಣುಡಿ ಸುವಾರ್ತೆಗಳು ಧಾರ್ಮಿಕ ಕ್ಷೇತ್ರದಲ್ಲಿನ ಇತರ ಯಾವುದೇ ಗುಂಪಿನ ನಾಣ್ಣುಡಿಗಳಿಗಿಂತ ಅತ್ಯಂತ ಪ್ರಭಾವ ವ್ಯಾಪಕವಾದ ಆಳವಾದ ಹಾಗೂ ತೀವ್ರವಾದ ಪ್ರಭಾವವನ್ನು ಬೀರಿವೆ"[೮]. ಎಂಬ ಕೆಲ್ಲೊ ಅವರ ಹೇಳಿಕೆ ಮಹತ್ವದಾಗಿದೆ.

ಅತ್ಯಂತ ಸನಾತನ ಅಪೌರುಷೇಯ ಹಾಗೂ ಪರಮಪವಿತ್ರವೆನ್ನಲಾಗಿರುವ ನಮ್ಮ ವೇದೋಪನಿಷತ್ತುಗಳಲ್ಲಿಯೂ ಅನೇಕ ಸುಭಾಷಿತ, ಜಾಣ್ನುಡಿ, ನಾಣ್ನುಡಿಗಳು ಬಂದಿವೆ. ಇದಕ್ಕೆ ಮುಖ್ಯ ಕಾರನ ವೇದ ಮಂತ್ರದ್ರಷ್ಟಾರರಾದ ಮುನಿಗಳು ತಮ್ಮ ಕಾಲದಲ್ಲಿ ರೂಢಿಯಲ್ಲಿದ್ದ ಕೆಲವು ನಾಣ್ನುಡಿ, ಲೋಕೋಕ್ತಿಗಳನ್ನು ನಯಗೊಳಿಸಿ ತಮ್ಮ ಕೃತಿಗಳಲ್ಲಿ ಬಳಸಿಕೊಂಡಿದ್ದಾರೆ. ಮತ್ತೆ ಹಲವಾರನ್ನು ಯೇಸುವಿನಂತೆ ತಾವೇ ಸ್ವಂತ ಸೃಷ್ಟಿಸಿ ಬಳಕೆಗೆ ತಂದುದು. ಇದು ಭಾರತೀಯರಿಗೆ ಹಿರಿಯ ಜ್ಞಾನಿಗಳು ಹಾಕಿಕೊಟ್ಟ ಅತ್ಯುತ್ತಮ ಮೇಲ್ಪಂಕ್ತಿ. ಆದರೆ ದುರ್ದೈವದಿಂದಲೆಂಬಂತೆ ಮುಂದಿನ ಪೀಳಿಗೆಯ ವ್ಯಾಖ್ಯಾನಕಾರರು ಜನಸಾಮಾನ್ಯರ ನುಡಿನಡಾವಳಿಗಳನ್ನು ಕಡೆಗಳಿಸಿದರು; ಹಿಂದಿನ ಆದರ್ಶಗಳಿಗೆ ಹೊಸ ತಿರುವು ಕೊಟ್ಟು ವಿಚಿತ್ರವಾಗಿ ವ್ಯಾಖ್ಯಾನಿಸಿದರು. ಮತ್ತು ವೇದೋಪನಿಷತ್ತುಗಳ ಅರಿವು, ಅಧಿಕಾರ ವಿದ್ಯಾವಂತರೂ ಬುದ್ಧಿವಂತರೂ ಆದ ಕೆಲವು ವರ್ಗದವರಿಗೇ ಮೀಸಲೆಂದು ಘೋಷಿಸಿದರು.

'ನಾಣ್ನುಡಿ (ಗಾದೆ) ವೇದಕ್ಕೆ ಸಮಾನ', 'ವೇದ ಸುಳ್ಳಾದರೂ ನಾಣ್ನುಡಿ (ಗಾದೆ) ಸುಳ್ಳಾಗದು', 'ನಾಣ್ನುಡಿ ವೇದಕ್ಕೆ ತಲೆದಿಂಬು', ಈ ನುಡಿಗಳ ಅಭಿಪ್ರಾಯವೇನು? ನಾಣ್ನುಡಿ ವೇದಕ್ಕೆ ಸಮಾನ ಎಂದು ಘೋಷಿಸಿರುವುದು ಸಮಾಜದಲ್ಲಿ ನಾಣ್ನುಡಿಗಿರುವ ಸ್ಥಾನಮಾನಕ್ಕೆ ಕೊಟ್ಟ ಪ್ರಶಸ್ತಿಯಾಗಿದೆ. ಇನ್ನೂ ಒಂದು ಹೆಜ್ಜೆ ಮುಂದುವರೆದ ಪ್ರಜ್ಞಾವಂತ ಜನತೆ 'ನಾಣ್ನುಡಿ ಮರ್ಮವನ್ನರಿತವನ್ನು ವೇದದ ಮರ್ಮವನ್ನರಿತಾನು' ಎಂದಿದೆ. ವೇದ ನಾಣ್ನುಡಿಯನ್ನು ತಿರಸ್ಕರಿಸಿದರೆ ಅದಕ್ಕೆ ಶಾಂತಿ ಸುಖ ನೆಲೆಬೆಲೆಗಳೂ ದೊರಕವೆಂಬುದಕ್ಕೆ ಸೊಗಸಾದ ಸೂಚನೆಯಾಗಿ 'ನಾಣ್ನುಡಿ ವೇದಕ್ಕೆ ತಲೆದಿಂಬು' ಎಂಬ ಜಾಣ್ನುಡಿ ರೂಪಗೊಂಡಿತು. ಕೊನೆಗೆ ಪ್ರಪಂಚದಲ್ಲಿ ಅನುಭವವೇ ಮಿಕ್ಕಿಲ್ಲದಕ್ಕಿಂತಲ್ಲೂ ಪರಮಪ್ರಮಾಣವಾಗಿರುವುದರಿಂದ, ವೇದ ಸುಳ್ಳಾದರೂ ನಾಣ್ನುಡಿ ಸುಳ್ಳಾಗದ್ದು' ಎಂದು ನುಡಿಯುವಷ್ಟರ ಮಟ್ಟಿಗೆ ಅನುಭವಿ ಕವಿ ಮುಂದುವರೆದು ಘೋಷಿಸಿದ್ದಾನೆ.

ಇದ್ದೆಲ್ಲದರಿಂದ ವೇದ ನಾಣ್ನುಡಿಗಿಂತ ಕೀಳು, ಕನಿಷ್ಠವೆಂದು ಯಾರೂ ತಪ್ಪಾಗಿ ಭಾವಿಸಬಾರದು. ನಾಣ್ನುಡಿ ಮತ್ತು ವೇದಗಳಿಗಿರುವ ಅಂತರವನ್ನು ಒಂದು ಸೊಗಸಾದ ಉಪಮಾನದ ಮುಖಾಂತರ ಸ್ಪಷ್ಟಪಡಿಸಬಹುದು. ವೇದ ಅರಮನೆ ಗುರುಮನೆಗಳಲ್ಲಿ ಅಪರೂಪಕ್ಕೆ ಬಳಸುವಂಥ ಜರತಾರಿ ಶಾಲಿನಂತೆ. ನಾಣ್ನುಡಿ ಪ್ರತಿಯೊಬ್ಬರೂ ದಿನನಿತ್ಯ ಅನಿವಾರ್ಯವಾಗಿ ಬಳಸುವ ವಲ್ಲೀಬಟ್ಟೆ (ಟವಲ್) ಯಂತೆ. ವಲ್ಲೀಯನ್ನು ಬಳಸುವಲ್ಲೆಲ್ಲ ಶಾಲನ್ನು ಬಳಸಲಾಗದು. ಶಾಲಿನ ಸ್ಥಾನವನ್ನು ವಲ್ಲಿಯೂ ತುಂಬಲಾರದು. ಇವೆರೆಡರಲ್ಲಿ ಒಂದು ಮೇಲು ಮತ್ತೊಂದು ಕೀಳು ಎನ್ನುವಂತಿಲ್ಲ. ಆದ್ದರಿಂದ ನಾಣ್ನುಡಿಗಳ ಹುಟ್ಟು ಬೆಳವಣಿಗೆಗೆ ವೇದೋಪನಿಷತ್ತುಗಳ ಕೊಡುಗೆ ತುಂಬ ಗೌಣವಾದುದೆಂದು ಹೇಳಿದರೆ ತಪ್ಪಾಗದು. ಹೀಗಾಗಿ ಭಾರತೀಯ ಪ್ರಾಚೀನ ಶಾಸನ, ಕಾವ್ಯಗಳಲ್ಲಿ ನಾಣ್ನುಡಿಗಳನ್ನು ಹೋಲುವಂಥ ಅನೇಕ ಸೂಕ್ತಿ, ಮುಕ್ತಕ, ಚುಟುಕು, ಜಾಣ್ನುಡಿಗಳು ಕಾಣಸಿಗುತ್ತವೆ. ವಿಶೇಷವಾಗಿ ಪ್ರಾಚೀನ ಕವಿಗಳು ಜನಪದ ನಾಣ್ನುಡಿ, ಗೀತೆಗಳಿಗೆ ಮನಸೋತು, ಅವರ ಧಾಟಿ, ಅಂತಸ್ಸತ್ವಕ್ಕೆ ಮಾರುಹೋಗಿ ತಮ್ಮ ಕೃತಿಗಳಲ್ಲಿ ಅಲ್ಲಲ್ಲಿ ಬಳಸಿಕೊಂಡಿರುವುದನ್ನು

ಕಾಣುತ್ತೇವೆ. ಇಷ್ಟಾದರೂ ಕೂಡ ಆಡುನುಡಿ ಸಾಹಿತ್ಯವಾದ ಜನಪದಸಾಹಿತ್ಯ ಕ್ಷೇತ್ರದಲ್ಲಿಯಂತೆ ಲಿಖಿತ ರೂಪದ ಗ್ರಂಥಸ್ಥ ಶಿಷ್ಟ ಸಾಹಿತ್ಯಕ್ಷೇತ್ರದಲ್ಲಿ ನಾಣ್ಣುಡಿಗಳಿಗೆ ನ್ಯಾಯವಾಗಿ ಸಲ್ಲಬೇಕಾಗಿದ್ದ ಸ್ಥಾನಮಾನಗಳು ಸಂದಿವೆಂಬುದು ಇಲ್ಲಿ ಸ್ಪಷ್ಟವಾಗಿದೆ.

ಪುರಾತನ ಯುಗದ ತತ್ವಜ್ಞಾನಿಗಳು ಯಾರೂ ನಾಣ್ಣುಡಿಗಳನ್ನು ಕಡೆಗಾಣಿಸದಿರುವುದು ನಾಣ್ಣುಡಿಗಳ ಸತ್ವಕ್ಕೆ ಮತ್ತೊಂದು ರುಜುವಾತು ಒದಗಿಸುತ್ತದೆ. ನಿದರ್ಶನಕ್ಕೆ ಮಹಾದಾರ್ಶನಿಕರಾದ ಅರಿಸ್ಟಾಟಲ್ ಪ್ಲೇಟೋಗಳ ಗ್ರಂಥ ಪುಟಗಳು ನಾಣ್ಣುಡಿ ಸೂಕ್ತಿಗಳಿಂದ, ಪ್ರಹೇಳಿಕೆ ಸುಭಾಷಿತಗಳಿಂದ ಶೋಭಿಸುತ್ತಿವೆ. ಸಿಸಿರೋನ ಬರಹಗಳು ನಾಣ್ಣುಡಿಯುಕ್ತವಾಗಿವೆ. ಇದೆಲ್ಲದಕ್ಕಿಂತ ಮಿಗಿಲಾದ ಮಹತ್ವದ ಸಂಗತಿ ಎಂದರೆ, "ನಾಣ್ಣುಡಿಗಳು ಮತ್ತು ಸುಭಾಷಿತ ಸಾಹಿತ್ಯ, ಇವೆರಡು ಗ್ರೀಕ್ ತತ್ವಜ್ಞಾನದ ಎರಡು ಬೀಜಾಭಿವೃದ್ಧಿ ಕ್ಷೇತ್ರಗಳಾಗಿದ್ದವು" ಎಂಬುದು ರೋಮನ್ನರೂ ಕೂಡ ತಮ್ಮ ಮೂಲ ನಾಣ್ಣುಡಿ ಮತ್ತು ಸುಭಾಷಿತ ಆದಿಯಾದ ಸಾರಸೂಕ್ತಿಗಳನ್ನು ಕ್ರಮವಾಗಿ ಜನತೆಯ ನುಡಿಭಂಡಾರ ಹಾಗೂ ಪ್ರಾಚೀನ ಕಾವ್ಯಗಳಿಂದೆತ್ತಿಕೊಂಡು ಧಾರಳಾವಾಗಿ ಬಳಸುತ್ತಿದ್ದರು. "ಚೀನಾದ ಅತ್ಯಂತ ಪ್ರಾಚೀನವಾದ ಕೆಲವು ನಾಣ್ಣುಡಿಗಳು ಸುಪ್ರಸಿದ್ಧದಾರ್ಶನಿಕರ ಬೋಧನೆಯ ಸೂಕ್ತಿಗಳಿಂದ ರೂಪಗೊಂಡಿವೆ. ಅದರಲ್ಲೂ ವಿಶೇಷವಾಗಿ ಕನ್‌ಫ್ಯೋಷಿಯಸ್ ಮತ್ತು ಲಾವೊ-ತ್ಸು ಇವರ ಬೋಧನೆಗಳು ಸೂಕ್ತಿ ಮುಕ್ತಕಗಳಿಂದ ಕೂಡಿದ್ದು ಅವರಲ್ಲಿ ಬಹಳಷ್ಟು ನಾಣ್ಣುಡಿಗಳಾಗಿ ಚಲುವಳಿಪಡೆದಿವೆ. ಇಂಥ ಪರಂಪರಾಗತ ನಾಣ್ಣುಡಿ ಸಾಹಿತ್ಯದ ಅತುಲೈಶ್ವರ್ಯವನ್ನು ಚೀನೀಯರು ಗಳಿಸಿಕೊಂಡಿದ್ದಾರೆ; ಅದು ಅವರಲ್ಲಿ ಇವೊತ್ತಿಗೂ ಜನ ಬಳಕೆಯಲ್ಲಿವೆ" ಎಂದಿರುವ ಡಾ. ಲಯೊನೆಲ್ ಗಿಲ್ಸ್ ಅವರ ಅಭಿಪ್ರಾಯ ಇಲ್ಲಿ ಮುಖ್ಯವಾಗಿದೆ.

"ಚೀನಾದೇಶದಲ್ಲಿ ನಾಣ್ಣುಡಿ ಬೇಸಾಯಕ್ಕೆ ಪುಟ್ಟ ಮಕ್ಕಳಾಗಿರುವಾಗಲೆ ಹೇಗೆ ತರಬೇತಿ ಕೊಟ್ಟು, ನಾಣ್ಣುಡಿ ಪರಂಪರೆಯನ್ನು ಉಳಿಸಿ ಬೆಳೆಸಲು ಸಹಾಯ ಮಾಡುತ್ತಿದ್ದರೆಂಬುದಕ್ಕೆ ತುಂಬಾ ರೋಚಕವಾದ ಒಂದು ಪರಿಪಾಠವನ್ನು ಕೆಲ್ಸೊ ಅವರು ಎತ್ತಿ ಬರೆದಿದ್ದಾರೆ. ಚೀನಾದ ಶಾಲಾ ಬಾಲಕರಿಗೆ ಅವರ ಪಾಠದ ಅಂಗವಾಗಿ ಅಭ್ಯಾಸಕ್ಕೆಂದು ಒಂದು ನಾಣ್ಣುಡಿಯ ಅರ್ಧಭಾಗವನ್ನು ಕೊಟ್ಟು, ಮಿಕ್ಕರ್ಧವನ್ನು ವಿದ್ಯಾರ್ಥಿಯೇ ಊಹಿಸಿ ವಿವೇಚಿಸಿ ಮುಕ್ತಾಯಗೊಳಿಸುವಂತೆ ಹೇಳಲಾಗುತ್ತಿತ್ತು. 'ಸಿಂಹಾಸನವೇರಿದ ಚಕ್ರವರ್ತಿಯಿಂದ ಹಿಡಿದು ಬಡಗುಡಿಸಿಲ್ಲ ಭಿಕ್ಷುಕನವರೆಗೆ ಚೀನಾದ ಸಮಾಜದ ಪ್ರತಿಯೊಂದು ವರ್ಗದವರೂ ನಾಣ್ಣುಡಿಗಳನ್ನು ಬಳಸಿ, ಕೇಳಿ ಮುದುಗೊಳ್ಳುತ್ತಾರೆ. ಜೀವನದ ಪ್ರತಿಯೊಂದು ಪ್ರಸಂಗಕ್ಕೂ ಸೂಕ್ತವಾಗುವಂಥ, ವೃತ್ತಿರಿಕ್ತವಾಗಿರುವಂಥ ನಾಣ್ಣುಡಿ, ಜಾಣ್ಣುಡಿಗಳನ್ನು ಸೃಷ್ಟಿಸಿರುವುದು ಚೀನಾದ ಹೆಚ್ಚುಗಾರಿಕೆ"[೧೦] ಎಂದು ಕೆಲ್ಸೊ ವಿವರಿಸಿದ್ದಾರೆ.

ವಿದೇಶಗಳಲ್ಲಿ ಹುಟ್ಟಿ ಬೆಳೆದ ನಾಣ್ಣುಡಿಗಳ ಸ್ಥೂಲ ಪರಿಚಯ ಮಾಡಿಕೊಳ್ಳುತ್ತ, ಜಪಾನಿನಲ್ಲಿ ನಾಣ್ಣುಡಿಗಳು ಹೇಗೆ ರೂಪಗೊಂಡು ಬಾಳಿದವೆಂಬುದನ್ನು ಕೊಂಚ

ಪರಿಶೀಲಿಸೋಣ. ಕೊಷಿದೊಯ್ ಅವರ ಅಭಿಮತದಂತೆ, "ಪ್ರಾಚೀನ ಜಪಾನಿನ ಸಾಂಪ್ರದಾಯಕ ಸುಭಾಷಿತಗಳು, ನಾಣ್ನುಡಿಗಳು ಆ ದೇಶದಲ್ಲಿ ಪ್ರಚಲಿತವಾಗಿದ್ದ 'ಕಥೆಗಾರ ಪಂಗಡ'ದ ಜನರಿಂದ ರೂಪಿತವಾದವು. ಇಂಥ ಸಂಕ್ಷಿಪ್ತ ಸೂಕ್ತಿ, ಮುಕ್ತಕಗಳನ್ನು ಜಪಾನೀ ಭಾಷೆಯಲ್ಲಿ 'koto-waza' ಅಥವಾ 'words that work' 'ಫಲಕಾರೀ ನುಡಿಗಳು' ಎಂಬುದಾಗಿ ನಿರ್ದೇಶಿಸುತ್ತಿದ್ದರು. ಈ ನುಡಿಗಟ್ಟುಗಳೇ ಪ್ರಾಚೀನವಾದ ನಾಣ್ನುಡಿಗಳೆನ್ನಿಸಿಕೊಂಡವು"[೧೧]. 'ತಿರುಗು ಬಾಣದ ಅರಿವಿರಲಿ' ಎಂಬ ನಾಣ್ನುಡಿ ಶತ್ರುವು ಹೊಡೆದ ಬಾಣವನ್ನೇ ತೆಗೆದು ಕೊಂಡು, ಆತನ ಮೇಲೆ ಮರುಪ್ರಯೋಗ ಮಾಡುತ್ತಿದ್ದ ಹಿಂದಿನ ಒಂದು ಸಂಪ್ರದಾಯದಿಂದ ಹುಟ್ಟಿಕೊಂಡಿರುವಂತಿದೆ. ಕ್ರಿ.ಶ. ಎಂಟನೆಯ ಶತಮಾನದಲ್ಲಿ ಪರಿಚಯಿಸಿದಾಗ, ಆ ಧರ್ಮಸೂತ್ರಗಳ ಮುಖ್ಯಸೂಕ್ತಿಗಳನ್ನು ಅನಕ್ಷರಸ್ಥ ಜನತೆಗೆ ನಾಣ್ನುಡಿಗಳ ರೂಪದಲ್ಲಿ ಹೇಳಿಕೊಡಲಾಯಿತು. ಅವು ಮೂಲತ:ಜಪಾನೀ ನಾಣ್ನುಡಿಗಳಾಗಿರದಿದ್ದರೂ ಅವು ಜಪಾನೀಯರ ಹೃದಯದಲ್ಲಿ ಮನೆಮಾಡಿಕೊಂಡು ಶತಮಾನಗಳವರೆಗೆ ನೆಲೆನಿಂತವು. ಆದ್ದರಿಂದ ಆ ನಾಣ್ನುಡಿಗಳನ್ನು ನಾವು ನಮ್ಮ ಸ್ವಂತದವೆಂದೇ ಪರಿಭಾವಿಸುತ್ತೇವೆ.

"ಜಪಾನೀ ಕಾವ್ಯದ ಹಲವು ಪಂಕ್ತಿಗಳು ನಾಣ್ನುಡಿಗಳಾದವು; ಜನಪದ ಗೀತೆಗಳು ಕೂಡ ಕೆಲವು ನಾಣ್ನುಡಿಗಳನ್ನೊದಗಿಸಿದವು.....ಆದರೂ ಬಹು ಸಂಖ್ಯಾತ ನಾಣ್ನುಡಿಗಳು ಹಳ್ಳಿ ಅಥವಾ ಪಟ್ಟಣಗಳಲ್ಲಿ ಶ್ರಮಜೀವನ ನಡೆಸಿಬಾಳುವ ಸಾಮಾನ್ಯ ಜನರ ಸೃಷ್ಟಿ ಎಂದೆನ್ನಿಸುತ್ತದೆ. ತಮ್ಮ ಜೀವನದ ಸಮಸ್ತ ಕಹಿಸಿಹಿಗಳನ್ನೆಲ್ಲ ಅನುಭವಿಸಿ ಬಂದಂತಹ ಜನತೆ, ಅಂಥ ಕಹಿ ಅನುಭವದ ಪ್ರಸಂಗ ಬಂದಾಗ ಸೂಕ್ತ ನಾಣ್ನುಡಿಗಳನ್ನು ನೆನೆದುಕೊಂಡು ಸರಿದಾರಿ ಹಿಡಿದು ನಡೆಯುತ್ತಿದ್ದರು. ಈ ನಾಣ್ನುಡಿಗಳು ಯುಗಯುಗಾಂತರಗಳಿಂದ ಬಳುವಳಿಯಾಗಿ ಉಳಿದು ಬಂದಿವೆ"[೧೨].

**ಅಡಿಟಿಪ್ಪಣಿ**


೧. ಜವರೇಗೌಡ. ದೇ., ೨೦೦೪. ಗಾದೆ., ಶಂಕರ ನಾರಾಯಣ, ತೀ.ನಂ., ಜನಪದ ಸಾಹಿತ್ಯ ಪ್ರಕಾರಗಳು., ಕರ್ನಾಟಕ ಜನಪದ ಮತ್ತು ಯಕ್ಷಗಾನ ಅಕಾಡೆಮಿ. ಬೆಂಗಳೂರು, ಪುಟ–೧೭೧.

೨. ಮಲ್ಲೇಪುರಂ ಜಿ. ವೆಂಕಟೇಶ (ಸಂ), ೨೦೦೭., ಗಾದೆಯ ಮಾತು, ಸೃಷ್ಟಿ ಪಬ್ಲಿಕೇಷನ್, ಬೆಂಗಳೂರು. ಪುಟ–೧

೩. ರಾಮಾನುಜನ್ ಎ.ಕೆ., ೧೯೭೩, ಗಾದೆಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ಪುಟ–೨೫

೪. ತಪಸ್ವಿಕುಮಾರ್ ಎನ್., ೧೯೭೨., ಕನ್ನಡ ಗಾದೆಗಳ ಸಮೀಕ್ಷೆ., ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ., ಮೈಸೂರು. ಪುಟ–೮

೫. ಅದೇ, ಪುಟ–೯

೬. ಅದೇ, ಪುಟ–೯

೭. ಅದೇ, ಪುಟ-೧೦

೮. ಅದೇ, ಪುಟ-೧೧

೯. ಅದೇ, ಪುಟ-೧೩

೧೦. ಅದೇ, ಪುಟ-೧೪

೧೧. ಅದೇ, ಪುಟ-೧೪-೧೫

೧೨. ಅದೇ, ಪುಟ-೧೫

# ಅಧ್ಯಾಯ – ಮೂರು

## ನಾಣ್ಣುಡಿಗಳು : ಒಳನುಡಿಗಳಲ್ಲಿ ಬಳಕೆ

**ಪ್ರವೇಶ :**

ಮನುಷ್ಯ ನಾಗರಿಕತೆಯ ಇತಿಹಾಸದಲ್ಲಿ ಬೆಂಕಿಯ ಬಳಕೆಯನ್ನು ಕಂಡುಕೊಂಡದ್ದು ಎಷ್ಟು ಮಹತ್ವಪೂರ್ಣವಾದ ಘಟ್ಟವೋ ಅವನು ಭಾಷೆಯ ಬಳಕೆಯನ್ನು ಕಂಡುಕೊಂಡದ್ದು, ಹಾಗೂ ಮಾತನಾಡುವ ಕಲೆಯನ್ನು ರೂಢಿಸಿಕೊಂಡದ್ದು ಸಹ ಅಷ್ಟೇ ಮಹತ್ವಪೂರ್ಣವಾದ ಘಟ್ಟ. ಆದಿಮಾನವ ತನ್ನ ಅನಿಸಿಕೆಗಳನ್ನು ಹೇಳುವುದಕ್ಕೆ ಮತ್ತು ಇನ್ನೊಬ್ಬರ ಅನಿಸಿಕೆಗಳನ್ನು ತಾನು ತಿಳಿಸುಕೊಳ್ಳುವುದಕ್ಕೆ ಅವಲಂಬಿಸಿದ್ದ ಸಂಜ್ಞೆ, ಸಂಕೇತ, ಚಿತ್ರ, ಉದ್ಗಾರ, ಅಂಗಚಲನೆ ಮುಂತಾದ ಮಾಧ್ಯಮಗಳಿಂದ ಮುಂದೆ ಹೋಗಿ ಮಾತನ್ನು ಬಳಸಿದ್ದು, ಬದುಕಿನ ವಿಕಾಸದ ಹಾದಿಯಲ್ಲಿ ಒಂದು ಕ್ರಾಂತಿಕಾರಕ ಬದಲಾವಣೆಯನ್ನೇ ತಂದಿತು. ಭಾಷೆ ಎಂಬುದು ಮಾನವನಿಗೆ ದೈವದತ್ತವಾಗಿ ಬಂದಿರುವ ಒಂದು ಅಮೂಲ್ಯವಾದ ವರ. ಅವನನ್ನು ಸೃಷ್ಟಿಯ ಮಿಕ್ಕ ಎಲ್ಲ ಪ್ರಾಣಿಗಳಿಗಿಂತ ಬೇರ್ಪಡಿಸಿ, ವಿಶಿಷ್ಟ ಜೀವಿ ಎಂದು ಗುರುತಿಸಿರುವ ಭಾಷೆ ಎಂಬ ವರ ಮನುಷ್ಯನಿಗೆ ಸಿದ್ಧಿಸದೇ ಹೋಗಿದ್ದರೆ ಇಂದು ನಾವು ಕಾಣ್ಣುತ್ತಿರುವ ಜ್ಞಾನ, ವಿಜ್ಞಾನ, ಸುಜ್ಞಾನಗಳು ಬೆಳಕಿಗೇ ಬರುತ್ತಿರಲಿಲ್ಲ ಮತ್ತು ನಾಗರಿಕ ಜಗತ್ತಿನ ಅದ್ಭುತ ಸೃಷ್ಟಿಯೇ ಸಾಧ್ಯವಾಗುತ್ತಿರಲಿಲ್ಲ.

ಮಾನವನ ಭಾಷೆಯನ್ನು ಬಳಸಲು ಕಂಡುಕೊಂಡ ದಿನದಿಂದ ಅದರ ವಿಕಾಸವಾಗುತ್ತಿದೆ. ಭಾಷೆ ಅವನ ಭಾವ-ಭಾವನೆಗಳ ಅಭಿವ್ಯಕ್ತಿಗೆ ಸುವರ್ಣ ಮಾಧ್ಯಮವಾಗಿದೆ. ಭಾಷೆ ಬಳಸಿದಷ್ಟೂ ಬೆಳೆಯುತ್ತದೆ ಎನ್ನುವುದಕ್ಕೆ ಅದು ಮಾನವನ ಸಂಸ್ಕೃತಿಯ ಬೆಳವಣಿಗೆಯೊಂದಿಗೆ ಹಿಗುತ್ತಾ ಅವನ ಎಲ್ಲ ಆಲೋಚನೆಗಳಿಗೂ ಒಗ್ಗುತ್ತ, ಬಗ್ಗುತ್ತ, ಬಾಗುತ್ತ, ಬಳುಕುತ್ತ ಸಾಗುತ್ತಿರುವುದೇ ಇದಕ್ಕೆ ಸಾಕ್ಷಿ. ಭಾಷೆ ಬೆಳೆದಂತೆ ಮಾನವನಿಗೆ ಅದರ ವೈವಿಧ್ಯತೆ, ವೈಶಿಷ್ಟ್ಯತೆ ಹೊಳೆಯತೊಡಗಿತು. ಯಾವ ಸಂದರ್ಭಕ್ಕೆ ಯಾವ ಭಾಷೆ ಚೆಂದ, ಯಾವ ಭಾವನೆಯ ಅಭಿವ್ಯಕ್ತಿಗೆ ಯಾವ ರೀತಿಯ

ಭಾಷೆಯನ್ನು ಬಳಸಿದರೆ ಸೂಕ್ತ ಎಂದು ಚಿಂತಿಸಿದ. ವೈವಿಧ್ಯತೆಯನ್ನು ಕಂಡುಕೊಂಡ. ಜೊತೆಜೊತೆಗೆ ಭಾಷೆಯನ್ನು ಶಾಸ್ತ್ರೀಯವಾಗಿ ಬೆಳೆಸಿದ. ಪರಿಣಾಮವಾಗಿ ಛಂದಸ್ಸು, ಅಲಂಕಾರ, ವ್ಯಾಕರಣಗಳನ್ನೊಳಗೊಂಡ ಭಾಷಾವಿಜ್ಞಾನ ರೂಪುಗೊಂಡಿತು. ಪ್ರತಿಯೊಂದು ಭಾಷೆಯೂ ತನ್ನದೇ ಆದ ಜಾಯಮಾನವನ್ನು ರೂಢಿಸಿಕೊಂಡಿತು. ಹೀಗಾಗಿ ಒಂದು ಘಟ್ಟದಲ್ಲಿ ಕೇವಲ ವ್ಯವಹಾರ ಮಾಧ್ಯಮವಾಗಿದ್ದ ಭಾಷೆ ಕಾಲಕಳೆದಂತೆ ಒಂದು ಅದ್ಭುತ ಶಕ್ತಿಯಾಯಿತು. ಅವನ ಅಂತಸ್ತು ವರ್ಚಸ್ಸುಗಳನ್ನು ನಿರ್ಧರಿಸುವ ಸಾಧನವಾಯಿತು. ಇನ್ನು ಬರಹ ಮುದ್ರಣಗಳು ಬಂದ ಮೇಲಂತೂ ನಮ್ಮ ಬದುಕಿನಲ್ಲಿ ಭಾಷೆ ಪ್ರಬಲ ಅಸ್ತ್ರವಾಗಿರುವುದು ಸತ್ಯವೆಂದು ಹೇಳಬಹುದು.

ಜನಸಾಮಾನ್ಯರ ಬದುಕು ಮತ್ತು ಭಾಷೆಯೆಡನೆ ಅವಿನಾಭಾವ ಸಂಬಂಧವನ್ನು ಹೊಂದಿರುವ ನಾಣ್ಣುಡಿಗಳು ಸಾಂಸ್ಕೃತಿಕ ಪರಂಪರೆಯ ಅನನ್ಯ ಅಭಿವ್ಯಕ್ತಿಗಳಾಗಿ ಕಾಣಿಸಿಕೊಂಡಿವೆ. ಸಮುದಾಯವೊಂದರ ಅನುಭವ ಭಾವನೆ ಮತ್ತು ಆಲೋಚನೆಗಳು ಅವುಗಳ ವಸ್ತು ಮತ್ತು ಆಶಯವನ್ನು ರೂಪಿಸಿವೆ. ಕಾಲಕಾಲಕ್ಕೆ ಸಮಾಜ ತೆಗೆದುಕೊಂಡು ನಿಲುವುಗಳು ನೀತಿ ನಿರ್ಣಯಗಳೂ ಅಲಿಖಿತ ಕಟ್ಟಳೆಗಳಂತೆ ದಾಖಲೆಯಾಗಿವೆ. ಒಂದು ಸಮಾಜದಲ್ಲಿ ಒಬ್ಬ ವ್ಯಕ್ತಿ ತಾನು ಜೀವನದಲ್ಲಿ ಕಂಡಂತ ಸತ್ಯವೆನೋ ತನಗೆ ಸರಿ ಅಥವಾ ತಪ್ಪು ಎನಿಸಿದನ್ನೋ ಮಾನವ ಸ್ವಭಾವ ಸಹಜವಾಗಿ ತನ್ನ ಮಕ್ಕಳಿಗೋ ಅಥವಾ ಇತರರಿಗೊ, ಮುಂದಿನವರಿಗೂ ಮಾರ್ಗದರ್ಶಿಯಾಗಲೆಂದು ಹೇಳಲು ಪ್ರಯತ್ನಿಸಿರಬೇಕು. ಅದು ಹೇಗೆ ಹೇಳಿದರೆ ಮನಸ್ಸಿಗೆ ನಾಟುತ್ತದೆ, ನೆನಪಿನಲ್ಲಿ ಉಳಿಯುತ್ತದೆ. ಒಬ್ಬರಿಂದ ಮತ್ತೊಬ್ಬರಿಗೆ ತಲೆಮಾರಿನಿಂದ ತಲೆಮಾರಿಗೆ ಮುನ್ನೆಡೆಯುತ್ತದೆ. ಎಂದೆಲ್ಲಾ ಯೋಚಿಸಿ ಫಲವೇ ಸೂತ್ರಪ್ರಾಯವಾದ ಪ್ರಾಸಬದ್ಧವಾದ ಅಲಂಕಾರಯುಕ್ತವಾದ ನಾಣ್ಣುಡಿಗಳು ಎನ್ನಬಹುದು.

ಜನಪದ ಸಾಹಿತ್ಯದ ಜನಪ್ರಿಯ ಪ್ರಕಾರವಾದ ನಾಣ್ಣುಡಿ ಬುದ್ಧಿ ಪ್ರಧಾನವಾದದ್ದು ಅದು ಜನ ಜೀವನದ ಅನುಭವದ ವಾಕ್ಯಗಳಾಗಿವೆ. ಜನಪದ ಸಾಹಿತ್ಯ ಹಲವು ಪ್ರಕಾರಗಳಿಂದ ಲಾವಣಿ, ಜನಪದ ಗೀತೆ, ಕಥೆ ಒಗಟುಗಳಂತೆ ನಾಣ್ಣುಡಿಗಳು ಅದರದ್ದೇ ಆದ ಪ್ರಮುಖ ಸ್ಥಾನವನ್ನು ಪಡೆದಿದೆ. ಇವುಗಳಲ್ಲಿ ಜೀವನದ ನೈಜ ಚಿತ್ರವಿದೆ. ಮತ್ತು ಬದುಕನ್ನು ತಿದ್ದಿ ಸರಿಮಾಡಬಲ್ಲ ಶಕ್ತಿಯಿದೆ. ಇವು ಒಂದು ಪ್ರದೇಶದ ಸಾಮಾಜಿಕ, ಸಾಂಸ್ಕೃತಿಕ ಜೀವನ ಚಿತ್ರಣವನ್ನೊಳಗೊಂಡ ಅಲಿಖಿತ ಇತಿಹಾಸವಾದರೆ, ಇನ್ನೊಂದು ದೃಷ್ಟಿಯಲ್ಲಿ ಜನಸಾಮಾನ್ಯರ ಬಾಳನ್ನು ರೂಪಿಸುವ, ನಿಯಂತ್ರಿಸುವ ವಿಧಿ ಶಿಕ್ಷಿಸುವ, ರಕ್ಷಿಸುವ ಧೈರ್ಯ ತುಂಬುವ ದಾರಿ ತೋರಿಸುವ ತೊಂದರಗೆ ಸಿಲುಕಿದಾಗ ಸಮಾಧಾನ ಹೇಳುವ ಸಾಂತ್ವನಗೊಳಿಸುವ ಮನಸ್ಸಿನ ಹಣತೆ ಕಳೆಯುವ ತೊಳೆಯುವ ಮದ್ದಾಗಿ ಬಳಕೆಯಾಗುತ್ತದೆ. ಹೀಗಾಗಿ ನಾಣ್ಣುಡಿಗಳು ಹಲವು ವಿಷಯದ ಹಲವು ಭಾವದ ಹಲವು ಅಭಿವ್ಯಕ್ತಿಯಾಗಿ ಸೂಕ್ತ ಸಂದರ್ಭದಲ್ಲಿ ತಾಳಿದ ಯೋಗ್ಯ ನಿರ್ಣಯಗಳಾಗಿವೆ. ಇವು ಒಮ್ಮೆ ಮನುಷ್ಯನ ಬುದ್ಧಿ ಮತ್ತೆಯಾದರೆ ಮತ್ತೊಂದು ಕಡೆ

ಆಲೋಚನಾ ದೀಪಿಕೆಯಾಗಿ ಬಳಕೆಯಾಗುತ್ತದೆ. ಹೀಗಾಗಿ ಒಳನುಡಿಗಳಲ್ಲಿ ಬಳಕೆಯಾಗುವ ನಾಣ್ಣುಡಿಗಳನ್ನು ಸಾಮಾಜಿಕ, ಸಾಹಿತ್ಯಕ, ಭಾಷಿಕ, ಮತ್ತು ಸಾಂಸ್ಕೃತಿಕ ಎಂದು ನಾಲ್ಕು ವಿಭಾಗ ಮಾಡಿಕೊಂಡು ಕೆಲವು ನಾಣ್ಣುಡಿಗಳನ್ನು ಇಲ್ಲಿ ಚರ್ಚಿಸಲಾಗಿದೆ.

**೩.೧. ಸಾಮಾಜಿಕ ನಾಣ್ಣುಡಿಗಳು :**

ನಾಣ್ಣುಡಿಗಳು ಒಂದು ರಾಷ್ಟ್ರದ ಸಾಮಾಜಿಕ ಜೀವನ ಚಿತ್ರಗಳನ್ನೊಳಗೊಂಡ ಅಲಿಖಿತ ಶಾಸನಗಳು. ನಾಣ್ಣುಡಿಗಳು ಜನಪದರ ಆಸ್ತಿಯಾಗಿ ಅವರು ಕಂಡುಂಡ ಅನುಭವದ ಪ್ರಯೋಗಶೀಲ ಜೀವನದ ಫಲಿತಾಂಶಗಳಿಂದ ಕೂಡಿದಂತವು ಆಗಿವೆ. ಇವುಗಳಲ್ಲಿ ಸಾಮಾಜಿಕ ಹಿತ ಮುಖ್ಯವಾಗುತ್ತದೆ. ಆದಿಮಾನವನಿಂದ ಹಿಡಿದು ಇಂದಿನವರೆಗೆ ತನ್ನ ಸುಭದ್ರತೆಗಾಗಿ ಸಾಂಘಿಕ ಜೀವನದ ಅವಲಂಬಿಸಿ ಬಂದಿದ್ದಾನೆ ಹೀಗಾಗಿ ಸಮಾಜದ ಅನೇಕ ಕಟ್ಟು ಕಟ್ಟಳೆ ನೀತಿ–ರೀತಿ ಮನೋಧರ್ಮಗಳನ್ನು ಆಚರಿಸುತ್ತಾ ಬಂದಿದ್ದಾನೆ. ಅದಕ್ಕೆ ವಿರುದ್ಧವಾಗಿ ಅದರ, ತಿರಸ್ಕಾರ ಮಾಡದಂತೆ ಟೀಕೆ. ವಿಡಂಬನೆ ಸಂವೇದನೆಗಳಿಗೆ ತೀವ್ರ ಚಾಟಿಯೇಟುಗಳನ್ನು ನೀಡುತ್ತಾನೆ. ಯಾವುದೇ ಆಚಾರ–ವಿಚಾರ ಪದ್ಧತಿ, ನಂಬಿಕೆ ನಡಾವಳಿ, ಕಷ್ಟ, ನಷ್ಟ ಗುಣ ದೋಷ ಸಾಮರಸ್ಯಗಳಿಂದ ಅಸಾಧ್ಯವೂ ವಿಚಾರ ಪ್ರಚೋದಕವೂ ಆಗಿದೆ. ಅವುಗಳಲ್ಲಿ ಹೋಲಿಕೆ ಕೌಟುಂಬಿಕ ರಚನೆಗಳ ಮೌಲ್ಯತೆಗಳಿವೆ. ಆಸೆ, ಆಕಾಂಕ್ಷೆ, ಕ್ಷಾಮ–ಪ್ರೇಮದ ಬದುಕು ಜೀವನ ವಿಧಾನಗಳಲ್ಲಿ ನಿರೀಕ್ಷೆಯಿಟ್ಟುಕೊಳ್ಳಲಾಗಿದೆ. ದಾರಿ ತಪ್ಪಿದ ಅವನನ್ನು ನಾಣ್ಣುಡಿಗಳಿಂದ ತಿದ್ದಿರುವುದುಂಟು. ಇವುಗಳನ್ನು ಅರ್ಥ ಮಾಡುವಾಗ ಪೂರ್ವಕಲ್ಪಿತ ಧೋರಣೆಯಲ್ಲೇ ಅರ್ಥಮಾಡಲಾಗದು ಅದು ಹುಟ್ಟಿದ ಸನ್ನಿವೇಶ ಸಂದರ್ಭಗಳ ಹಿನ್ನೆಲೆಯಿಂದ ವಿಶ್ಲೇಷಿಸಬೇಕಾಗುತ್ತದೆ. ಅದರಲ್ಲಿ ಸಾಮಾಜಿಕ ಅನುಭವ ಹಿನ್ನೆಲೆಯನ್ನು ಸಹ ಗಮನಿಸಬೇಕು.

ನಾಣ್ಣುಡಿಯು ಸಮಾಜದ ಅನ್ಯಾಯ, ಅಧರ್ಮ, ವಂಚನೆ, ಮೋಸ, ಡಾಂಭಿಕತೆ, ಮೇಲು, ಕೀಳು ಮೊದಲಾದವುಗಳ ವಿರುದ್ಧ ಧ್ವನಿಯನ್ನು ಎತ್ತಿ ಒಳ್ಳೆಯ ಸಂದೇಶ, ಜೀವನ ಮೌಲ್ಯಗಳನ್ನು ನೀಡುತ್ತಿದೆ. ನಾಣ್ಣುಡಿಗಳಲ್ಲಿ ಸರ್ವ ಹಿತಕ್ಕಾಗಿ ಪ್ರತಿಯೊಬ್ಬರು ಹೀಗೆಯೇ ಇರಬೇಕೆಂಬ ಕಟ್ಟು ಕಟ್ಟಳೆಗಳಿವೆ ಅವು ವಿಧಿ, ನಿಷೇಧ, ನಂಬಿಕೆ, ರೂಪದಲ್ಲಿರಬಹುದು. ಸರಿತಪ್ಪುಗಳನ್ನು ನಿರ್ದೇಶಿಸಬಹುದು. ನಾಣ್ಣುಡಿಯ ಮೂಲಕ ಸಮಾಜದ ಸಮನಾಧಕನ ಶೋಷಣೆ, ನುಡಿವಂತಿಕೆ, ಅಸೂಯೇ, ಮರ್ಯಾದೆ, ಸ್ವಭಾವ, ಆಸೆ, ನೋವು, ಕಾರ್ಯ ಸಾಧನೆಯ ಇತ್ಯಾದಿ ವಿಪುಲ ಸಂವೇದನಾ ವಿಚಾರಗಳನ್ನು ಪ್ರಶ್ನಿಸುವ ಮನೋಧರ್ಮವಿದೆ.

ನೇರ ನಿಷ್ಠುರ ಧೋರಣೆ, ಚಟುವಟಿಕೆ ಕಾಂತಿಯತೆ ನುಡಿಯಲ್ಲಿನ ನೀತಿಗಳು ಕವಿಯಲ್ಲಿ ಪಿಸುಗುಟ್ಟುತ್ತವೆ. ಇಂತಹ ಅನೇಕ ಮಾರ್ಮಿಕ ಹೋಲಿಕೆಗಳಿಂದ ಸಮಾಜ ಕೇಂದ್ರಿತವಾಗಿದೆ. ಹೀಗೆ ಸಮಾಜ ಜನಜೀವನದ ಹಲವು ಹಂತಗಳಲ್ಲಿನ ಹಲವು ಬಗೆಯ ನಾಣ್ಣುಡಿಗಳು ಪ್ರಚಲಿತದಲ್ಲಿವೆ. ಅವರವರ ಕಸುಬಿಗೆ ಸಂಸಾರಕ್ಕೆ ಸಂಗ

ಸಂಬಂಧಗಳಿಗೆ ಶ್ರದ್ಧೆ-ಸಾಧನೆಗಳಿಗೆ ಅನುಗುಣವಾಗಿ ನಾಣ್ಣುಡಿಗಳು ಬಳಕೆಗೆ ಬರುವುದು. ಜಾತಿ, ಕುಲ ಗೋತ್ರ ಸಹಿತವಾದ ಭಾರತೀಯ ಸಮಾಜದಲ್ಲಿ ಆಯಾ ಜಾತಿಯ ಜೀವನಕ್ರಮ ವೃತ್ತಿ ಗುಣ ಇವುಗಳನ್ನು ಹಿಡಿದು ಹೊಗಳುವ ಇಲ್ಲವೇ ತೆಗಳುವ ನಾಣ್ಣುಡಿಗಳು ಪ್ರಚಾರದಲ್ಲಿವೆ.

ಜಾತಿಯನ್ನು ಹಿಡಿದು ತೆಗಳುವ ಅಥವಾ ಹಂಗಿಸುವ ನಾಣ್ಣುಡಿಯನ್ನು ನೋಡುವುದಾದರೆ ಬೇಡಕಳ್ಳ ಮಾದಿಗ ಸುಳ್ಳ" ಎಂಬುದುರಲ್ಲಿ ವ್ಯಾಪ್ತಿ ದುಡಿಯುತ್ತಿದ್ದರು. ಹಗಲು-ರಾತ್ರಿ ಎನ್ನದೆ ದುಡಿಯುವ ಆ ಶ್ರಮಜೀವಿಗಳು ಹದಿನೈದು ದಿನಕ್ಕೊಮ್ಮೆಯೇ ಅಥವಾ ತಿಂಗಳಿಗೊಮ್ಮೆಯೊ ವಿಶ್ರಾಂತಿಯ ನೆಪದಿಂದ ಮನೆಗೆ ಹೋಗಿ ಮತ್ತೆ ಮನೆಗೆ ಬಂದಾಗ ಈಗ ಬರುವೆ, ನಾಳೇ ಬರುವೇ ಎಂದು ಕೇಳಲು, ಶ್ರೀಮಂತ ಅವರ ಮನೆಗೆ ಬಂದಾಗ ಈಗ ಬರುವೆ ನಾಳೇ ಬರುವೆ ಎಂದು ಹಲವು ಬಾರಿ ಹೇಳಿರಬೇಕು. ಹೀಗಾಗಿ 'ಶ್ರೀಮಂತ ಮಾದಿಗ ಸುಳ್ಳ' ಎಂದು ಕರೆದಿರಬೇಕು ಮುಂದೊಂದು ದಿನ ಆ ಮಾತು ರೂಢಿಗೆ ಬಂದಿರಬೇಕು. ಅದೇ ರೀತಿ 'ಬೇಡ ಕಳ್ಳ' ಎಂಬುದು ಬಹುಶಃ ರಾತ್ರಿಯ ಕಳ್ಳರು ಅಂದರೆ ರಾತ್ರಿಕಳ್ಳತನ ಹೆಚ್ಚಾಗಿ ಮಾಡುವುದರಿಂದ ಬೇಡ ಕಳ್ಳನೆಂದು ರೂಢಿಗೆ ಬಂದಿರಬೇಕು.

ಸಾಮಾನ್ಯವಾಗಿ ವ್ಯಕ್ತಿಯ ಹೆಸರಿನಿಂದಲೇ ಹುಟ್ಟಿಕೊಂಡ ನಾಣ್ಣುಡಿಗಳು ಆ ಜನಾಂಗದ ಕುಲಕಸುಬು ಅವರ ವಿಧಾನ, ಸ್ವಭಾವ ಆಹಾರ ಪದ್ಧತಿ ಇತ್ಯಾದಿ ವಿವರಗಳನ್ನೊಳಗೊಂಡ ನಾಣ್ಣುಡಿಗಳ ಚೌಕಸ್ಥಿತಿ ಉದಾಹರಣೆ: "ಏಳೂರು ಮಾದಿಗರು ಸೇರ್ಕಂಡು ತೊಗಲು ಹದಗೆಡಿಸದ್ದಾರಂತೆ" ಎಂಬುದು ಜಾತಿಸೂಚಕವಾದ ನಾಣ್ಣುಡಿಯಾಗಿದ್ದರಿಂದ ಅದು ಆ ಜನಾಂಗದಲ್ಲಿರುವ ಅಸಂಘಟನೆ, ಅಸಹಕಾರ ಮತ್ತು ಅದರಿಂದಾದ ದುರಂತದ ಅಂಶಗಳನ್ನು ಧ್ವನಿಸುವುದು ಹಾಗೇ ಇನ್ನು ಹಲವಾರು ನಾಣ್ಣುಡಿಗಳನ್ನು ನೋಡಬಹುದು. 'ಪಾಪ ಅಂತ ಪಾಲು ಹಾಕಿದರೆ ಎಲುಗ ಅಂತ ವಾಪಸು ಕೊಟ್ಟರಂತೆ' 'ಆಗೊದ ಮೊತಿಗೆ ರಾಗಿ ಯಾಕೆ ಬೀಸ್ತಿ' 'ಎತ್ತು ಮಾರಿ ಕ್ವಾಣ ತಕ್ಕಂಬಾ' 'ನನ್ನದೆ ತಿರುಕ ಸೆಳ್ಳೆ ನಿನಗೆಲ್ಲ ಕೊಡ್ಲಪ್ಪ ಹುಟ್ಟ ಸೆಳೆ' ಇನ್ನು ಮುಂತಾದ ನಾಣ್ಣುಡಿಗಳನ್ನು ನೋಡಬಹುದು ಅವು.

"ಒಕ್ಕಲುಗಿತ್ತಿಗೆ ಮಡಿಯಿಲ್ಲ; ಹುಳ್ಳಿ ಹೊಲಕ್ಕೆ ಗೊಬ್ಬರಿಲ್ಲ"

ಒಕ್ಕಲುಗಿತ್ತಿಗೆ ನಿತ್ಯ ಹೊಲಗದ್ದೆಗಳಲ್ಲಿ ಕೆಲಸ, ಮಡಿ ನೊಡದೆ ನಿಗದಿತ ವಾದ ಮಾಡುತ್ತಾಳೆ. ಆಕೆಗೆ ಮಡಿವಂತರ ಕೀಟಲೆ ಇದೆ. ಹಾಗೆ ಹುರುಳಿ ಬೆಳೆಗೆ ಸತ್ವವಿಲ್ಲದ ಭೂಮಿಗೆ ಹಾಕುತ್ತಾರೆ.

"ಆನೆ ಹೋದಲಿ ದಾರಿ; ಶೆಟ್ಟಿ ಬಿಟ್ಟಲ್ಲೇ ಪಟ್ಟಣ"

ಎಂಬ ಈ ನಾಣ್ಣುಡಿಯಲ್ಲಿ ಸಾದೃಶ್ಯ ಗುಣವನ್ನು ಗ್ರಹಿಸಬೇಕು. ಆನೆ ಅತ್ಯಂತ ತೂಕದ ಪ್ರಭಾವಯುತವಾದ ಪ್ರಾಣ. ಅದು ನಡೆದರೆ ಅದೇ ದಾರಿಯಾಗುತ್ತದೆ. ಹೀಗೆ

ಉತ್ತರಾರ್ಧದಲ್ಲಿ ಶೆಟ್ಟಿ ಏಣಿಗನ ಗಾಂಭೀರ್ಯ ಚಮತ್ತಕಾರವೆಂದರೆ ಆತ ಇದ್ದಲ್ಲೇ ಪಟ್ಟನ 'ಅಂದರೆ ಕಸುಬಿನಲ್ಲಿನ ಜಾಣ್ಮೆ, ಸಾಮರ್ಥ್ಯಗಳು ಆತನಿಗೆ ರಕ್ತಗತವಾಗಿ ಬಂದಿರುತ್ತವೆ ಎಂಬುದನ್ನು ನಾಣ್ಣುಡಿ ಹೇಳುತ್ತದೆ. ಇದ್ದರಿಂದ ಮೋಸಗಾರನಿಗೆ ಮೋಸವಾಗದು ಹೀಗಾಗಿ ಮೋಸದಲ್ಲಿ ಪಳಗಿದ ಶಟ್ಟಿಯ ಸ್ವಭಾವಕ್ಕೆ ಕನ್ನಡಿ ಹಿಡಿದಿದೆ.

"ಅಗಸನ ಅಂಗೈಲಿ ಉಣ್ಣಬಹುದು, ಕೆಲಸಿಗನ ಅಂಗಳದಲ್ಲಿ ಉಣ್ಣಕಾಗಲ್ಲ"

ಅಗಸ ನೀರಲ್ಲೇ ಇರುವಾತ ಕೈಕೊಳೆ ಕಳೆದುಕೊಂಡಿದ್ದು ಹಾಗಾಗಿ ಅಂಗೈಲಿ ಉಣ್ಣಬಹುದು. ಕೆಲಸಿಗ (ಕ್ಷೌರಿಕನ) ಅಂಗಳವೂ ಕೊಳಕಾಗಿದ್ದು ಉಣ್ಣಲಾಗುವುದಿಲ್ಲ. ಇದರಲ್ಲಿ ಸಾರ್ವತ್ರಿಕ ಸತ್ಯ ಕಾಣದು ಹಾಗಾಗಿ ವೈಯಕ್ತಿಕ ನೆಲೆಯಲ್ಲಿ ನಿಲ್ಲುತ್ತದೆ. ಹೀಗೆ ಗ್ರಾಮೀಣ ಜನರ ಭಾಷಾ ವೈಶಿಷ್ಟತೆ ನಾಣ್ಣುಡಿಗಳ ಮೂಲಕ ಕಂಡು ಬರುತ್ತದೆ

**೩.೨. ಸಾಹಿತ್ಯಕ ನಾಣ್ಣುಡಿಗಳು :**

ಸಾಹಿತ್ಯಕ್ಕೆ ಸಲ್ಲುವ ನಿರ್ದಿಷ್ಟ ಗುಣ ಲಕ್ಷಣಗಳೆಲ್ಲಾ ನಾಣ್ಣುಡಿಗಿದೆ. ಕೇವಲ ನೀತಿ ಅಥವಾ ಅನುಭವಿಗಳಿಗಾಗಿಯೇ ಅವನ್ನು ಯಾರೂ ನೆನಪಿನಲ್ಲಿಟ್ಟುಕೊಳ್ಳುತ್ತಿರಲಿಲ್ಲ. ಉಕ್ತಿ ಚಮತ್ಕಾರ ನಾಣ್ಣುಡಿಗಳ ಹೆಗ್ಗುಣಗಳಲ್ಲೊಂದು. ನಾಣ್ಣುಡಿಗಳಲ್ಲಿ ವ್ಯಕ್ತವಾಗುವ ಸಾಹಿತ್ಯಕ ಗುಣ, ಸ್ವಂತಿಕೆ, ಕಸುವು, ಚೆಲುವು ಸಂಸ್ಕೃತಿಗಳನ್ನು ಕಂಡು ಆಧುನಿಕ ವಿದ್ವಾಂಸರೂ ಮೆಚ್ಚಿ ಮಾನ್ಯತೆ ನೀಡಿದ್ದಾರೆ. ಇವು ಸಾಹಿತ್ಯಕ ದೃಷ್ಟಿಯಿಂದಲೂ ಗಮನಾರ್ಹವಾಗಿವೆ, ಈ ನಾಣ್ಣುಡಿಗಳ ಸಾಹಿತ್ಯಕ ಮೌಲ್ಯವನ್ನು ಪರಿಶೀಲಿಸೋಣ:

'ಕಾಣದೂರಿಗೆ ನಾಲಗೆಯೇ ದಾರಿ' ಎಂಬುದನ್ನು ಕನ್ನಡದಲ್ಲಿ ಜನಪ್ರಿಯ ನಾಣ್ಣುಡಿ. ಇದು ಎಲ್ಲಾ ಜನಾಂಗದಲ್ಲೂ ಪ್ರಚಲಿತದಲ್ಲಿದೆ. 'ಕಾಣದೂರಿಗೆ ನಾಲಗೆಯೇ ದಾರಿ' ವಾಕ್ಯದಲ್ಲಿ 'ನಾಲಗೆಯೇ ದಾರಿ' ಉನ್ನುವ ಉಕ್ತಿ ವಿಶೇಷವನ್ನು ಗಮನಿಸಬಹುದು. 'ಬಾಯಿ ಇದ್ದವರು ಬರದಲ್ಲಿ ಗೆದ್ದರು' ಎಂಬ ನಾಣ್ಣುಡಿಯೂ ಹೀಗೆ ಉಕ್ತಿ ಚಮತ್ಕಾರಗಳಲ್ಲೊಂದು. ನಾಣ್ಣುಡಿಗಳಲ್ಲಿ ಪ್ರಸಿದ್ಧಾರ್ಥಕ್ಕಿಂತ ಗೂಢಾರ್ಥ ಅಥವಾ ವ್ಯಾಪಕಾರ್ಥ ಮುಖ್ಯ.

'ನಡ್ಕಂಡೆ; ಪಡ್ಕಂಡೆ' ಎನ್ನುವ ನಾಣ್ಣುಡಿ ಚಿತ್ರದುರ್ಗ ಜಿಲ್ಲೆಗೆ ಮಾತ್ರ ಅನ್ವಯಿಸುವಂಥದ್ದು. ಇದು ಶರಣ ತಿಪ್ಪೇಸ್ವಾಮಿಯ ಪವಾಡದ ಹಿನ್ನೆಲೆಯಲ್ಲಿ ಹುಟ್ಟಿಕೊಂಡಿದೆ. 'ನಾಯಕನಹಟ್ಟಿಯಲ್ಲಿರುವ ಹಿರೆಕೆರೆ, ಚಿಕ್ಕಕೆರೆಗಳನ್ನು ಕಟ್ಟಿಸುವಾಗ ಪಾಳೆಯಗಾರ ಜೋಡಿಮಲ್ಲಪ್ಪನಾಯಕನಲ್ಲಿ ಇದ್ದ ಹಣ ಮುಗಿಯಿತು. ಆಗ ತಿಪ್ಪೇಸ್ವಾಮಿ ಪ್ರತಿನಿತ್ಯ ಸಂಜೆ ಕೆರೆ ಬಳಿ ಬಂದು ಕೆಲಸಗಾರರಿಗೆ ತಂತಮ್ಮ ಮುಂದೆ ಒಂದು ಮರಳು ಗುಡ್ಡೆಯನ್ನು ಮಾಡಿಕೊಂಡು ನಿಲ್ಲುವಂತೆ ಹೇಳುತ್ತಿದ್ದ. ಹಾಗೆ ಮಾಡಿ ನಿಂತ ಮೇಲೆ ತಿಪ್ಪೇಸ್ವಾಮಿ ತನ್ನ ಕೈಯಲ್ಲಿನ ದಂಡದಿಂದ ಎಲ್ಲ ಮರಳಿನ ಗುಡ್ಡೆಗಳನ್ನು ಮುಟ್ಟುತ್ತಾ ಬರುತ್ತಿದ್ದನಂತೆ, ಅವರವರ ಶ್ರಮಕ್ಕೆ ತಕ್ಕಷ್ಟು ಹಣ ಅವರಿಗೆ ಅಲ್ಲಿ ಸಿಗುತ್ತಿತ್ತು. ಕೆಲಸ ಮಾಡದೇ ಹೋದವರಿಗೆ ಬರಿ ಮರಳು ರಾಶಿಯೇ ಉಳಿಯುತ್ತಿತ್ತಂತೆ.

ಹೀಗೆ ಕೆಲಸ ಮಾಡಿ ನಡೆಕೊಂಡವರು ಅವರ ಫಲವನ್ನು ಶರಣನಿಂದ ಪಡೆದುಕೊಂಡರು. ಇಂದೂ ಇದು ಪ್ರಚಾರದಲ್ಲಿದ್ದು, ಪ್ರಾದೇಶಿಕತೆಯಿಂದ ಆಚೆ ತನ್ನ ಕೈಯನ್ನು ವಿಸ್ತರಿಸಿಕೊಂಡಿದೆ. ತನ್ನ ಕುಲ, ಜಾತಿಯ ಹೊರಗೂ, ಅಪರಿಚಿತ ಕುಟುಂಬದೊಡನೆ , ಸ್ನೇಹ ಸಲುಗೆ, ವಿಶ್ವಾಸ ಪಡೆದುಕೊಂಡೂ ತನ್ನವರಿಗಿಂತಲೂ ಹೆಚ್ಚು ವಿಶ್ವಾಸವನ್ನೇ ಹೊಂದಿದ್ದೂ ಅವರಿಬ್ಬರ ಸ್ನೇಹ ಗಾಢವಾಗಿ ಬೆಳೆದೂ ಒಂದು ಕುಟುಂಬದಂತೆ ಇದ್ದಾಗ ನಡೆಕೊಂಡೆ ಪಡಕೊಂಡೆ ಎಂಬ ನಾಣ್ಣುಡಿ ಬಳಕೆಯಾಗಿರಬಹುದು.

ಗತಕಾಲದ ಮಾನವನ ಜೀವನವನ್ನು ಚಿತ್ರಿಸುವ ನಾಣ್ಣುಡಿಗಳೂ ಇಲ್ಲಿ ಹೆಚ್ಚು ಪ್ರಚಲಿತದಲ್ಲಿವೆ. ಇದರಿಂದ ಪೂರ್ವಕಾಲದ ಸಾಮಾಜಿಕ ಸ್ಥಿತಿಗತಿ, ರೀತಿನೀತಿ, ಆಡಳಿತ ಪದ್ಧತಿಗಳನ್ನು ತಿಳಿದುಕೊಳ್ಳಬಹುದು. 'ದೊರೆ ಮುನಿದರು ನೆರೆ ಮುನಿಬಾರದು' ಎಂಬ ನಾಣ್ಣುಡಿ ಊರಿಗೊಬ್ಬ ದೊರೆ ಇರುತ್ತಿದ್ದನೆಂಬ ಅಂಶವನ್ನು ಹಿಡಿಟ್ಟಿವೆ. ಹಾಗೆಯೇ ನೆರೆಹೊರೆಯ ಜನರೊಂದಿಗೆ ವ್ಯಕ್ತಿ ಹೊಂದಿದ ಸಂಬಂಧಗಳು ಮಧುರವಾಗಿದ್ದ ಪಕ್ಷದಲ್ಲಿ ಎಂತಹ ತೊಂದರೆಗೊಳಗಾಗಿದ್ದರೂ ಆ ವ್ಯಕ್ತಿಗೆ ರಕ್ಷಣೆ ದೊರೆಯುವುದು. ಸಮಾಜದ ನೆರೆಹೊರೆಯ ಜನರೊಂದಿಗೆ ಪ್ರೀತಿ ಗಳಿಸಿದ್ದಲ್ಲಿ, ದೊರೆ ಕೊಡುವಂಥ ಕಠಿಣ ಶಿಕ್ಷೆ ಆತನಿಗೆ ಯಾವ ಲೆಕ್ಕ ಎಂಬ ಸೂಕ್ಷ್ಮ ಅಂಶಗಳನ್ನು ಇಂಥ ನಾಣ್ಣುಡಿಗಳಲ್ಲಿ ಕಾಣಬಹುದು.

'ತಾನು ಕಳ್ಳ ಪರರನಂಬ' 'ಚಿತ್ತಾರನೆಲ್ಲಾ ಮಸಿನುಂಗೋಯ್ತು' 'ಎಳ್ಳು ಎಣ್ಣೆಗೆ ಒಣಗಿದ್ರೆ ಮಿಳ್ಳೆ ಬೀಜಯಾಕೆ ಒಣಗಿತು' ಎಂಬಂಥ ನಾಣ್ಣುಡಿಗಳಲ್ಲಿ ಉಪಮೆ, ಪ್ರಾಸ, ಉತ್ಪ್ರೇಕ್ಷೆ, ಅತ್ಯುಕ್ತಿ, ಅಚ್ಚರಿಯನ್ನೂ ಕಾಣಬಹುದು.

'ಉಂಡೇನೊ ಅಳಿಯ ಅಂದ್ರೆ ಉಂಡೆ ಕಣತ್ತೆ ನಿನ್‌ಕುಂಡಿ ಪ್ರಸಾದ' ಎಂಬ ನಾಣ್ಣುಡಿಯನ್ನು ಅತ್ತೆಯ ಬಗೆಗೆ ಬೇಸರ ಹೊಂದಿದ್ದ ಅಳಿಯನೊಬ್ಬನ ಹತಾಶ ಭಾವನೆಯ ಅಭಿವ್ಯಕ್ತಿಯನ್ನು ಕಾಣಬಹುದು. 'ಹೊಸ್ದಾಗೆ ಅಗಸ ಗೋಣಿ ಎತ್ತಿ ಎತ್ತಿ ಹೊಗೆದ' ಎಂಬುದು ಜನಪ್ರಿಯ ನಾಣ್ಣುಡಿ. ಅಂತಹದೆ ಅಶಯವನ್ನು ಹೋಲುವಂಥ 'ಹೊಸಪಿರೇವುಕೆ ನನ್ಗಂಡ ಕಸಪರಕೆ ತಗೊಂಡ ಬರುಬರುತ್ತಾ ಬಾರುಕೋಲು ತಗೊಂಡ' ಎಂಬ ನಾಣ್ಣುಡಿಯನ್ನು ಸಹ ಕಾಣಬಹುದು.

'ಒಳಗೆ ಅಮ್ಮನ ಗ್ಯಾನ, ಮೇಲೆ ಗುಮ್ಮನ ಗ್ಯಾನ', 'ಬಾಯಾಗೆ ಬೆಲ್ಲ ಎದಿಯಾಗಿ ಕತ್ರಿ', 'ಅಗಲಾಗೆ ಉಣ್ಣೋದು; ಬಗಲಲ್ಲಿ ಕೈಚಾಚೋದು' ಎಂಬ ಅರ್ಥಗಭೀತ ನಾಣ್ಣುಡಿಗಳು ಮನುಷ್ಯನ ಸೋಗಲಾಡಿತನ, ದ್ವಿಮುಖ ನೀತಿ ಮತ್ತು ವಿಶ್ವಾಸ ದ್ರೋಹದ ಇನ್ನೊಂದು ಮುಖವನ್ನು ತೋರಿಸುತ್ತವೆ.

ಐತಿಹ್ಯ ಹಾಗೂ ಸ್ಥಳ ಮಹಾತ್ಮೆಯನ್ನು ಕುರಿತ ನಾಣ್ಣುಡಿಗಳು ದಲಿತ ಜನಾಂಗದಲ್ಲಿ ಇವೆ. ಅವು ಕುತೂಹಲವನ್ನು ಮತ್ತು ಧಾರ್ಮಿಕ ಹಿನ್ನೆಲೆಯ

ಪರಂಪರೆಯನ್ನು ತಿಳಿಸಿಕೊಡುವುವು. ಇಂಥ ನಾಣ್ಣುಡಿಗಳು ಒಂದು ಪ್ರದೇಶದ ಹಾಗೂ ಒಂದೇ ಜಾತಿಯವರಿಗೆ ಮಾತ್ರ ಅನ್ವಯಿಸುವಂಥವು. ಚಿತ್ರದುರ್ಗ ಪ್ರದೇಶದಲ್ಲೇ ಹೆಚ್ಚು ಚಾಲ್ತಿಯಲ್ಲಿರುವ ಹಾಗೂ ಜನಪ್ರಿಯವಾದ ನಾಣ್ಣುಡಿ 'ಬುಕ್ಕಂಬೂದಿ, ಗೌರಸಂದ್ರ' ಈ ನಾಣ್ಣುಡಿ ಎರಡು ಊರುಗಳ ಹೆಸರನ್ನು ಕುರಿತವು. 'ಬುಕ್ಕಂಬೂದಿ' ಮತ್ತು 'ಗೌರಸಂದ್ರ' ಎಂಬ ಹಳ್ಳಿಗಳು ಚಳ್ಳಕೆರೆ ತಾಲ್ಲೂಕಿನಲ್ಲಿ ಇವೆ. ಮಾರಿ ದೇವತೆಯ ಉತ್ಸವಕ್ಕೆ ಹೆಸರಾದ ಹಳ್ಳಿಗಳಿವು. ಬುಕ್ಕಂಬೂದಿಯಲ್ಲಿ ದೇವತೆಯ ಪ್ರತಿಷ್ಟಾಪನೆ ಮಾಡಿ ಪೂಜೆ ಸಲ್ಲಿಸಿ ಕೊಂಡಹಾಯುವ ಕಾರ್ಯಕ್ರಮ ಜರುಗಿದರೆ, ಗೌರಸಂದ್ರದಲ್ಲಿ ಮಾರಿ ದೇವತೆಗೆ ಪ್ರಾಣಿ ಬಲಿ ನಡೆಯುವುದು. ಅಲ್ಲಿ ನೆರೆದ ಭಕ್ತಾಧಿಗಳು ನಾನಾ ರೀತಿಯ ಹರಕೆಗಳನ್ನು ತೀರಿಸುವರು. ಉತ್ಸವದಲ್ಲಿ ಭಾಗವಹಿಸಲು ಆಗಮಿಸಿದ ಧಾರ್ಮಿಕ ಕಲಾವಿದರು (ಮೈಲಾರಲಿಂಗನ ಗೊರವರು ಮತ್ತು ಎಲ್ಲಮ್ಮನ ಜೋಗತಿಯವರು) ಅರಿಶಿಣದ ಪುರಿ ಹಾಗೂ ಕುಂಕುಮದ ಬೊಟ್ಟನ್ನಿಡುವುದು ಸಾಂಪ್ರದಾಯಿಕ ಆಚರಣೆ. ಮಾರಿ ಉತ್ಸವ ಮುಗಿಯುವವರೆಗೂ ಭಕ್ತರ ಹಣೆಗೆ ಹಚ್ಚಿದ ಕುಂಕುಮ ಬೊಟ್ಟು ಹಾಗೂ ಕೊಂಡದ ಬೂದಿ ಹಣೆಯಲ್ಲಿ ಇರುವುದು. ಅದನ್ನು ನೋಡಿದ ಜನರು 'ಬುಕ್ಕಂಬೂದಿ ಗೌರಸಂದ್ರ ಬೊಟ್ಟು' ಎಂದು ಗುರುತಿಸುವುದಲ್ಲದೆ ಸಂದರ್ಭಕ್ಕೆ ತಕ್ಕ ಹಾಗೆ ಈ ನಾಣ್ಣುಡಿಯನ್ನು ಬಳಸುವುದುಂಟು. ಇನ್ನು 'ಅಡ್ಡಿ ಇಲ್ದೆ ಬಂತು ದೊಡ್ಡೇರಿ ಮೇಲೆ', 'ಉಣ್ಣಾಕೆ ಉಡಾಕೆ ಹೊಂಬಾಳೆ ಅಕ್ಕಿ, ಮುಂಡು ಮೋಸಾಕೆ ದೇವ್ರಳ್ಳಿ ಅಕ್ಕಿ' ಈ ನಾಣ್ಣುಡಿಗಳು ಪ್ರಾಸಕ್ಕಾಗಿ ಬಳಕೆಯಾದ ನಾಣ್ಣುಡಿಗಳು ಎಂದು ಎನಿಸಿದರೂ ಇಲ್ಲಿ ದೊಡ್ಡೇರಿ – ದೇವ್ರಳ್ಳಿ ಎಂಬ ಸ್ಥಳನಾಮಗಳು ಗಮನಾರ್ಹ.

ಜನಪದರು ಪ್ರಕೃತಿಯ ಮಡಿಲಲ್ಲಿ ವಾಸಿಸುವಂಥವರು, ಹಾಗಾಗಿ ನಿಸರ್ಗದಲ್ಲಿನ ವಸ್ತುಗಳು ಇವರ ನಾಣ್ಣುಡಿಗಳಿಗೆ ವಸ್ತುಗಳಾಗಿವೆ. ಮಳೆ, ಉದ್ಯೋಗ, ಜಾತಿ, ಧರ್ಮ ಇತ್ಯಾದಿಗಳು ಹೇಗೆ ನಾಣ್ಣುಡಿಗಳ ಸೃಷ್ಟಿಗೆ ಕಾರಣವಾಗಿವೆಯೋ ಹಾಗೆಯೇ ಪ್ರಾಣಿ–ಪಕ್ಷಿಗಳು ವಸ್ತುವಾಗಿವೆ. ಮಾನವನ ಭಾವನೆಗಳನ್ನು ಪ್ರಾಣಿಗಳಲ್ಲಿ ಕಂಡುಕೊಳ್ಳುವ ಪ್ರಯತ್ನ ಸಂವಾದಾತ್ಮಕ ನಾಣ್ಣುಡಿಗಳಲ್ಲಿ ಕಾಣಬಹುದು.

೧. 'ಬರ್ಬಾರ್ದು  ನೆಂಟ್ರು ಬಂದಿದ್ರವ್ವ
ಬಾರ್ಬರನಕ್ಕಿ ತಂದಿದ್ರವ್ವ
ಕೊಯ್ತವಿ ಪಯ್ತಿವಿ ಅಂತ ಮಾತಾಡ್ತಿದ್ರೇನಕ್ಕ'

೨. 'ಏನವ್ವ; ಹಂಗಂತ ಮಾತಾಡ್ತಿದ್ರು
ಅಂದ್ರ ಅಂದೇನವ್ವ
ನೆಂಟ್ರು ಮುಕ್ಯಾಗೆ ಸೊಂಟ ಮುರ್ದಂಗೆ'

ಇದು ಎರಡು ಕೋಳಿಗಳ ಮಧ್ಯೆ ನಡೆಯುವ ಸಂಭಾಷಣೆ. ಸಾಮಾನ್ಯವಾಗಿ ನೆಂಟರು ಅತಿಥಿಗಳಾಗಿ ಊರುಗಳಿಗೆ ಬಂದರೆಂದರೆ ಮನೆಗಳಲ್ಲಿ ಮೊದಲು ಬಲಿಯಾಗುವ ಪ್ರಾಣಿಗಳು ಕುರಿ ಅಥವಾ ಕೋಳಿಗಳು. ಅಂದರೆ ಬಂದಂಥ ಅತಿಥಿಗಳಿಗೆ ಕೋಳಿ ಕೊಯ್ದು, ಸಾರನ್ನು ತಯಾರಿಸುವುದೇ ಅಡುಗೆಯ ವಿಶೇಷ ಮಾಡಿಸುವವರಿಗೂ, ಮಾಡಿ ಇಡುವವರಿಗೂ ಬೇಸರವಾಗಿ ಪ್ರಾಣಿ ಪ್ರತಿಮೆಗಳ ಮೂಲಕ ಸಂವಾದ ಮಾಡಿದ್ದಾರೆ.

೧. 'ಜೂಟ್ಗಾರ ನನ್ಗಂಡ

ಜುಟ್ಟು ಬಿಡು ಅಂದ್ರೆ

ಬಲಭದ್ರಿ ಮಾತೇನು ಕೇಳ್ತಿಯ

ಇಳೆ ಒಡಿಯಯ್ಯ ಅಂದ್ನಂತೆ"

ಹಿಂದಿನ ಸಮಾಜದಲ್ಲಿದ್ದ ಸಂಪ್ರದಾಯ, ರೂಢಿ ಮತ್ತು ಮಾನವನಲ್ಲಿ ಮುಸುಕಿನೋಪಾದಿಯಲ್ಲಿ ಅಮರಿಗೊಂಡ ರಾಗ, ದ್ವೇಷ, ಅಹಂ ಇತ್ಯಾದಿ ವಿವರಗಳೂ ಅದರಿಂದ ವ್ಯಕ್ತಿ ತೆರಬೇಕಾದ ದಂಡವನ್ನು ಅಭಿವ್ಯಕ್ತಿಸುವ ನಾಣ್ಣುಡಿ ಇದಾಗಿದೆ. ಈ ನಾಣ್ಣುಡಿಗೆ ವಾಸ್ತವಿಕ ಕಥಾ ಹಿನ್ನೆಲೆಯೊಂದು ಹೀಗಿದೆ: ಮನೆಯಲ್ಲಿ ಹೆಂಡತಿ ಜೊತೆ ಆಡಿಕೊಂಡ ಗಂಡ ಮಹಾ ಮೋಜುಗಾರ , ಹೂ ಮುಡಿಯಲು ಜುಟ್ಟನ್ನು ಬಿಟ್ಟಿರುತ್ತಾನೆ. ಆದರೆ ಜಗಳದಲ್ಲಿ ಬೇಸರ ಹೊಂದಿದ್ದ ಅವನು ನೇರವಾಗಿ ಕ್ಷೌರಿಕನ ಬಳಿಬಂದ. ಅವನ ಹಿಂದೆಯೇ ಹೆಂಡತಿ ಬರುತ್ತಾಳೆ. ಗಂಡನ ತಲೆಕೂದಲು ಕತ್ತರಿಸುತ್ತಿದ್ದ ಕ್ಷೌರಿಕನಿಗೆ 'ಜೂಟುಗಾರ ನನ ಗಂಡ ಜುಟ್ಟನ್ನು ಬಿಡು' ಎಂದು ಹೇಳಿದಳು. ಆದರೆ ಕೋಪದಲ್ಲಿ ಗಂಡ ಕ್ಷೌರಿನಕನ ಕಡೆ ಮುಖ ಮಾಡಿ ಸಿಟಿನಲ್ಲಿ; ಬಲಭದ್ರಿ ಮಾತು ಕೇಳಬೇಡ ಇಳೆ (ಬೋಳಿಸು) ಒಡೆಯಯ್ಯ ಎಂದ. ಹೀಗೆ ಅನೇಕ ಸಾಹಿತ್ಯಕ ನಾಣ್ಣುಡಿಗಳು ಸಹ ಜನಸಾಮಾನ್ಯರಲ್ಲಿ ಹಾಸುಹೋಕ್ಕಾಗಿ ಮೈಗೂಡಿವೆ.

**೩.೩. ಭಾಷಿಕ ನಾಣ್ಣುಡಿಗಳು :**

ನಾಣ್ಣುಡಿಗಳ ಭಾಷಿಕ ಹಿನ್ನೆಲೆ ತಾತ್ತ್ವಿಕ, ತಾರ್ಕಿಕ ಹಾಗೂ ವಿಶಿಷ್ಟ. ಅವುಗಳ ರಚನಾ ವಿನ್ಯಾಸದಲ್ಲಿ ಎರಡು ನೆಲೆಗಳಿವೆ. ಅವೇ ರಚನಾ ಸಂಯೋಜನೆಯ ಮತ್ತು ಛಂದೋಸಂಯೋಜನೆ. ಸಾಮಾನ್ಯವಾಗಿ ನಾಣ್ಣುಡಿಗಳ ಒಟ್ಟಾರೆ ರಚನಾತ್ಮಕತೆಯಲ್ಲಿ ವಿನೂತನತೆ ಇದೆ. ಅವುಗಳ ಭೌತಿಕ ಸ್ವರೂಪ ಸರಳ ಸಂಕ್ಷಿಪ್ತತೆಯಿಂದ ಕೂಡಿರುತ್ತದೆ. ಅವು ಅರ್ಥ ಸ್ಪಷ್ಟತೆ ಅಲ್ಲದೆ ಅರ್ಥಪೂರ್ಣತೆಯನ್ನು ಪಡೆದಿವೆ. ಬಹುತೇಕ ನಾಣ್ಣುಡಿಗಳು ಒಂದು ಹಾಗೂ ಎರಡು ಸಾಲಿನಿಂದ ಕೂಡಿದ್ದು; ಮೂರು, ನಾಲ್ಕು, ಐದು ಸಾಲಿನ ವ್ಯಾಪ್ತಿಯನ್ನು ಪಡೆದಿವೆ. ವಿಷಯ ಪ್ರತಿಪಾದನಾ ರೀತಿಗಿಂತ ಭಾಷಿಕ

ರೂಪಗಳಲ್ಲಿನ ಸಂಯೋಜನೆ ವಿಶೇಷತೆಯನ್ನು ಇಲ್ಲಿನ ಮಾತಿನ ನಾಣ್ಣುಡಿಗಳಲ್ಲಿ ಮನಗಾಣಬಹುದು.

'ಕೋಣೆ ಕೊಳಕು ನಡುಮನೆ ಬೆಳಕು' ಒಂದೇ ಸಾಲಿನಲ್ಲಿ ವ್ಯಾಪಕ ಅರ್ಥವನ್ನು ಅಭಿವ್ಯಕ್ತಿಸುವ ಈ ನಾಣ್ಣುಡಿ ಮಾತು ಭಾಷಿಕ ದೃಷ್ಟಿಯಿಂದ ಉತ್ತಮ ನಿದರ್ಶನ. ಅಂತೆಯೇ

"ಗಂಡ್ಸು ಕುಳಿತು ಕೆಟ್ಟ

ಹೆಂಗ್ಸು ತಿರುಗಿ ಕೆಟ್ಲು"

ಎರಡು ಸಾಲಿನ ನಾಣ್ಣುಡಿಯಲ್ಲಿ ಅರ್ಥವಷ್ಟೇ ಅಲ್ಲ ಭಾಷಿಕ ಒಳಸಾಮ್ಯವನ್ನು ಬಳಕೆಯಾದ ಪದಗಳಲ್ಲೇ ಕಾಣಬಹುದು. ಕಿರುದಾದ ರಚನಾ ಚೌಕಟ್ಟು ಸಾಮಾನ್ಯವಾಗಿದ್ದು ಸಾಮಾಜಿಕಕಾರ ಅನುಭವ ವೈಶಾಲ್ಯತೆಯನ್ನು ಹಿಡಿದಿಡುವ ಭಾಷಿಕ ಮರ್ಮ ಇಲ್ಲಿನ ಎಲ್ಲ ನಾಣ್ಣುಡಿಗಳಲ್ಲಿ ಕಾಣಬಹುದು. ಸಾಮಾನ್ಯ ಮೂಲ ಪದ, ಕೌಟುಂಬಿಕ ವಲಯದ ಸಂಬಂಧ ಸೂಚಿತ ಪದ, ಸಾಂಸ್ಕೃತಿಕ ವಲುದ ವಿಶೇಷ ಪದ, ಪ್ರಾದೇಶಿಕ ಬಿಂಬಿತ ಪದ, ಗ್ರಾಮೀಣ ಬದುಕಿನ ನಿತ್ಯ ಬಳಕೆಯ ಪದ ಹಾಗೂ ಭಾಷಿಕವಾದ ವಿಶಿಷ್ಟಪದ ಸೃಷ್ಟಿಗಳು ಇಲ್ಲಿನ ನಾಣ್ಣುಡಿಗಳಲ್ಲಿ ಹಾಸುಹೊಕ್ಕಾಗಿವೆ. ಇಂತಹ ಪದಗಳ ಸಂಯೋಜನೆಯೇ ನಾಣ್ಣುಡಿಗಳ ಮೌಲ್ಯವನ್ನು ಹೆಚ್ಚಿಸಿವೆ.

೧. 'ಅಗ್ಗ ಕೊಟ್ಟು ಕೈ ಕಟ್ಸಿಗೊಂಡ್ಹಂಗೆ'

'ಅಂತರವಿಲ್ಲದ ಬಾವಿ ಜಂತವಿಲ್ದ ಸೀರೆ'

೨. 'ಕದ್ದು ಹೋಳ್ಗೆ ಕೋಟೆ'

'ಬೆಲ್ಲ ಸಾಲ್ದು ಅಂದ್ನಂತೆ'

೩. 'ಗೊಬ್ಬರ ಹಾಕಿದ ಹೊಲ ಬೆಳೆಯುತ್ತೆ

ಅನ್ನ ಹಾಕಿದ ಮನೆ ಬೆಳೆಯುತ್ತೆ'

ನಾಣ್ಣುಡಿಗಳಲ್ಲಿನ ಛಂದೋಸಂಯೋಜನೆಯಲ್ಲಿ ಪಾವಿಣ್ಯತೆ ಹಾಗೂ ನಾದ ಲಾಲಿತ್ಯವನ್ನು ಕಾಣಬಹುದು. ಇಲ್ಲಿನ ಗಾದೆಗಳೆಲ್ಲವೂ ಪ್ರತ್ಯಕ್ಷ ಪರೋಕ್ಷವಾಗಿ ಛಂದೋಬದ್ಧತೆಯನ್ನು ಮೈಗೂಡಿಸಿಕೊಂಡಿವೆ. ಪದ ಲಾಲಿತ್ಯ, ಧ್ವನಿಭಾವ, ಅರ್ಥ ತೀಕ್ಷಣೆ ಮತ್ತು ಜನಪ್ರಿಯತೆಯನ್ನು ಧ್ವನಿಸುತ್ತದೆ. ಜತೆಗೆ ಸಾಮ್ಯ ಪೂರ್ಣತೆ ಒಟ್ಟಾರೆ ಫಲಿತತೆಯಲ್ಲಿ ಕಂಡು ಬರುವ ಗುಣ. ನಾಣ್ಣುಡಿಯ ಸಂಯೋಜನೆಗಳೆಲ್ಲವೂ ಸಹಜ ಪ್ರಾಸ, ಗೇಯತೆ ಮತ್ತು ಧ್ವನಿವಿರಾಮವನ್ನು ಹೊಂದಿವೆ. ನಿಯತ ಪ್ರಾಸ ನಾಣ್ಣುಡಿಯ ಸಾಲುಗಳ ಚೌಕಟ್ಟಿಗಷ್ಟೇ ಅಲ್ಲ ಏಕವಾಕ್ಯದ ನಾಣ್ಣುಡಿಗಳಲ್ಲೂ ಪ್ರಾಸ ಬದ್ಧತೆಯನ್ನು

ಕಾಣಬಹುದು. ಸಾಮಾನ್ಯವಾಗಿ ಧ್ವನಿಪ್ರಾಸ, ಪದಪ್ರಾಸ ಮೂರು ಸ್ಥಾನಗಳಲ್ಲಿ ಕಂಡು ಬರುವುದು. ಆದಿ, ಮಧ್ಯ ಹಾಗೂ ಅಂತ್ಯ ಸ್ಥಾನದಲ್ಲಿ ಸಹಜವಾಗಿ ಬರುವುದು. ಈ ಎಲ್ಲಾ ಪ್ರಾಸವಿನ್ಯಾಸಕ್ಕೆ ಕೆಲವು ನಿದರ್ಶನಗಳು ಇಂತಿವೆ.

೧. 'ಇಬ್ರು ಕೆಲಸ ಇಬ್ಬಂದಿ
ಇದ್ದರೆ ಹಿರಿಹಬ್ಬ
ಇಲ್ದಿದ್ರೆ ಕಿರಿಹಬ್ಬ'

೨. 'ಒಲ್ಲೆ ಒಲ್ಲೆ ಅಂದು
ಒಲೆ ತೋಳ್ನ ಓಟು ತಿಂದಿದ್ನಂತೆ'

೩. 'ಕರೆಯಾಕೆ ಹಸು ತಂದು
ಕಡಿಯಾಕೆ ಮಡಕೆ ಹೆಂಗೆ ಅಂದ್ದಂಗೆ'

೪. 'ಉಡೋಟ್ಟೆಗೆ ಮುದ್ದೇಕೆ
ಗುಂಡ್ಕಲ್ಲಿಗೆ ಎಣ್ಣೇಕೆ'

೫. 'ದಂಡಿಗೆ ಎದ್ರಿಲಿಲ್ಲ
ದಾಳಿಗೆ ಎದ್ರಲಿಲ್ಲ
ದಾಸಯ್ಯ ನಿನ್ನ ವಣಮೀನ್ಗೆ ಎದ್ರಿತೀನ'

ಇಲ್ಲಿ ಭಾವ ಅಭಿವ್ಯಕ್ತಿಗೆ ಸೂತ್ರ ಪ್ರಾಯವಾಗಿ ನಿರ್ದೇಶಿಸಿರುವ ಭಾಷಿಕ ರೂಪಗಳ ಸಾರ್ಥಕತೆ ನಮೂದಿತ ನಿದರ್ಶನಗಳಿಂದ ಸ್ಪಷ್ಟವಾಗಿದೆ ಅದಿ ಪ್ರಾಸದ ನಾಣ್ಣುಡಿ ಉಚ್ಚಾರಣೆಯ ಸುಲಭತೆಗೆ ನಿಶ್ಚಿತ ಸಾಕ್ಷಿಯಾದರೆ, ಮಧ್ಯ ಮತ್ತು ಅಂತ್ಯಪ್ರಾಸದ ಭಾಷಿಕ ರಚನೆ ಅರ್ಥವನ್ನು ಹೆಚ್ಚು ಕಾಲ ನೆನಪಿನಲ್ಲಿಟ್ಟುಕೊಳ್ಳುವುದಕ್ಕೆ ಹಾಗೂ ಲೋಕಜ್ಞಾನವನ್ನು ಹೆಚ್ಚಿಸುವುದಕ್ಕೆ ಹಾಗೂ ಸಿಮಿತ್ತಗಳಾಗಿವೆ. ಛಂದೋರಚನೆಯ ಮತ್ತೊಂದು ವಿಶೇಷತೆ ಎಂದರೆ ಧ್ವನಿ-ಧ್ವನಿಗಳ ನಡುವೆ ಅಂತರ, ಪದ-ಪದಗಳ ಜೋಡಣೆಯಲ್ಲಿ ಅರ್ಥಸಾಮ್ಯತೆ ಹಾಗೂ ವ್ಯಾಪಕತೆ ಸಹಜವಾಗಿರುವುದು.

ಪ್ರಾದೇಶಿಕ ವೈಶಿಷ್ಟ್ಯತೆ ಇಲ್ಲಿನ ನಾಣ್ಣುಡಿಗಳ ಸಾರವತ್ತಾದ ಗುಣ. ಅಲ್ಲದೆ ಸಾಮಾಜಿಕ, ಸಾಂಸ್ಕೃತಿಕ ನೆಲೆಯೂ ಪ್ರಾದೇಶಿಕ ಸೊಲ್ಲುಗಳ ಮೂಲಕ ಸೂಚ್ಯವಾಗಿ ಧ್ವನಿಸುವುದು. ದೇಶೀ ರೂಪಗಳ ಜೋಡಣೆ ಹದವರಿತು ಗ್ರಾಮೀಣ ಸಂಸ್ಕೃತಿಯ ಅಭಿವ್ಯಕ್ತಿಗೆ ಸಾಕ್ಷಿಯಾಗಿದೆ, ಒಟ್ಟಾರೆ ಅನುಭಾವ ಅಭಿವ್ಯಕ್ತಿಗೆ ನಾಣ್ಣುಡಿಗಳಲ್ಲಿ ಮೂರ್ತವೆತ್ತಿರುವ ಭಾಷಿಕ ರಚನೆಗಳು ಸಂವಹನ ಸಿದ್ಧಿಯನ್ನು ಮೈಗೂಡಿಸಿಕೊಂಡಿವೆ.

### ೩. ೪. ಸಾಂಸ್ಕೃತಿಕ ನಾಣ್ಣುಡಿಗಳು :

ಒಂದು ಜನಾಂಗದಲ್ಲಿ ಸಂಸ್ಕೃತಿಯ ದೃಷ್ಟಿಯಿಂದ ಬಹಳ ಮುಖ್ಯವಾದ ನಾಣ್ಣುಡಿಗಳೆಂದರೆ, ಧಾರ್ಮಿಕ ಜೀವನವನ್ನು ಕುರಿತವುಗಳು. ನಮ್ಮ ಧಾರ್ಮಿಕ ಸಂಸ್ಕೃತಿಯ ಉದಾತ್ತ ಸಾಧನೆಗಳನ್ನು ಇಲ್ಲಿ ಕಾಣಬಹುದು. ಆಚಾರ-ವ್ಯವಹಾರ , ಸಂಪ್ರದಾಯ-ಶ್ರದ್ಧೆ, ಧಾರ್ಮಿಕ ಆಶೋತ್ತರ ಮತ್ತು ಆಡಂಬರಗಳನ್ನು ಇವು ಪ್ರತಿಬಿಂಬಿಸಿವೆ. 'ಇಟ್ಟು ಹಂಗಿಸಬಾರದು ಕೊಟ್ಟು ಕುದಿಯಬಾರದು' 'ಹಣ್ಣು ಹಂಚಿ ತಿನ್ನು, ಅನ್ನ ಚೆಲ್ಲಿ ಉಣ್ಣು', 'ತಿರ್ದು ಉಂಡ್ರು, ಕರೆದು ಉಣ್ಣು' ನಾಣ್ಣುಡಿಗಳು ಯಾವಾಗಲೂ ಒಬ್ಬರಿಗೊಬ್ಬರು ನೆರವಾಗಬೇಕು ಎನ್ನುವ ಅಂಶವನ್ನೂ, ಜನಸಾಮಾನ್ಯರ ತ್ಯಾಗ ಗುಣವನ್ನು ಮತ್ತು ನಮ್ಮ ನೆಲದ ಸಂಸ್ಕೃತಿಯನ್ನು ಪ್ರತಿನಿಧಿಸುವುವು.

'ಅಕ್ಕೀನು ಬೇಕು, ಅಕ್ಕನೂ ಬೇಕು' ಎಂಬ ನಾಣ್ಣುಡಿ ಚಿತ್ರದುರ್ಗದ ಪ್ರದೇಶದಲ್ಲಿ ಹೆಚ್ಚು ಬಳಕೆಯಲ್ಲಿದೆ. ಈ ನಾಣ್ಣುಡಿ ಅರೆ-ಬರೆ ಮನಸ್ಸಿನಿಂದ ಉಪಚಾರ ಮಾಡುತ್ತಿರುವವರನ್ನು ಹಂಗಿಸಿ ಆಡಿದ್ದಾಗಿದೆ. ಅಕ್ಕಿಯೂ ಖರ್ಚಾಗಬಾರದು. ಬಂದ ನೆಂಟರಿಗೂ ಊಟೋಪಚಾರಗಳಲ್ಲಿ ಕೊರತೆ ಆಗಬಾರದು ಎಂದರೆ ಹೇಗೆ ಸಾಧ್ಯವೆಂಬಂತೆ ಮರು ಪ್ರಶ್ನಿಸುವುದು ಈ ನಾಣ್ಣುಡಿ.

'ಕುರಿ ಕೊಟ್ಟವರಿಗೆ, ಮರಿಕೊಡದೆ ಇರ್ತಾರೆಯೇ' ಈ ನಾಣ್ಣುಡಿ ಮದುವೆಯ ಸಂದರ್ಭದಲ್ಲಿ ಸಾಮಾನ್ಯವಾಗಿ ಬಳಕೆಯಾಗುವುದು. ಗ್ರಾಮಗಳಲ್ಲಿ ಅದರಲ್ಲೂ ಮದುವೆಗಳು ಹತ್ತಿರದ ಸಂಬಂಧಗಳಲ್ಲಿ ನಡೆಯುವುದು ವಾಡಿಕೆ. ಅತ್ತೆಯ ಮಗಳನ್ನು ಅಥವಾ ಅಕ್ಕನ ಮಕ್ಕಳನ್ನು ಮದುವೆಯಾಗುವರು. ವಯಸ್ಸಿಗೆ ಬಂದ ಮಗನಿಗೆ ತಂದೆಯಾದವ ಹೆಣ್ಣನ್ನು ಕೇಳಲು ತನ್ನ ಸೋದರಿಯ ಅಥವಾ ಸ್ವಂತ ಮಗಳ ಮನೆಗೆ ಹೋಗಿರುವನು. ಯಾವುದೋ ಕಾರಣಕ್ಕೆ ಅವರು ಒಪ್ಪದೇ ಹೋದಾಗ ಹೆಣ್ಣನ್ನು ಪಡೆಯುವುದು ತಮ್ಮ ಹಕ್ಕು ಎಂಬಂತೆ 'ಕುರಿ ಕೊಟ್ಟವರಿಗೆ ಮರಿಕೊಡದೆ ಹೋದರೆ?' ಎಂಬ ಪ್ರಶ್ನೆಯನ್ನು ಸಭೆಯ ಮುಂದಿಡುವನು. ಇಲ್ಲಿ ಕುರಿ ಎಂದರೆ ತನ್ನ ಮಗಳು, ಮರಿ ಎಂಬುದು ಮಗಳ ಮಗಳು- ಮೊಮ್ಮಗಳು ಎಂದರ್ಥ. ಅಂದರೆ ಹಿಂದಿನ ಕಾಲದಲ್ಲಿ 'ಕೊಡು-ಕೊಳ್ಳುವ' ಸಂಪ್ರದಾಯವಿತ್ತೆಂಬುದು ಮತ್ತು ಹಕ್ಕನ್ನು ಪ್ರತಿಪಾದಿಸುವುದು ಇದರಿಂದ ತಿಳಿದು ಬರುವುದು.

'ಊರಾಗ್ಳ ಮದ್ವೆಗೆ ಓಬಕ್ಕ ಸಿಡಿಯಾಡಿದ್ಲಂತೆ' ಇದೊಂದು ಶುದ್ಧ ಧಾರ್ಮಿಕ ಹಿನ್ನೆಲೆಯಲ್ಲಿ ಹುಟ್ಟಿರುವ ನಾಣ್ಣುಡಿ, ದಲಿತ ಜನಾಂಗದಲ್ಲಿಯೇ ಹೆಚ್ಚು ಚಾಲ್ತಿಯಲ್ಲಿರುವ ಇದು ವಿರೋಧಾಭಾಸದಿಂದ ಕೂಡಿರುವುದು. ಒಂದು ಮಾತನ್ನು ಮತ್ತೊಂದಕ್ಕೆ ಎದುರಾಗಿ ಎತ್ತಿ ಕಟ್ಟಿ, ಅಸ್ತಂಗತವೆನಿಸುವ ನುಡಿಯಲ್ಲಿ ಅನಿರೀಕ್ಷಿತವಾದ ಸತ್ಯವನ್ನು ಇವು ತೋರಿಸಿಕೊಡುವುವು. ಓಬಕ್ಕ ಸಿಡಿಯಾಡಬೇಕಾಗಿರುವುದು ಯಾವುದಾದರೂ

ದೇವರ ಉತ್ಸವಗಳಲ್ಲಿ, ಮದುವೆಯಲ್ಲಿ ಅಲ್ಲ, ಹಾಗಾದರೆ ಈ ನಾಣ್ಣುಡಿಯ ಬಳಕೆಗೆ ಕಾರಣವೇನು? ಎಂಬುದು ಕುತೂಹಲಕರ ಸಂಗತಿ.

ಚಿತ್ರದುರ್ಗ ಪ್ರದೇಶದಲ್ಲಿ ಸಾಮಾನ್ಯವಾಗಿ 'ಊರಾಗ್ಳರು" ಎಂದು ಕರೆಯುವುದು ಊರಿನ ಮಧ್ಯದಲ್ಲಿ ವಾಸಿಸುವ ಉಚ್ಚ ಜಾತಿಯ ಜನರನ್ನು, ಆ ಜಾತಿಯವರ ಮದುವೆ ಸುದ್ಧಿ ದಲಿತ ವರ್ಗದ ಓಬಕ್ಕನಿಗೆ ತಿಳಿದು, ಸಂತೋಷಗೊಂಡಿದ್ದಾಳೆ. ದೇವರ ಉತ್ಸವದಲ್ಲಿ ಸಿಡಿಯಾಡುವವರ ಹಾಗೆ ಈಕೆಯ ಓಡಾಟ ಅಲ್ಲಿ ಹೋಗಿ ಕೆಲಸ ನಡೆದಿದೆ. ವಾಸ್ತವವಾಗಿ ಅದು ಅವಳಿಗೆ ಸಂಬಂಧಪಡದ ಮದುವೆ. ಆದರೆ ಅಲ್ಲಿ ಹೋಗಿ ಕೆಲಸ ಮಾಡುವುದರಿಂದ ಮದುವೆಗೆ ಮಾಡಿದ ವಿಶೇಷ ಊಟ ಸಿಗುವುದೊಂದೆ ಓಬಕ್ಕನಿಗೆ ಲಾಭ. ಆದರೂ ಆಕೆ ತನ್ನ ಒಡೆಯರ ಮದುವೆ, ತನ್ನ ಮನೆಯ ಮದುವೆಯೆಂದೇ ಭಾವಿಸಿ, ಅರ್ಪಣ ಭಾವದಿಂದ ಕೆಲಸವನ್ನು ಮಾಡುವಳು. ಇದು ಈ ನಾಣ್ಣುಡಿಗಿರುವ ಹಿನ್ನೆಲೆ. ಒಟ್ಟಿನಲ್ಲಿ ಮದುವೆ ಒಂದು ಸಾಮೂಹಿಕ ಜವಾಬ್ದಾರಿ. ಇಲ್ಲಿ ಎಲ್ಲರ ಸಹಕಾರವೂ ಅಗತ್ಯ. ಆಸಹಕಾರ ಪ್ರೀತಿ, ವಿಶ್ವಾಸದಿಂದ ನಡೆದಾಗ ಮಾತ್ರ ನಾಣ್ಣುಡಿ ಅರ್ಥವಂತಿಕೆಯನ್ನು ಪಡೆದುಕೊಳ್ಳುವುದು.

ಧರ್ಮದ ಆಚರಣೆಯಲ್ಲಿ ನೈತಿಕ ಜೀವನಕ್ಕೆ ಬಹಳ ಮಹತ್ವವನ್ನು ಕೊಟ್ಟವರು ಹಳ್ಳಿಯವರು. ಅವರು ಧರ್ಮ, ನಿಷ್ಠೆ ಮತ್ತು ನೈತಿಕ ಜೀವನವನ್ನು ಸುಸಂಸ್ಕೃತಿಯ ಲಕ್ಷಣವೆಂದೇ ಭಾವಿಸಿರುವರು. ಹಾಗೆ ಭಾವಿಸುವ ಮತ್ತು ಧಾರ್ಮಿಕ ಸಂಪ್ರದಾಯಗಳ ನಿಯಮಗಳಿಗೆ ಒಳಪಟ್ಟ ಎರಡು ನಾಣ್ಣುಡಿಗಳು ಹೀಗಿವೆ: 'ತಾಯಿ ಜೋಗಜ್ಜಿ ರಾಗಿ ಬೀಸುವರ್ಯಾರು', 'ದಾಸಯ್ಯನಿಗೆ ದನಕರ ಇಲ್ಲ, ಆಸಾದಿಗೆ ಹೊಲ ಮನೆ ಇಲ್ಲ' ಇವು ದೇವರ ಮುದ್ರೆ ಹೊತ್ತಂತ ಭಕ್ತರನ್ನು ಕುರಿತವುಗಳೇ ಆಗಿವೆ.

ದೇವರ ಮುದ್ರೆ ಹೊರುವವರನ್ನು ಹಳ್ಳಿಗಳಲ್ಲಿ ತುಂಬ ಗೌರವದಿಂದ ಕಾಣುವರು. ಕಾರಣ ಮುದ್ರೆ ಹೊತ್ತವರು ದೇವರ ಕೆಲಸಕ್ಕೆ ಮೀಸಲಾಗಿರುವರು. ಅವರಿಂದ ಊರಿನ ಯಾವುದೇ ರೀತಿಯ ಕೀಳು ಕೆಲಸಗಳನ್ನು ಮಾಡುವಂತಿಲ್ಲ. ಎಲ್ಲಮ್ಮನ ಮುದ್ರೆ ಹೊತ್ತ ಜೋಗಮ್ಮಗಳು (ತಾಯಿ–ಮಗಳು), ಅಮ್ಮನ ಸೇವೆಯನ್ನಲ್ಲದೇ ಬೇರೇನು ಮಾಡುವಂತಿಲ್ಲವೆಂಬುದು ಧಾರ್ಮಿಕ ಕಟ್ಟಳೆ. ಹಾಗೆಯೇ ದಾಸಯ್ಯ ಮತ್ತು ಆಸಾದಿಗಳು ಸಹ ದಾಸಯ್ಯ ದನಕರುಗಳನ್ನು ಸಾಕುವುದು ನಿಷೇಧವಾಗಿತ್ತು. ಅಸಾದಿ ಮಾರಮ್ಮನನ್ನು ಹೊಗಳುವುದು, ಸದಾ ಸುಪ್ರೀತಳಾಗಿರುವಂತೆ ನೋಡಿಕೊಳ್ಳುವ ಜವಾಬ್ದಾರಿ ಹೊತ್ತಿದ್ದರಿಂದ, ಹೊಲ ಮನೆಯನ್ನು ನೋಡಿಕೊಳ್ಳುವುದಕ್ಕೆ ಕಾಲಾವಕಾಶವಾದರು ಎಲ್ಲಿತ್ತು? ಹಾಗಾಗಿ ಈ ಭಕ್ತರು ಕೃಷಿ ಮಾಡುವುದರಲ್ಲಿ ವಂಚಿತರಾದರು.ಮುಖ್ಯವಾಗಿ ಇಲ್ಲಿ ಜನತೆಯ ಹಿತಕ್ಕಾಗಿ ತಮ್ಮನ್ನು ಸಮಾಜಕ್ಕೆ ಅರ್ಪಿಸಿಕೊಂಡ ತ್ಯಾಗ, ಶೀಲ, ಮನೋಧರ್ಮದವರಾಗಿ ಕಂಡುಬರುವರು.

೧. 'ನಮ್ಮಾಟದಾಗೆ ಬರಬೇಡ ಅಂದ್ರೆ

ಇಲ್ಲಿ ಆಟವೆಂದರೆ 'ಬಯಲಾಟ' ಎಂದರ್ಥ. ಹಬ್ಬ, ಜಾತ್ರೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಸಂದರ್ಭದಲ್ಲಿ ಬಯಲಾಟದ ಪ್ರದರ್ಶನವಿರುವುದು. ನಿರಕ್ಷರ ಕುಕ್ಷಿಗಳಾದ ದಲಿತರು, ಇದನ್ನು ಕೇವಲ ಮನರಂಜನೆಗಾಗಿ ಪ್ರದರ್ಶಿಸುವುದಿಲ್ಲ. ಕಷ್ಟ ಕಳೆದು ಸುಖ ತರುವುದೆಂಬ ನಂಬಿಕೆ ಇವರಲ್ಲುಂಟು. ಕಲ್ಯಾಣವನ್ನು ಹಾರೈಸುವುದೇ ಇದರ ಅಂತರ್ಯ. ಹಾಗಾಗಿ ದೈವದ ಪೂಜೆಯು ಇದರ ಉದ್ದೇಶದಲ್ಲಿ ಒಂದು . ಪ್ರಾಚೀನ ಮಾನವ ತನಗೆ ಸಂತೋಷವಾದಾಗ ಕೂಗಿ, ಕುಣಿದು ಈ ಸಂತೋಷವನ್ನು ಪ್ರದರ್ಶಿಸಿದ್ದು, ಇಂಥ ಕಲಾ ಮಾಧ್ಯಮ ಮೂಲಕವೇ ಈ ಕಲೆ ಇಂದಿಗೂ ಇವರ ಬದುಕಿನ ಅಂಗವೆಂದರೆ ತಪ್ಪಾಗದು. ತಮಗಾಗದ ಒಬ್ಬ ವ್ಯಕ್ತಿಯನ್ನು ಮತ್ತೆ ಒಂದಾಗುವುದಕ್ಕೆ ಅಥವಾ ಮರಳಿ ಸ್ನೇಹ ಬೆಳಸುವುದಕ್ಕೆ ಖಡಾಖಂಡಿತವಾಗಿ ನಿರಾಕರಿಸುವುದು. ಆದರೆ ಅವರಿಂದ ತಿರಸ್ಕೃತನಾದರೂ ಸರಿಯೇ ಎಂಬ ಮನೋಭಾವವುಳ್ಳವ, ಆಹ್ವಾನವಿಲ್ಲದಿದ್ದರೂ ಆಟದಲ್ಲಿ ಅವರ ಜೊತೆಗೂಡುವನು. ಸ್ವಾಭಿಮಾನಕ್ಕೆ ಧಕ್ಕೆ ಬರುವುದನ್ನು ಲೆಕ್ಕಿಸುವುದಿಲ್ಲ. ಎದುರಾಳಿ ಮತ್ತೊಮ್ಮೆ ಮಾತಿನ ಪ್ರಹಾರದ ಮೂಲಕ ತಮ್ಮ ಅಸಮಾಧಾನವನ್ನು ಇಂಥ ನಾಣ್ಣುಡಿಗಳ ಮೂಲಕ ವ್ಯಕ್ತಪಡಿಸುತ್ತಾರೆ.

'ಬಯಲಾಟ' ಒಂದು ಕಾಲಕ್ಕೆ ವೃತ್ತಿ ಕಲೆಯಾಗಿತ್ತು. 'ಆಟ ಕುಣಿದೋರ ಮಗಳಲ್ಲ ಪದ ಕಲ್ತೋರ ಮನೆಯ ಸೊಸೆಯಲ್ಲ' ಎಂಬ ನಾಣ್ಣುಡಿಗಳ ಮೂಲಕ ತಿಳಿಯಬಹುದಾಗಿದೆ. ಆದರ್ಶ ತತ್ತ್ವವನ್ನು ಸಾರುವ 'ಹಾಸಿಗೆ ಇದ್ದಷ್ಟು ಕಾಲು ಚಾಚು'., 'ಮನೆಗೆದ್ದು ಮಾರುಗೆಲ್ಲು', 'ಅತಿ ಆಸೆ ಗತಿಗೆಡಿಸಿತು', 'ಮಾಡಿದೋರ ಪಾಪ ಆಡಿದೋರ ಬಾಯಿಗೆ' ಇತ್ಯಾದಿ ನಾಣ್ಣುಡಿಗಳು ಮಾನವನ ಹಿತ ಮತ್ತು ಲೋಕ ಕ್ಷೇಮಗಳನ್ನು ಕುರಿತಂಥವು. ಇವು ಉಚ್ಚ ಸಂಸ್ಕೃತಿಯ ಮುಖ್ಯ ಲಕ್ಷಣಗಳಾಗಿವೆ.

# ಅಧ್ಯಾಯ : ನಾಲ್ಕು

## ಆಧುನಿಕ ನಾಣ್ಣುಡಿಗಳು: ಭಾಷಿಕ ಚಿಂತನೆ

**ಪ್ರವೇಶ :**

ಆಧುನಿಕತೆಯ ಜಗತ್ತಿನಲ್ಲಿ ವಿಜ್ಞಾನ ತಂತ್ರಜ್ಞಾನ ಮುಂದುವರಿದಂತೆ, ಹೊಸ ಹೊಸ ತಿಳುವಳಿಕೆಗಳು ಮೂಡಿದಂತೆ, ಜ್ಞಾನ ವಿಸ್ತಾರವಾದಂತೆ ಹೊಸ ಬದಲಾವಣೆಗೆ ಭಾಷೆಯೂ ತೆರೆದುಕೊಳ್ಳಬೇಕಾಗುತ್ತದೆ. ವಸ್ತು ವಿಷಯಗಳನ್ನು ವಿವರಿಸಲು ಭಾಷೆಯಲ್ಲಿ ಇರುವ ಪದಗಳಿಂದ ಸಾಧ್ಯವಾಗದೇ ಹೋಗಬಹುದು. ಆಗ ಭಾಷಾ ಬದಲಾವಣೆಗೆ ಕಾರಣವಾಗುತ್ತದೆ. ಅದರಂತೆ ಜನಸಾಮಾನ್ಯರು ಸಹ ಪ್ರಾಚೀನ ನಾಣ್ಣುಡಿಗಳಿಗೆ ಮಾದರಿಯಾಗಿ ಹೊಸ ಪದಗಳನ್ನು ಜೋಡಿಸಿಕೊಂಡು ಆಧುನಿಕತೆಗೆ ಅನುಗುಣವಾಗಿ ಹೊಸ ನಾಣ್ಣುಡಿಗಳನ್ನು ಬಳಸಿರುವುದು ಇಲ್ಲಿ ಗಮನಿಸಬಹುದು. ಇಲ್ಲಿ ಭಾಷಿಕ ದೃಷ್ಟಿಯಿಂದ ನೋಡುವುದಾದರೆ ನಾಣ್ಣುಡಿಗಳು ವಿಶಿಷ್ಟತೆಯಿಂದ ಕೂಡಿವೆ. ಜೊತೆಗೆ ನಾಮಪದ, ಕ್ರಿಯಾಪದ, ವಿಭಕ್ತಿಪ್ರತ್ಯಯ, ಪ್ರಾಸ, ಅಲಂಕಾರ ಇನ್ನು ಮೊದಲಾದ ವ್ಯಾಕರಣ ಅಂಶಗಳಿಂದ ಕೂಡಿವೆ. ನಾಣ್ಣುಡಿಗಳ ಭಾಷೆ ಪ್ರಾಚೀನ ಕಾಲಕ್ಕಿಂತ ಭಿನ್ನವಾಗಿದೆ.

ಮನುಷ್ಯ ನಾಗರಿಕತೆಯ ಇತಿಹಾಸದಲ್ಲಿ ಬೆಂಕಿಯ ಬಳಕೆಯನ್ನು ಕಂಡುಕೊಂಡದ್ದು ಎಷ್ಟು ಮಹತ್ವಪೂರ್ಣವಾದ ಘಟ್ಟವೋ ಅವನು ಭಾಷೆಯ ಬಳಕೆಯನ್ನು ಕಂಡುಕೊಂಡದ್ದು, ಮಾತನಾಡುವ ಕಲೆಯನ್ನು ರೂಢಿಸಿಕೊಂಡದ್ದು ಸಹ ಅಷ್ಟೇ ಮಹತ್ವಪೂರ್ಣವಾದ ಘಟ್ಟ. ಆದಿಮಾನವ ತನ್ನ ಅನಿಸಿಕೆಗಳನ್ನು ಹೇಳುವುದಕ್ಕೆ ಮತ್ತು ಇನ್ನೊಬ್ಬರ ಅನಿಸಿಕೆಗಳನ್ನು ತಾನು ತಿಳಿದುಕೊಳ್ಳುವುದಕ್ಕೆ ಅವಲಂಬಿಸಿದ್ದ ಸಂಜ್ಞೆ, ಸಂಕೇತ, ಚಿತ್ರ, ಉದ್ಗಾರ, ಅಂಗಚಲನೆ ಮುಂತಾದ ಮಾಧ್ಯಮಗಳಿಂದ ಮುಂದೆ ಹೋಗಿ ಮಾತನ್ನು ಬಳಸಿದ್ದು, ಬದುಕಿನ ವಿಕಾಸದ ಹಾದಿಯಲ್ಲಿ ಒಂದು ಕ್ರಾಂತಿಕಾರಕ ಬದಲಾವಣೆಯನ್ನೇ ತಂದಿತು. ಭಾಷೆ ಎಂಬುದು ಮಾನವನಿಗೆ ದೈವದತ್ತವಾಗಿ ಬಂದಿರುವ ಒಂದು ಅಮೂಲ್ಯವಾದ ವರ. ಅವನನ್ನು ಸೃಷ್ಟಿಯ ಮಿಕ್ಕ ಎಲ್ಲ ಪ್ರಾಣಿಗಳಿಗಿಂತ ಬೇರ್ಪಡಿಸಿ, ವಿಶಿಷ್ಟ ಜೀವಿ ಎಂದು ಗುರುತಿಸಿರುವ ಭಾಷೆ ಎಂಬ ವರ ಮನುಷ್ಯನಿಗೆ ಸಿದ್ಧಿಸದೇ ಹೋಗಿದ್ದರೆ ಇಂದು ನಾವು ಕಾಣುತ್ತಿರುವ ಜ್ಞಾನ, ವಿಜ್ಞಾನ,

ಸುಜ್ಞಾನಗಳು ಬೆಳಕಿಗೆ ಬರುತ್ತಿರಲಿಲ್ಲ. ನಾಗರಿಕ ಜಗತ್ತಿನ ಅದ್ಭುತ ಸೃಷ್ಟಿಯೇ ಸಾಧ್ಯವಾಗುತ್ತಿರಲಿಲ್ಲ.

ಮಾನವನು ಭಾಷೆಯನ್ನು ಬಳಸಲು ಕಂಡುಕೊಂಡ ದಿನದಿಂದ ಅದರ ವಿಕಾಸವಾಗುತ್ತಿದೆ. ಭಾಷೆ ಅವನ ಭಾವ-ಭಾವನೆಗಳ ಅಭಿವ್ಯಕ್ತಿಗೆ ಸುವರ್ಣ ಮಾಧ್ಯಮವಾಗಿದೆ. ಭಾಷೆ ಬಳಸಿದಷ್ಟೂ ಬೆಳೆಯುತ್ತದೆ ಎನ್ನುವುದಕ್ಕೆ ಅದು ಮಾನವನ ಸಂಸ್ಕೃತಿಯ ಬೆಳವಣಿಗೆಯೊಂದಿಗೆ ಹಿಗ್ಗುತ್ತಾ ಅವನ ಎಲ್ಲ ಆಲೋಚನೆಗಳಿಗೂ ಒಗ್ಗುತ್ತ, ಬಗ್ಗುತ್ತ, ಬಾಗುತ್ತ, ಬಳುಕುತ್ತ ಸಾಗುತ್ತಿರುವುದೇ ಇದಕ್ಕೆ ಸಾಕ್ಷಿ. ಭಾಷೆ ಬೆಳೆದಂತೆ ಮಾನವನಿಗೆ ಅದರ ವೈವಿಧ್ಯತೆ, ವೈಶಿಷ್ಟ್ಯತೆ ಹೊಳೆಯತೊಡಗಿತು. ಯಾವ ಸಂದರ್ಭಕ್ಕೆ ಯಾವ ಭಾಷೆ ಚೆಂದ, ಯಾವ ಭಾವನೆಯ ಅಭಿವ್ಯಕ್ತಿಗೆ ಯಾವ ರೀತಿಯ ಭಾಷೆಯನ್ನು ಬಳಸಿದರೆ ಸೂಕ್ತ ಎಂದು ಚಿಂತಿಸಿದ. ವೈವಿಧ್ಯತೆಯನ್ನು ಕಂಡುಕೊಂಡ. ಜೊತೆ ಜೊತೆಗೆ ಭಾಷೆಯನ್ನು ಶಾಸ್ತ್ರೀಯವಾಗಿ ಬೆಳೆಸಿದ. ಪರಿಣಾಮವಾಗಿ ಛಂದಸ್ಸು, ಅಲಂಕಾರ, ವ್ಯಾಕರಣಗಳನ್ನೊಳಗೊಂಡ ಭಾಷಾವಿಜ್ಞಾನ ರೂಪುಗೊಂಡಿತು. ಪ್ರತಿಯೊಂದು ಭಾಷೆಯೂ ತನ್ನದೇ ಆದ ಜಾಯಮಾನವನ್ನು ರೂಢಿಸಿಕೊಂಡಿತು. ಹೀಗಾಗಿ ಒಂದು ಘಟ್ಟದಲ್ಲಿ ಕೇವಲ ವ್ಯವಹಾರ ಮಾಧ್ಯಮವಾಗಿದ್ದ ಭಾಷೆ ಕಾಲಕಳೆದಂತೆ ಒಂದು ಅದ್ಭುತ ಶಕ್ತಿಯಾಯಿತು. ಅವನ ಅಂತಸ್ತು ವರ್ಚಸ್ಸುಗಳನ್ನು ನಿರ್ಧರಿಸುವ ಸಾಧನವಾಯಿತು. ಇನ್ನು ಬರಹ ಮುದ್ರಣಗಳು ಬಂದ ಮೇಲಂತೂ ನಮ್ಮ ಬದುಕಿನಲ್ಲಿ ಭಾಷೆ ಪ್ರಬಲ ಅಸ್ತ್ರವಾಗಿರುವುದು ಸತ್ಯವೆಂದು ಹೇಳಬಹುದು.

"ನಾಣ್ಣುಡಿ ಎಂಬುದು ನಾಡು+ನುಡಿ ಎಂಬ ಎರಡು ಪದಗಳ ಸೇರುವಿಕೆಯಿಂದಾಗಿದೆ. ಜನಸಾಮಾನ್ಯರಲ್ಲಿ ಬಳಕೆಯಲ್ಲಿರುವ ಮಾತು ಎಂದರ್ಥವು ಇದಕ್ಕೆ ಇದೆ. ಸಂಧಿಯಾಗುವಾಗ ಮೊದಲಿನ ಪದದ ಕೊನೆಯ 'ಡ್' ಕಾರವು 'ಳ್' ಕಾರವಾಗಿ 'ನಾಳ್ನುಡಿ' ಎಂದಾಯಿತು. ಈ ರೂಪವೂ ಗ್ರಂಥಗಳಲ್ಲಿ ದೊರೆಯುವುದು. ಸಂಸ್ಕೃತದಲ್ಲಿ ಲ ಳ ಕಾರಗಳಲ್ಲಿ ಅಭೇದವಿರುವಂತೆ ಕನ್ನಡದಲ್ಲಿ ಣ ಳ ಕಾರಗಳಲ್ಲಿ ಅಭೇದವಿದ್ದುದು ಅದೆಷ್ಟೋ ಕಡೆಗೆ ಕಂಡು ಬರುವುದು. ಉದಾಹರಣೆಗೆ: ಗಿಣಿ-ಗಿಳಿ, ಹೆಣಿಲು-ಹೆಳಿಲು, ಮಣಲು-ಮಳಲು, ಮೊದಲಾಗಿ. ಇದರಂತೆ ನಾಳ್ನುಡಿಯು ನಾಣ್ಣುಡಿಯಾಯಿತು. ಈ ನಾಣ್ಣುಡಿಯೊಳಗಿನ ಣಕಾರದ ಮುಂದಿನ ನಕಾರವೂ ಣಕಾರವಾಗಿ ಪರಿಣಮಿಸಿ 'ನಾಣ್ಣುಡಿ'ಯಾಯಿತು. ಈ ತರದ ಪ್ರಯೋಗವಿರುವುದಾದರೂ ಉಚ್ಚಾರಣೆಗೆ ಅದು ಸುಲಭವಲ್ಲವೆಂದು ವೈಯಾಕರಣಿ ಕೇಶಿರಾಜನು ಹೇಳಿರುವುದೇನೋ ನಿಜ. ಆದರೆ ಈಗ ಕೇಶಿರಾಜನು ದುಷ್ಕರವೆಂದು ಹೇಳಿದ ಉಚ್ಚಾರವೇ ಸುಲಭವಾಗಿ ಪರಿಣಮಿಸಿ. ತಣ್ಣೀರು ಎಂಬವುಗಳ ಉಚ್ಚಾರವು ಕಣ್ಣೀರು ಕಣ್ಣೀರು ಎಂದೇ ರೂಢವಾಗಿದೆ. ಇದಕ್ಕೆ ಹೊಸಗನ್ನಡ ವ್ಯಾಕರಣದ ಮುದ್ರೆಯೂ ಬಿದ್ದಿದೆ. ಹಾಗೆಯೆ ನಾಣ್ಣುಡಿಯು ನಾಣ್ನುಡಿ ಎಂಬ ರೂಪದಲ್ಲಿಯೆ ಬಳಕೆಯಲ್ಲಿರುವುದನ್ನು ಗಮನಿಸಬಹುದು"[೧]. ಇಲ್ಲಿ ಡಾ. ಜಾನಸನ್ Proverb ಎಂಬುದರ ಅರ್ಥ ಹೇಳುವಾಗ ನಾಣ್ಣುಡಿಯನ್ನು ಕುರಿತು Short Sentence ಎಂದು ಹೇಳಿರುವುದು ಸಹ ಸಮಂಜಸವೆಂಬಂತೆ ತೋರುತ್ತದೆ. ಇಲ್ಲಿ ನಾಣ್ಣುಡಿಗಳಲ್ಲಿ ಹೊಸ ಪದಗಳು ಹೇಗೆ ರೂಪಗೊಂಡವು ಎಂಬುದನ್ನು ಭಾಷಿಕವಾಗಿ ಚರ್ಚೆಗೆ ಒಳಪಡಿಸಬಹುದು.

೧. **ಊರಿಗೆ ಬಂದವಳು, ನೀರಿಗೆ ಬರಲ್ವಾ?**

**ಫೇಸ್‌ಬುಕ್‌ಗೆ ಬಂದವಳು, ವಾಟ್ಸ್‌ಆಫ್‌ಗೆ ಬರಲ್ವಾ?**

'ಊರಿಗೆ ಬಂದವಳು ನೀರಿಗೆ ಬರಲ್ವಾ' ಎಂಬ ನಾಣ್ಣುಡಿಯಲ್ಲಿ 'ಊರಿಗೆ' ಮತ್ತು 'ನೀರಿಗೆ' ಎಂಬ ಪದಗಳ ಬದಲಾಗಿ ಆಧುನಿಕ ತಂತ್ರಜ್ಞಾನದ ಸಾಮಾಜಿಕ ಜಾಲತಾಣಗಳಾದ 'ಫೇಸ್‌ಬುಕ್‌ಗೆ' ಮತ್ತು 'ವ್ಯಾಟ್ಸ್‌ಆಫ್‌ಗೆ' ಎಂಬ ಹೊಸ ಪರ್ಯಾಯ ಪದಗಳನ್ನು ಬಳಕೆಮಾಡಿರುವುದನ್ನು ಕಾಣಬಹುದು. ಇಲ್ಲಿ ಎರಡು ವಾಕ್ಯಗಳಲ್ಲಿ ನೀರು+ಇಗೆ = ನೀರಿಗೆ, ವಾಟ್+ಅಫ್+ಇಗೆ = ವಾಟ್ಸ್‌ಫ್‌ಗೆ ಎಂಬಲ್ಲಿ 'ಗೆ' ಪ್ರತ್ಯಯ ಬಳಕೆಯಾಗಿದೆ. ಅದೇ ರೀತಿಯಾಗಿ 'ಬಂದವಳು' 'ಬರಲ್ವಾ' ಎಂಬ ಪ್ರಾಸಬದ್ಧ ಕ್ರಿಯಾಪದಗಳು ಯಥಾವತ್ತಾಗಿ ಬಳಕೆಯಾಗಿವೆ.

೨. **ಅಡಿಕೆಗೆ ಹೋದ ಮಾನ, ಆನೆ ಕೊಟ್ಟರು ಬಾರದು.**

**ಮಿಸ್‌ಕಾಲ್‌ಗೆ ಹೋದ ಮಾನ, ಕಾಲ್ ಮಾಡಿದರೂ ಬರಲ್ಲ.**

'ಅಡಿಕೆಗೆ ಹೋದ ಮಾನ ಆನೆ ಕೊಟ್ಟರು ಬಾರದು' ಎಂಬ ನಾಣ್ಣುಡಿಯಲ್ಲಿ 'ಅಡಿಕೆಗೆ' ಮತ್ತು 'ಆನೆ' ಎಂಬ ಪದಗಳಿಗೆ ಪರ್ಯಾಯವಾಗಿ ಆಧುನಿಕ ನಾಣ್ಣುಡಿಯಲ್ಲಿ ಮೊಬೈಲ್ ಪರಿಕರಗಳಾದ 'ಮಿಸ್‌ಕಾಲ್‌ಗೆ' ಮತ್ತು 'ಕಾಲ್' ಎಂಬ ಹೊಸ ಪದಗಳು ರಚನೆಯಾಗಿವೆ. ಇಲ್ಲಿ ಸಹ ಅಡಿಕೆಗೆ ಮತ್ತು ಮಿಸ್‌ಕಾಲ್‌ಗೆ ಎಂಬ ಪದಗಳಲ್ಲಿ 'ಗೆ' ಎಂಬ ಪ್ರತ್ಯಯ ಬಳಕೆಯಾಗಿದೆ. 'ಬಾರದು' ಎಂಬುದರ ಬದಲಾಗಿ 'ಬರಲ್ಲ' ಎಂಬ ಕ್ರಿಯಾಪದ ಬಳಕೆಯಾಗಿದೆ.

೩. **ದಯವೇ ಧರ್ಮದ ಮೂಲವಯ್ಯಾ**

**ಹೈಟೆಕ್‌ಗೆ ಮೊಬೈಲ್ ಮೂಲವಯ್ಯಾ,**

'ದಯವೇ ಧರ್ಮದ ಮೂಲವಯ್ಯ' ಎಂಬಲ್ಲಿ 'ಹೈಟೆಕ್' ಎಂಬ ಹೊಸ ಪದವನ್ನು ಬಳಸಿ ಈಗಿನ ನಾಣ್ಣುಡಿಗೆ ಹೊಸ ರೂಪವನ್ನು ಕೊಟ್ಟು ಆಧುನಿಕರು ನಾಣ್ಣುಡಿಯನ್ನು ಬಳಕೆ ಮಾಡಿದ್ದಾರೆ. ಇಂಗ್ಲೀಷ್‌ನ 'Hyteck' ಪದವು ಕನ್ನಡದಲ್ಲಿ 'ತಾಂತ್ರಿಕತೆ' ಎಂಬ ರೂಪದಲ್ಲಿ ಬಳಕೆಯಲ್ಲಿರಬಹುದು. ಇಲ್ಲಿ ಪ್ರಾಚೀನ ನಾಣ್ಣುಡಿಯಂತೆ 'ದಯವೇ' ಎಂಬುದರ ಬದಲಾಗಿ 'ಹೈಟೆಕ್' ಎಂಬ ಪದವನ್ನು ಬಳಸಿ ಯಥಾವತ್ತಾಗಿ ವಾಕ್ಯವನ್ನು ರಚಿಸಿದ್ದಾರೆ. ಜೊತೆಗೆ ವಾಕ್ಯದ ಕೊನೆಯಲ್ಲಿ ಪ್ರಾಸ ಬಳಕೆಯಾಗಿರುವುದನ್ನು ಕಾಣಬಹುದು.

೪. **ಮನಸ್ಸಿದ್ದರೆ ಮಾರ್ಗ**

**ಗೂಗಲ್ ಮ್ಯಾಪ್ ಇದ್ದರೆ ಮಾರ್ಗ**

'ಮನಸ್ಸಿದ್ದರೆ ಮಾರ್ಗ' ಇಲ್ಲಿ 'ಮನಸ್ಸಿದ್ದರೆ' ಬದಲಾಗಿ 'ಗೂಗಲ್ ಮ್ಯಾಪ್' ಎಂಬ ಪರ್ಯಾಯ ಪದವನ್ನು ಬಳಕೆ ಮಾಡಿರುವುದನ್ನು ಕಾಣಬಹುದು. ಪ್ರಾಚೀನ ನಾಣ್ಣುಡಿಯಲ್ಲಿ 'ಇ' ಎಂಬ ಅಕ್ಷರ ಲೋಪವಾದರೆ ಆಧುನಿಕ ನಾಣ್ಣುಡಿಯಲ್ಲಿ 'ಇ' ಅಕ್ಷರ ಬಳಕೆಯಾಗಿದೆ. ಒಟ್ಟಾರೆ ಪ್ರಾಚೀನ ನಾಣ್ಣುಡಿಯ ಮಾದರಿಯಲ್ಲಿಯೇ ರಚನೆಯಾಗಿದೆ.

೫. **ಸಾವಿಲ್ಲದ ಮನೆಯಿಂದ ಸಾಸಿವೆ ತಗೊಂಡು ಬಾ**
**ಮೊಬೈಲ್ ಇಲ್ಲದ ಮನೆಯಿಂದ ಸೊಸೆ ತಗೊಂಡು ಬಾ**

'ಸಾವಿಲ್ಲದ ಮನೆಯಿಂದ ಸಾಸಿವೆ ತಗೊಂಡು ಬಾ' ಎಂಬಲ್ಲಿ 'ಸಾವಿಲ್ಲದ' ಎಂಬ ಪದದ ಬದಲಾಗಿ 'ಮೊಬೈಲ್ ಇಲ್ಲದ' 'ಸಾಸಿವೆ' ಪದದ ಬದಲಾಗಿ 'ಸೊಸೆ' ಎಂಬ ಪದಗಳು ಬಳಕೆ ಮಾಡಿದ್ದಾರೆ. ಇಲ್ಲಿ ಸಹ ಪ್ರಾಚೀನ ನಾಣ್ಣುಡಿಯಲ್ಲಿ 'ಇ' ಲೋಪವಾದರೆ ಆಧುನಿಕತೆಯಲ್ಲಿ 'ಇ' ಬಳಕೆಯಾಗಿದೆ. ಎರಡು ಕಡೆ 'ಇಂದ' ಎಂಬ ತೃತೀಯಾ ವಿಭಕ್ತಿ ಪ್ರತ್ಯಯ ಬಳಕೆಯಾಗಿದೆ.

೬. **ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು**
**ಪೇಪರ್ ಚಿಕ್ಕದಾದರೂ ಉತ್ತರ ದೊಡ್ಡದು**

'ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು' ಎಂಬ ನಾಣ್ಣುಡಿಯಲ್ಲಿ 'ಮೂರ್ತಿ' ಮತ್ತು 'ಕೀರ್ತಿ' ಎಂಬ ಪದಗಳಿಗೆ ಬದಲಾಗಿ 'ಪೇಪರ್' 'ಉತ್ತರ' ಎಂಬ ಹೊಸ ಪದಗಳು ಬಳಕೆಯಲ್ಲಿವೆ. ಇಲ್ಲಿ ನಾಣ್ಣುಡಿ ಪ್ರಾಸ ಬದ್ಧವಾಗಿ ಬಳಕೆಯಾಗಿದೆ. ಇಲ್ಲಿ ಮೂರ್ತಿ>ಕೀರ್ತಿ, ಪೇಪರ್>ಉತ್ತರ ಎಂಬ ಪದಗಳನ್ನು ಹೊರತುಪಡಿಸಿ ಉಳಿದ್ದೆಲ್ಲ ಪದಗಳು ವಾಕ್ಯದಲ್ಲಿ ಯಥಾವತ್ತಾಗಿ ರಚನೆಯಾಗಿರುತ್ತದೆ.

೭. **ಊರೆಲ್ಲ ದೋಚಿಕೊಂಡು ಹೋದ ಮೇಲೆ ದೊಡ್ಡಿ (ಕೋಟೆ) ಬಾಗಿಲುಹಾಕಿದರಂತೆ**
**ವೈರಸ್ ಅಟ್ಯಾಕ್ ಆದಮೇಲೆ ಆ್ಯಂಟಿ ವೈರಸ್ ಹಾಕಿಸಿದರಂತೆ**

'ಊರೆಲ್ಲ ದೋಚಿಕೊಂಡು ಹೋದ ಮೇಲೆ ದೊಡ್ಡಿ ಬಾಗಿಲು ಹಾಕಿದಂತೆ' ಎಂಬ ನಾಣ್ಣುಡಿ ಊರಿನ ರಕ್ಷಣೆಗೆ ಸಂಬಂಧಿಸಿದರೆ ಮತ್ತೊಂದು ಆಧುನಿಕ ಪರಿಕರಿಗಳಾದ ಕಂಪ್ಯೂಟರ್, ಮೊಬೈಲ್, ಹೈಪ್ಯಾಡ್ ಇನ್ನು ಮುಂತಾದ ಉಪಕರಣಗಳಿಗೆ ಸಂಬಂಧಿಸಿದಂತಹ ನಾಣ್ಣುಡಿಯಾಗಿದೆ. ವಾಕ್ಯಗಳ ಕೊನೆಯಲ್ಲಿ 'ಅಂತೆ' ಎಂಬ ಪದ ಬಳಕೆಯಾಗಿದೆ. ಊರೆಲ್ಲ ದೋಚಿಕೊಂಡು ಎಂಬ ಪದಗಳ ಬದಲಾಗಿ 'ವೈರಸ್ ಅಟ್ಯಾಕ್', ದೊಡ್ಡಿ (ಕೋಟೆ) ಬಾಗಿಲು ಎಂಬಲ್ಲಿ 'ಆ್ಯಂಟಿ ವೈರಸ್' ಎಂಬ ತಾಂತ್ರಿಕ ಪದಗಳನ್ನು ಬಳಕೆ ಮಾಡಿದ್ದಾರೆ.

೮. **ಮಂತ್ರಕ್ಕಿಂತ ಉಗುಳೆ ಜಾಸ್ತಿ.**
**ಲೈಕಗಿಂತ ಕಾಮೆಂಟೆ ಜಾಸ್ತಿ.**

'ಮಂತ್ರಕ್ಕಿಂತ ಉಗುಳೆ ಜಾಸ್ತಿ' ಎಂಬ ಪ್ರಾಚೀನ ನಾಣ್ಣುಡಿಗೆ ಸಂವಾದಿಯಾಗಿ ಆಧುನಿಕತೆಯಲ್ಲಿ 'ಮಂತ್ರಕ್ಕಿಂತ' 'ಉಗುಳೆ' ಎಂಬ ಪದಗಳ ಬದಲಾಗಿ 'ಲೈಕ್' 'ಕಾಮೆಂಟ್' ಎಂಬ ತಾಂತ್ರಿಕ ಪದಗಳನ್ನು ಬಳಕೆ ಮಾಡಿ ನಾಣ್ಣುಡಿಯನ್ನು ಬಳಕೆ ಮಾಡಿರುತ್ತಾರೆ. ಇಲ್ಲಿ ಪದದ ಕೊನೆಯಲ್ಲಿ ಎರಡು ವಾಕ್ಯಗಳಲ್ಲಿ ಪ್ರಾಸ ಯಥಾವತ್ತಾಗಿ ಬಳಕೆಯಾಗಿದೆ. 'ಲೈಕ್' ಎಂದರೆ ಮೆಚ್ಚುಗೆ, ಇಷ್ಟ, ಎಂಬರ್ಥವನ್ನು ತಿಳಿಸುತ್ತದೆ. 'ಕಾಮೆಂಟ್' ಎಂದರೆ ಪ್ರತಿಕ್ರಿಯೆ, ಮರುಉತ್ತರ, ಎಂಬ ಅರ್ಥದಲ್ಲಿ ಕಾಣಬಹುದು.

೯. **ಶಿವಪೂಜಾ ಮಧ್ಯೆ ಕರಡಿ ಬಿಟ್ಟ ಹಾಗೆ.**

**ಟೈಮ್ ಮುಗಿದ ಮೇಲೆ ಮ್ಯಾನೇಜರ್ ಬಂದ ಹಾಗೆ.**

'ಶಿವಪೂಜಾ ಮಧ್ಯೆ ಕರಡಿ ಬಿಟ್ಟಹಾಗೆ' ಎಂಬ ನಾಣ್ಣುಡಿಗೆ ಅನ್ವಯವಾಗುವಂತೆ ಇಲ್ಲಿ 'ಶಿವಪೂಜಾ' ಮತ್ತು 'ಕರಡಿ' ಎಂಬ ದೇಶಿಯ ಪದಗಳ ಬದಲಾಗಿ ಆಧುನಿಕತೆಯ ಪರ್ಯಾಯ ಪದಗಳಾದ 'ಟೈಮ್' ಮತ್ತು 'ಮ್ಯಾನೇಜರ್' ಎಂಬ ಅನ್ಯದೇಶ್ಯ ಪದಗಳನ್ನು ಬಳಕೆ ಮಾಡಿ ನಾಣ್ಣುಡಿಯನ್ನು ಬಳಕೆ ಮಾಡಿರುತ್ತಾರೆ. ಇಲ್ಲಿ ವಾಕ್ಯದ ಕೊನೆಯಲ್ಲಿ ಪ್ರಾಸ ಬಳಕೆಯಾಗಿದೆ. 'ಟೈಮ್' ಎಂಬ ಇಂಗ್ಲೀಶ್ ಪದಕ್ಕೆ ಕನ್ನಡದಲ್ಲಿ ಸಮಯ, ಕಾಲ, ಅವಧಿ, ಸಮಾನಾರ್ಥಕ ಪದಗಳು ಬಳಕೆಯಲ್ಲಿವೆ, ಅದೇ ರೀತಿ 'ಮ್ಯಾನೇಜರ್' ಎಂಬ ಪದವು ಕನ್ನಡದಲ್ಲಿ 'ವ್ಯವಸ್ಥಾಪಕ' 'ಮುಖ್ಯಸ್ಥ' ಎಂಬ ಸಮನಾರ್ಥಕ ಪದಗಳಿವೆ.

೧೦. **ಚಿಂತೆಯಿಲ್ಲದವನಿಗೆ ಸಂತೆಯಲ್ಲೂ ನಿದ್ದೆ.**

**ಇಂಟರ್‌ನೆಟ್ ಇಲ್ಲದವನಿಗೆ ಕೂತಲ್ಲೆ ನಿದ್ದೆ.**

'ಚಿಂತೆಯಿಲ್ಲದವನಿಗೆ ಸಂತೆಯಲ್ಲೂ ನಿದ್ದೆ' ಎಂಬ ನಾಣ್ಣುಡಿಯಂತೆ 'ಇಂಟರ್‌ನೆಟ್' ಎಂಬ ಹೊಸ ತಾಂತ್ರಿಕ ಪದವನ್ನು ಬಳಸಿ 'ಇಂಟರ್‌ನೆಟ್ ಇಲ್ಲದವನಿಗೆ ಕೂತಲ್ಲೆ ನಿದ್ದೆ' ಎಂಬ ನಾಣ್ಣುಡಿಯನ್ನು ಬಳಕೆ ಮಾಡಿದ್ದಾರೆ. ಇಲ್ಲಿ 'ಇ' ಅಕ್ಷರ ಒಂದು ಕಡೆ ಲೋಪವಾದರೆ ಮತ್ತೊಂದು ಕಡೆ ಬಳಕೆಯಾಗಿದೆ. ವಾಕ್ಯದ ಕೊನೆಯಲ್ಲಿ ಪ್ರಾಸ ಬಳಕೆಯಾಗಿದೆ.

೧೧. **ಕೂತು ಉಣ್ಣುವವನಿಗೆ ಕುಡಿಕೆ ಹೊನ್ನು ಸಾಲದು.**

**ಕೂತು ಬ್ರೌಸ್ ಮಾಡುವವನಿಗೆ ಜಿಯೋ ಸಿಮ್ ಕೂಡಾ ಸಾಲದು.**

'ಕೂತು ಉಣ್ಣುವವನಿಗೆ ಕುಡಿಕೆ ಹೊನ್ನು ಸಾಲದು' ಎಂಬ ನಾಣ್ಣುಡಿಯಲ್ಲಿ 'ಉಣ್ಣುವವನಿಗೆ' ಬದಲಾಗಿ 'ಬ್ರೌಸ್' ಎಂಬ ಪದವನ್ನು, 'ಹೊನ್ನು' ಬದಲಾಗಿ 'ಜಿಯೋ ಸಿಮ್' ಎಂಬ ಹೊಸ ಪದಗಳನ್ನು ಬಳಕೆ ಮಾಡಿ ಈ ನಾಣ್ಣುಡಿಯನ್ನು ಸೃಷ್ಟಿಸಿರುವುದನ್ನು ಮನಗಾಣಬಹುದು. ಇಲ್ಲಿ 'ಕೂತು' ಮತ್ತು 'ಸಾಲದು' ಎಂಬ ಪ್ರಾಸ ಪದಗಳು ಯಥಾವತ್ತಾಗಿ ವಾಕ್ಯದಲ್ಲಿ ಬಳಕೆಯಾಗಿವೆ. ಅದೇ ರೀತಿ 'ಉಣ್ಣು' ಮತ್ತು 'ಮಾಡು' ಎಂಬ ಕ್ರಿಯಾಪದಗಳು ಬಳಕೆಯಾಗಿವೆ.

೧೨. **ಮಾತು ಮನೆ ಕೆಡಿಸಿತು.**

**ಫೇಸ್‌ಬುಕ್ ಪ್ರಪಂಚ ಕೆಡಿಸ್ತಿತು.**

'ಮಾತು ಮನೆ ಕೆಡಿಸಿತ್ತು' ಎಂಬ ನಾಣ್ಣುಡಿಯಂತೆ ರಚನೆಯಾಗಿರುವ ಆಧುನಿಕ ನಾಣ್ಣುಡಿಯಲ್ಲಿ 'ಮಾತು', 'ಮನೆ', ಬದಲಾಗಿ 'ಫೇಸ್‌ಬುಕ್' ಮತ್ತು 'ಪ್ರಪಂಚ' ಎಂಬ ಹೊಸ ಪದಗಳನ್ನು ಬಳಸಿ ರಚನೆಯಾದ ನಾಣ್ಣುಡಿಯಾಗಿದೆ. ಇಲ್ಲಿ 'ಕೆಡಿಸಿತ್ತು' ಎಂಬ ಪದ ಆಧುನಿಕತೆಯಲ್ಲಿ ಸಹ ಯಥಾವತ್ತಾಗಿ ಪ್ರಾಸ ಬದ್ಧವಾಗಿ ಬಳಕೆಯಲ್ಲಿದೆ.

೧೩. **ಗಂಡ ಹೆಂಡತಿ ಜಗಳ ಉಂಡು ಮಲಗೋ ತನಕ**
**ಗಂಡ ಹೆಂಡತಿ ಜಗಳ ವೈಫ್ಯ ಕನೆಕ್ಟ್ ಆಗುವ ತನಕ.**

'ಗಂಡ ಹೆಂಡತಿ ಜಗಳ ಉಂಡು ಮಲಗೋ ತನಕ' ಎಂಬ ನಾಣ್ಣುಡಿಯಂತೆ ಆಧುನಿಕತೆಯ ನಾಣ್ಣುಡಿಯಲ್ಲಿ 'ಉಂಡು ಮಲಗೋ' ಪದದ ಬದಲಾಗಿ ಆಧುನಿಕ ಪರಿಕರಗಳಲ್ಲಿ ಒಂದಾದ 'ವೈಫ್ಯೆಕನೆಕ್ಟ್' ಎಂಬ ಪದವನ್ನು ಇಲ್ಲಿ ಬಳಕೆ ಮಾಡಿ ಹೊಸ ನಾಣ್ಣುಡಿ ರೂಪಗೊಂಡಿದೆ. ವಾಕ್ಯದ ಮೊದಲಲ್ಲಿ ವಾಕ್ಯದ ಕೊನೆಯಲ್ಲಿ ಪ್ರಾಸ ಬಳಕೆಯಾಗಿದೆ.

೧೪. **ಬಡವರ ಮನೆ ಊಟ ಚೆನ್ನ, ದೊಡ್ಡವರ ಮನೆ ನೋಟ ಚೆನ್ನ**
**ಹುಡುಗರ ಮನಸ್ಸು ಚೆನ್ನ, ಹುಡಿಗಯರ ಮಾತು ಚೆನ್ನ.**

'ಬಡವರ ಮನೆ ಊಟ ಚೆನ್ನ, ದೊಡ್ಡವರ ಮನೆ ನೋಟ ಚೆನ್ನ' ಎಂಬ ನಾಣ್ಣುಡಿಯಂತೆ ರೂಪಗೊಂಡ ಹೊಸ ನಾಣ್ಣುಡಿ ಹುಡುಗರು ಮತ್ತು ಹುಡುಗಿಯರಿಗೆ ಸಂಬಂಧಿಸಿದಂತಹ ಹೊಸ ವಿಧಾನದಿಂದ ರೂಪಗೊಂಡ ನಾಣ್ಣುಡಿಯಾಗಿರುತ್ತದೆ. ಇಲ್ಲಿ 'ಬಡವರ' 'ದೊಡ್ಡವರ' ಎಂಬ ನಾಮಪದಗಳ ಬದಲಾಗಿ ಆಧುನಿಕ ನಾಣ್ಣುಡಿಯಲ್ಲಿ 'ಹುಡುಗರು' ಮತ್ತು 'ಹುಡುಗಿಯರು' ಎಂಬ ನಾಮಪದಗಳು ಬಳಕೆಯಾಗಿವೆ. ವಾಕ್ಯದ ಕೊನೆಯಲ್ಲಿ ಪ್ರಾಸ ಯಥಾವತ್ತಾಗಿ ಬಳಕೆಯಾಗಿದೆ.

೧೫. **ಹಾಸಿಗೆ ಇದ್ದಷ್ಟು ಕಾಲು ಚಾಚು.**
**ಕೂದಲು ಇದ್ದರೇ ಮಾತ್ರ ತಲೇ ಬಾಚು.**

'ಹಾಸಿಗೆ ಇದ್ದಷ್ಟು ಕಾಲು ಚಾಚು' ಎಂಬ ನಾಣ್ಣುಡಿಯಲ್ಲಿ 'ಹಾಸಿಗೆ' 'ಕಾಲು' ಪದಗಳಿಗೆ ಪರ್ಯಾಯವಾಗಿ 'ಕೂದಲು' 'ತಲೆ' ಎಂಬ ಪದಗಳು ಬಳಕೆಯಲ್ಲಿವೆ. ಇದು ಮನುಷ್ಯನ ಅಂಗಗಳಿಗೆ ಸಂಬಂಧಿಸಿದ ಅಪಹಾಸ್ಯಕಾರವಾದ ನಾಣ್ಣುಡಿಯಾಗಿ ರೂಪಗೊಂಡಿದೆ.

೧೬. **ಹೊಟ್ಟೆಗೆ ಹಿಟ್ಟಿಲ್ಲವೆಂದರೂ, ಜುಟ್ಟಿಗೆ ಮಲ್ಲಿಗೆ ಹೂ.**
**ಹೊಟ್ಟೆಗೆ ಹಿಟ್ಟಿಲ್ಲವೆಂದರೂ ಮೊಬೈಲ್‌ಗೆ ನೆಟ್ ಇರಬೇಕು.**

'ಹೊಟ್ಟೆಗೆ ಹಿಟ್ಟಿಲ್ಲಾವೆಂದರೂ ಜುಟ್ಟಿಗೆ ಮಲ್ಲಿಗೆ ಹೂ' ಎಂಬ ನಾಣ್ಣುಡಿಯಲ್ಲಿ 'ಜುಟ್ಟಿಗೆ ಮಲ್ಲಿಗೆ ಹೂ' ಎಂಬ ಪದದ ಬದಲಾಗಿ 'ಮೊಬೈಲ್‌ಗೆ ನೆಟ್' ಎಂಬ ಪರ್ಯಾಯ ಪದವನ್ನು ಬಳಸಿ ನಾಣ್ಣುಡಿಯನ್ನು ರಚನೆ ಮಾಡಿರುವುದನ್ನು ಕಾಣಬಹುದು. ಇಲ್ಲಿ ಸಹ ಪ್ರಾಸ ಬಳಕೆಯಾಗಿದೆ. ಜೊತೆಗೆ 'ಗೆ' ಪ್ರತ್ಯಯ ಬಳಕೆಯಾಗಿದೆ.

ಇನ್ನು ಕೆಲವು ನಾಣ್ಣುಡಿಗಳು ಹೊಸದಾಗಿ ಆಧುನಿಕತೆಗೆ ಅನುಗುಣವಾಗಿ ಬಳಕೆಯಲ್ಲಿವೆ. ಇವುಗಳು ಭಾಷಿಕ ವೈಶಿಷ್ಟತೆಯಿಂದ ವ್ಯತ್ಯಾಸ ಕಂಡು ಬರುತ್ತವೆ. ಇಲ್ಲಿ ಪ್ರಾಚೀನ ಪದಗಳಿಗೆ ಹೊಸ ಪದಗಳನ್ನು ಬಳಸಿಕೊಂಡು ಕೆಲವು ವೈಜ್ಞಾನಿಕ ನಾಣ್ಣುಡಿಗಳು ಸೃಷ್ಟಿಯಾಗಿವೆ. ಈ ನಾಣ್ಣುಡಿಗಳಲ್ಲಿ ವಸ್ತು, ವಿಷಯ, ಮಾತ್ರ ಬೇರೆಯಾಗಿರುವುದನ್ನು ಕಾಣಬಹುದು. ಅಂತಹ ನಾಣ್ಣುಡಿಗಳು ಈ ಕೆಳಗಿನಂತಿವೆ.

ಉದಾಹರಣೆಗೆ :

೧. ಮೊಬೈಲ್ ಇರುವವರ ಆರ್ಭಟ ಕರೆನ್ಸಿ ಇರುವವರೆಗೆ ಮಾತ್ರ.
೨. ಕಾಲ್ ಮಾಡಿದವನು ಕುರಿ, ಮೇಸೆಜ್ ಮಾಡಿದವನು ನರಿ.
೩. ಬಿ.ಎ. ಮಾಡೊದ್ದಕ್ಕಿಂತ ಬೀದಿ ಸುತ್ತೋದೆ ಲೇಸು.
೪. ಕರೆನ್ಸಿ ಹಾಕಲು ವರುಷ ಮುಗಿಸಲು ನಿಮಿಷ.
೫. ಎ.ಟಿ.ಎಮ್. ಮಿಷನ್‌ಗೆ ಕಾರ್ಡ್ ಹಾಕಿದರೆ ಹಣ ಬರುತ್ತೆ
ಗೌರ್ನಮೆಂಟ್ ಹಾಸ್ಪಿಟಲ್‌ಗೆ ವಾರ್ಡಗೆ ಸೇರಿದ್ರೆ ಹೆಣ ಬರುತ್ತೆ.
೬. ಬ್ಯಾಗ್ಸ್ ಗುಟ್ಟು ಇಸುಸ್ ರಟ್ಟು.
೭. ಯಾರದೊ ಮೊಬೈಲ್ ಗಂಟೆಗಟ್ಟಲೆ ಹರಟೆ.
೮. ಮಾತು ಬೆಳ್ಳಿ, ಎಸ್.ಎಂ.ಎಸ್. ಬಂಗಾರ

ಮೊಬೈಲ್, ಕರೆನ್ಸಿ, ಕಾಲ್, ಮೇಸೆಜ್(ಎಸ್.ಎಂ.ಎಸ್), ಎ.ಟಿ.ಎಂ ಮಿಷನ್, ಗೌರ್ನಮೆಂಟ್, ಹಾಸ್ಪಿಟಲ್, ವಾರ್ಡ್, ಬ್ಯಾಗ್ಸ್, ಇಸುಸ್, ಇನ್ನು ಮುಂತಾದ ಪದಗಳು ತಾಂತ್ರಿಕತೆಗೆ ಅನುಗುಣವಾಗಿ ನಾಣ್ನುಡಿಗಳಲ್ಲಿ ಬಳಕೆಯಾಗಿವೆ. ಜೊತೆಗೆ ಬೇರೊಂದು ಭಾಷೆಯ ಶಬ್ಧಗಳನ್ನು ಸ್ವೀಕರಿಸುವಾಗ ಆ ಭಾಷೆಗೆ ತಕ್ಕಂತೆ ಬಳಸಿ ನಾಣ್ನುಡಿಗಳಿಗೆ ಜೋಡಣೆ ಮಾಡಿರುವುದನ್ನು ಕಾಣಬಹುದು. ಉದಾಹರಣೆಗೆ:

'ಕರೆನ್ಸಿ ಹಾಕಲು ವರುಷ ಮುಗಿಸಲು ನಿಮಿಷ' ಎಂಬ ನಾಣ್ನುಡಿಯಲ್ಲಿ 'ಕರೆನ್ಸಿ' ಇಂಗ್ಲಿಷ್‌ನಿಂದ ಬಂದ ಶಬ್ದವಾಗಿದ್ದು, ಉಳಿದವು ಕನ್ನಡ ಶಬ್ದಗಳಾಗಿವೆ.

ಕೆಲವು ಹೊಸದಾಗಿ ರೂಪಗೊಂಡ ನಾಣ್ನುಡಿಗಳು, ಪ್ರಾಚೀನ ನಾಣ್ನುಡಿಗಳು ಭಾಷಿಕ ದೃಷ್ಟಿಯಿಂದ ಹೆಚ್ಚು ಸಾಮ್ಯತೆ ಕಂಡು ಬರುವುದಿಲ್ಲ ಏಕೆಂದರೆ ಪ್ರಾಚೀನ ಪದಗಳನ್ನೇ ಬಳಸಿ ಹೊಸ ರೂಪದಲ್ಲಿ ಬಳಕೆ ಮಾಡಿರುತ್ತಾರೆ ಅಂತಹ ನಾಣ್ನುಡಿಗಳು ಈ ಕೆಳಗಿನಂತೆ ಕಾಣಬಹುದು. ಉದಾಹರಣೆಗೆ :

ಪ್ರಾ. ನಾ : ೧. ಉಂಡವನಿಗೆ ಊಟ ಹಾಕಬೇಡ,
ಆ. ನಾ : ಬೋಳತಲೆಗೆ ಎಣ್ಣೆ ಹಾಕಬೇಡ.

೨. ಆಳೂರಿಗೆ ಉಳಿದವನೇ ಗೌಡ.
ಬೆಂಗಳೂರಿಗೆ ಬಂದವನೇ ಬಹದ್ದೂರ.
೩. ಒಗ್ಗರಣೆ ಇಲ್ಲದೆ ಇದ್ದರೆ ಅಡುಗೆ ರುಚಿ ಇರಲ್ಲ
ಹಗರಣ ಮಾಡದೇ ಇದ್ರೆ ರಾಜಕೀಯ ಕುರ್ಚಿ ಸಿಗಲ್ಲ
೪. ತುಂಬಿದ ಕೊಡ ತುಳುಕುವುದಿಲ್ಲ.
ಖಾಲಿ ಕೊಡವು ತುಳುಕುವುದಿಲ್ಲ.
೫. ಮಾತನಾಡದೇ ಮೌನವಾಗಿದ್ದರೆ ಮೂಕನಂತೆ
ಮಾತು ಮಿತಿಮೀರಿದರೆ ಮೂರ್ಖನಂತೆ.
೬. ಕೈ ಕೆಸರಾದರೆ ಬಾಯಿ ಮೊಸರು.

ಕೈ ಕೆಸರಾದರೆ ಕೈ ತೊಳ್ಕೊಳ್ಳಿ
೭. ಹಸಿದು ಹಲಸಿನ ಹಣ್ಣು ತಿನ್ನು
ಉಂಡು ಮಾವಿನ ಹಣ್ಣು ತಿನ್ನು
೮. ಕುಣಿಯಲಾರದವಳು ನೆಲ ಡೊಂಕು ಎಂದಳಂತೆ.
ನಡಿಯಲಾರದವಳು ಕಾಲು ಡೊಂಕು ಎಂದಳಂತೆ.
೯. ಮೂರು ದೋಸೆ ಕೊಡುತ್ತೇನೆ ಹಾಡೋ ದಾಸಯ್ಯ
ಆರು ದೋಸೆ ಕೊಡುತ್ತೇನೆ ನಿಲ್ಲಿಸೋ ದಾಸಯ್ಯ

ಈ ಮೇಲಿನ ನಾಣ್ಣುಡಿಗಳಲ್ಲಿ ಸಹ ಪ್ರಾಸ, ಅನುಪ್ರಾಸ, ಕ್ರಿಯಾಪದ, ನಾಮಪದ, ವಿಭಕ್ತಿಪ್ರತ್ಯಯಗಳನ್ನು ಒಳಗೊಂಡು ರಚನೆಯಾದಂತಹ ನಾಣ್ಣುಡಿಗಳು ಹೀಗೆ ಇನ್ನು ಮುಂತಾದ ನಾಣ್ಣುಡಿಗಳನ್ನು ಜನಸಾಮಾನ್ಯರು ಆಯಾ ಸಂದರ್ಭಕ್ಕೆ, ಸನ್ನಿವೇಶಕ್ಕೆ ತಕ್ಕಂತೆ ಬಳಕೆ ಮಾಡುತ್ತಾರೆ ಎಂಬುದಕ್ಕೆ ಈ ಮೇಲಿನ ನಾಣ್ಣುಡಿಗಳೇ ಉತ್ತಮ ನಿದರ್ಶನ, ಇನ್ನು ಮುಂತಾದ ನಾಣ್ಣುಡಿಗಳು ಈ ಕೆಳಗಿನಂತಿವೆ. ಅವುಗಳೆಂದರೆ :

೧. ತನ್ನ ಮೇಲೆ ತಾನೇ ಅಪವಾದ ಹಾಕಿಕೊಂಡಂತೆ
೨. ಆಕಾರ ನೋಡಿದ ಸ್ವೀಕಾರ ಮಾಡಿದ
೩. ಕೈ ಹಿಡಿಯುವಾಗ ಅಗ್ನಿಸಾಕ್ಷಿ, ಕೈ ಕೊಡುವಾಗ ಆತ್ಮಸಾಕ್ಷಿ
೪. ನಾಯಿ ಮೇಲಿರೋ ಪ್ರೀತಿ ತಾಯಿ ಮೇಲಿಲ್ಲ
೫. ಪ್ರಾಥಮಿಕ ಶಾಲೆಯಲ್ಲಿ ಬಗ್ಗದವ ವಯಸ್ಕರ ಶಿಕ್ಷಣದಲ್ಲಿ ಬಗಿಯಾನೇ
೬. ಒಲಿದರೆ ಭಡ್ತಿ, ಮುನಿದರೆ ಕೆಡ್ತಿ
೭. ತಾಳಿ ಕಟ್ಟೋಕೆ ಕೂಲಿ ಕೇಳಿದ
೮. ತಿಳಿಯದವರ ಮುಂದೆ ಭಾಷಣ ಬೀಗಿದ ಹಾಗೆ
೯. ಭ್ರಷ್ಟರ ಕೈಗೆ ಅಧಿಕಾರ ಕೊಟ್ಟ ಹಾಗೆ
೧೦. ಸ್ವಕ್ಷೇತ್ರವನ್ನು ಉದ್ಧಾರ ಮಾಡದವನ್ನು ಪರ ಕ್ಷೇತ್ರವನ್ನು ಉದ್ಧಾರ ಮಾಡುವನೇ?

ಈ ನಾಣ್ಣುಡಿಗಳಲ್ಲಿ ಕೇವಲ ಒಂದು ಅನ್ಯದೇಶ್ಯ ನುಡಿ ಬೆರಕೆಯಾಗಿದು. ಇನ್ನು ಉಳಿದ ದೇಶಿಯ ಪದಗಳನ್ನು ವಾಕ್ಯದಲ್ಲಿ ಯಥಾವತ್ತಾಗಿ ಬಳಸಿರುವುದು ಕಂಡು ಬರುತ್ತದೆ. ಇಲ್ಲಿ ಕರೆನ್ಸಿ, ಟಿ.ವಿ., ಪಾರ್ಟಿ, ಥಿಂಕ್, ಮೊಬೈಲ್ ಎನ್ನುವ ಪದಗಳು ಹೊಸದಾಗಿ ನಾಣ್ಣುಡಿಗಳಲ್ಲಿ ಬಳಸಿರುವುದು ಗಮನಿಸಬಹುದು.ಉದಾಹರಣೆಗೆ :

೧. ಕರೆನ್ಸಿ ಹಾಕಲು ವರುಷ ಮುಗಿಸಲು ನಿಮಿಷ
೨. ಅಜ್ಜಿಗೆ ಅರಿವೆ ಚಿಂತೆ ಮೊಮ್ಮಗಳಿಗೆ ಟಿ.ವಿ. ಚಿಂತೆ
೩. ಅಭ್ಯರ್ಥಿ ಮೇಲೆ ದ್ವೇಷ, ಪಾರ್ಟಿ ಮೇಲೆ ಪ್ರೀತಿ
೪. ಥಿಂಕ್ ಮಾಡಿ ಮಂಕಾದ
೫. ಮೊಬೈಲ್ ಇಲ್ಲದ ಮನೆಯಿಂದ ಸೊಸೆ ತಗೊಂಡು ಬಾ
೬. ಇಂಟರ್‌ನೆಟ್ ಇಲ್ಲದವನಿಗೆ ಕೊತಲ್ಲೇ ನಿದ್ದೆ

೭. ಫೇಸ್ ಬುಕ್ ಪ್ರಪಂಚ ಕೆಡಿಸಿತ್ತು.

ಎನ್ನುವಂಥ ಪ್ರತಿಯೊಂದು ಸಾಲಿನಲ್ಲಿಲೂ ಬೇರೆ ಭಾಷೆಯ ಒಂದು ಪದ ಬಳಕೆ ಇರುವುದನ್ನು ನಾಣ್ಣುಡಿಗಳಲ್ಲಿ ಬಳಸಿರುವುದನ್ನು ಗಮನಿಸಬಹುದು. ಇಲ್ಲಿ ಪ್ರಾಚೀನ ಪದಗಳಿಗೆ ಪರ್ಯಾಯವಾಗಿ ಹೊಸದಾಗಿ ಪದಗಳನ್ನು ಬಳಸಿಕೊಂಡು ಹೊಸ ರೂಪದಲ್ಲಿ ರಚನೆ ಮಾಡಿ ಬಳಕೆ ಮಾಡಿರುವುದನ್ನು ಗಮನಿಸಬಹುದು. ಇದರಂತೆ ಜನಸಾಮಾನ್ಯರು ಅದು ಇಂಗ್ಲಿಶ್ ಪದವೋ, ಯಾವ ಭಾಷೆಯ ಪದವೋ ಎಂಬ ಅರಿವಿಲ್ಲದೆ ನಾಣ್ಣುಡಿಗಳಲ್ಲಿ ಸಹಜವಾಗಿ ಇಂತಹ ಪದಗಳನ್ನು ಬಳಸುತ್ತಿದ್ದಾರೆ. ಅವುಗಳಿಗೆ ಕನ್ನಡದ ಅರ್ಥವೂ ನಿರ್ದಿಷ್ಟಗೊಂಡಿವೆ' ಉದಾಹರಣೆಗೆ: 'ರೇಡಿಯೋಕ್ಕೊಂದು ಕಾಲ, ಟಿ.ವಿ.ಗೊಂದು ಕಾಲ' ಎಂಬಲ್ಲಿ 'ರೇಡಿಯೋ' ಮತ್ತು 'ಟಿ.ವಿ.' ಎಂಬ ಇಂಗ್ಲೀಶ್ ಪದಗಳು ಬಳಕೆಯಾಗಿವೆ. ಇಂಗ್ಲೀಶ್ ಪದಗಳಿಗೆ ಸಂವಾದಿಯಾಗಿ ಕನ್ನಡದಲ್ಲಿ 'ಆಕಾಶವಾಣಿ' ಮತ್ತು 'ದೂರದರ್ಶನ' ಎಂಬ ಅರ್ಥದಲ್ಲಿ ಬಳಕೆಯಲ್ಲಿವೆ. ಇವುಗಳ ಅರ್ಥವನ್ನು ತಿಳಿಯಾದ ಜನಸಾಮಾನ್ಯರು ನಿತ್ಯಜೀವನದಲ್ಲಿ ಕನ್ನಡ ಪದಗಳು ಎಂಬಂತೆ ಬಳಸುತ್ತಾರೆ.

ಆಧುನಿಕ ನಾಣ್ಣುಡಿಗಳಲ್ಲಿ ಅಥವಾ ವಾಕ್ಯಗಳಲ್ಲಿ ಹೆಚ್ಚು ನುಡಿಬೆರಕೆಯಾಗಿ ಹೊಸದಾಗಿ ಬಳಕೆಯಾಗಿರುವುದುಂಟು. ನುಡಿಬೆರಕೆಯಲ್ಲಿ ಹೆಚ್ಚಾಗಿ ಕಂಡು ಬರುವುದೇ ಪಾರಿಭಾಷಿಕ ಪದಗಳು. ದೇಶಿಯ ಪದಗಳೊಂದಿಗೆ ಸೇರಿ ಹೊಸ ರೀತಿಯಲ್ಲಿ ರಚನೆಯಾಗಿ ಜನಸಾಮಾನ್ಯರ ಭಾಷೆಯಲ್ಲಿ ನುಡಿಬೆರಕೆಯಾಗಿ ನಾಣ್ಣುಡಿಗಳಲ್ಲಿ ಹಾಸುಹೋಕ್ಕಾಗಿ ಹೇಗೆ ಬಳಕೆಯಾಗಿರುತ್ತವೆ ಎಂಬುದನ್ನು ಈ ಕೆಳಕಂಡಂತೆ ಕಾಣಬಹುದು. ಉದಾಹರಣೆಗೆ:

೧. ಗಂಡ ಮ್ಯಾಚಿಗೆ ಹೊರೆಟ್ರೆ, ಹೆಂಡ್ತಿ ಕ್ಲಬ್‌ಗೆ ಹೊರಟಳು
೨. ಹೆಂಡತಿ ವಾಕಿಂಗ್ ಗಂಡ ಕುಕಿಂಗ್
೩. ಹಾಡಲಾರದ ಹುಡುಗಿ ಹಾರ್ಮೋನಿಯಂ ಚೆನ್ನಾಗಿಲ್ಲ ಎಂದಳು
೪. ನಮ್ಮ ರೀಸರ್ಚೂ ಒಂದೇ, ಗೆಣಸು ಕೆರೆಯೋದು ಒಂದೇ
೫. ರೋಗಿ ಬಯಸಿದ್ದು ಬ್ರಾಂದಿ, ವೈದ್ಯ ಹೇಳಿದ್ದು ಬ್ರಾಂದಿ
೬. ಶಾಲಾ ಮಾಸ್ತರಿಗೆ ಬುದ್ಧಿ ಇಲ್ಲ, ಸ್ಟೇಷನ್ ಮಾಸ್ತರಿಗೆ ನಿದ್ರೆಯಿಲ್ಲ
೭. ಛೇರ್‌ಗಾಗಿ ಹೋದ ಮಾನ ಛೇಂಬರ್ ಕೊಟ್ಟರೂ ಬಾರದು,
೮. ಜಾತ್ಯಾತೀತ ರಾಷ್ಟ್ರದಲ್ಲಿ ನೀತ್ಯಾತೀತ ಕಮಿಟಿ
೯. ಥಿಂಕ್ ಮಾಡಿ ಮಂಕಾದ
೧೦. ಪಿಲ್ ನುಂಗಿ ಸಾಯದವ ಬಿಲ್ ನುಂಗಿ ಸತ್ತಾನೇ?
೧೧. ಮುಖ ಕಪ್ಪಾದರೆ ಸ್ನೋ ಪೌಡರ್ ಕಪ್ಪೇ?
೧೨. ಮುನಿಸಿಪಾಲ್ ಪಾರ್ಕಿಗೆ ಮಾಲಿಯೂ ಇಲ್ಲ, ಬೇಲಿಯೂ ಇಲ್ಲ,
೧೩. ಸೂಪರ್‌ವೈಸರ್ ಒಳ್ಳೆಯವನಾದ್ರೇ ಪರೀಕ್ಷೆಯಲ್ಲಾ ಒಳ್ಳೆಯದು;
೧೪. ವರದಕ್ಷಿಣೆ ತಿರಸ್ಕಾರ ಮೋಟಾರ್ ಕಾರ್ ಸ್ವೀಕಾರ
೧೫. ಕೆಮ್ಮಿದರೆ ಡಾಕ್ಟ್ರು, ಸೀತರೆ ನರ್ಸ್

೧೬. ಹೋಟೆಲ್ಲಿಲ್ಲದ ಊರಿಲ್ಲ, ಪಾರ್ಟಿಯಿಲ್ಲದ ಊರಿಲ್ಲ,
೧೭. ಬ್ಯಾಂಕಿನಲ್ಲಿ ಬಂದದ್ದು ರೇಸಿನಲ್ಲಿ ಹೋಯಿತು
೧೮. ಹ್ಯಾಪಿಯಾಗಿರಿ ಅಳಿಯಂದಿರೇ, ಅಂದರೆ ಮರೀದೇ ಕಾಫಿ ಕಳ್ಸಿ ಎಂದ
೧೯. ಸ್ಟೇನ್‌ಲೆಸ್ ಸ್ಟೀಲ್ ಕೊಡ ಪ್ಲಾಸ್ಟಿಕ್ ಕೊಡ ಕಂಡು ನಕ್ಕಿತಂತೆ,
೨೦. ಕರೆಂಟು ಇಲ್ಲದವರಿಗೆ ನೀರಿಲ್ಲ, ನೀರಿದ್ದವರಿಗೆ ಕರೆಂಟ್ ಇಲ್ಲ
೨೧. ಸಾವಿರ ಸುಳ್ಳು ಹೇಳಿ ಇಂದು ವೋಟು ಹೋಡಿ
೨೨. ಇನ್‌ಫ್ಲುಯೆನ್ಸ್ ಇರೋನಿಗೆ ಎಲಿಜಿಬಲಿಟಿ ಏಕೆ?

ಹೀಗೆ ನಾಣ್ಣುಡಿಗಳನ್ನು ಹೇಗೆಬೇಕಾದರೂ ಬಳಕೆಮಾಡಬಹುದು ಎಂಬುದಕ್ಕೆ ಈ ಮೇಲಿನ ನಾಣ್ಣುಡಿಗಳೇ ಸಾಕ್ಷಿ. ನಾಣ್ಣುಡಿಗಳಲ್ಲಿ ಕಂಡು ಬರುವ ನುಡಿಬೆರಕೆಗಳಾದ ಹೊಸ ಶಬ್ದಗಳು, ಮ್ಯಾಚ್, ಕ್ಲಬ್, ವಾಕಿಂಗ್, ಕುಕಿಂಗ್, ಹಾರ್ಮೋನಿಯಂ, ರಿಸರ್ಚ್, ಬ್ರಾಂದಿ, ಸ್ಟೇಷನ್, ಛೇರ್, ಛೇಂಬರ್, ಕಮಿಟಿ, ಥಿಂಕ್, ಪಿಲ್, ಬಿಲ್, ಪೇಪರ್, ಪಾಪರ್, ಸ್ನೋ ಪೌಡರ್, ಮುನಿಸಿಪಲ್, ಪ್ರಾರ್ಕು, ಸೂಪರ್ ವೈಸರ್, ಮೋಟರ್, ಕಾರ್, ಡಾಕ್ಟ್ರು, ನರ್ಸ್, ಹೋಟೆಲ್, ಪಾರ್ಟಿ, ಬ್ಯಾಂಕ್, ರೇಸ್, ಹ್ಯಾಪಿ, ಕಾಫಿ, ಸ್ಟೇನ್‌ಲೆಸ್, ಸ್ಟೀಲ್, ಪ್ಲಾಸ್ಟಿಕ್, ಕರೆಂಟ್, ವೋಟು, ಇನ್‌ಪೂಯೆನ್ಸ್ ಮತ್ತು ಎಲಿಜಿಬಲಿಟಿ ಪದಗಳು ನಾಣ್ಣುಡಿಗಳಲ್ಲಿ ಹೇಗೆ ನುಡಿಬೆರಕೆಯಾಗಿ ರಚನೆಯಲ್ಲಿ ಕಂಡು ಬಂದಿವೆ ಎಂಬುದನ್ನು ಇಲ್ಲಿ ಗಮನಿಸಲಾಗಿದೆ.

ನಾಮಪದಗಳಲ್ಲಿ ಸಹ ಭಾಷಿಕ ಸಾಮ್ಯತೆ ಕಂಡು ಬರುತ್ತದೆ. ಪ್ರಾಚೀನ ಮತ್ತು ಪ್ರಸ್ತುತ ನಾಣ್ಣುಡಿಗಳಲ್ಲಿ ಹೆಚ್ಚು ನಾಮಪದಗಳಲ್ಲಿ ಭಿನ್ನತೆ ಕಂಡು ಬರುತ್ತದೆ. ಉದಾಹರಣೆಗೆ:

ಪ್ರಾಚೀನ : 'ಊರಿಗೆ ಬಂದವಳು ನೀರಿಗೆ ಬರಲ್ವಾ'
ಪ್ರಸ್ತುತ : 'ಫೇಸ್‌ಬುಕ್‌ಗೆ ಬಂದವಳು ವಾಟ್ಸ್‌ಆಫ್‌ಗೆ ಬರಲ್ವಾ'

ಈ ಮೇಲಿನ ಪ್ರಾಚೀನ ನಾಣ್ಣುಡಿಯಲ್ಲಿ 'ಊರಿಗೆ' ಮತ್ತು 'ನೀರಿಗೆ' ಎಂಬ ನಾಮಪದಗಳು ಬಳಕೆಯಾದರೆ, ಪ್ರಸ್ತುತ ನಾಣ್ಣುಡಿಯಲ್ಲಿ 'ಫೇಸ್‌ಬುಕ್' ವಾಟ್ಸ್‌ಆಫ್ ಎಂಬ ನಾಮಪದಗಳು ಬಳಕೆಯಾಗಿರುವುದನ್ನು ಕಾಣಬಹುದು. ಈ ರೀತಿಯ ನಾಮಪದಗಳೇ ಆಧುನಿಕ ನಾಣ್ಣುಡಿಗಳ ಹುಟ್ಟಿಗೆ ಕಾರಣ ಎನ್ನಬಹುದು. ಅದೇ ರೀತಿ ನಾಣ್ಣುಡಿಗಳಲ್ಲಿ ಬಳಕೆಯಾದ ಕ್ರಿಯಾಪದಗಳಲ್ಲಿ ಭಾಷಿಕ ಸಾಮ್ಯತೆ ಕಂಡು ಬಂದಿರುತ್ತದೆ, ಉದಾಹರಣೆಗೆ :

೧. ಕುಣಿಯಲಾರದವಳು ನೆಲ ಡೊಂಕು ಎಂದಳಂತೆ
ನಡೆರಲಾರದವಳು ಕಾಲು ಡೊಂಕು ಎಂದಳಂತೆ

೨. ಮೂರು ದೋಸೆ ಕೊಡುತ್ತೇನೆ ಹಾಡೋ ದಾಸಯ್ಯ
ಆರು ದೋಸೆ ಕೊಡುತ್ತೇನೆ ನಿಲ್ಲಿಸೋ ದಾಸಯ್ಯ

ಎಂಬ ಮೇಲಿನ ನಾಣ್ಣುಡಿಗಳಲ್ಲಿ ಕ್ರಿಯಾಪದಗಳಾದ 'ಕುಣಿಯಲಾರದವಳು', 'ನಡೆರಲಾರದವಳು', 'ಹಾಡೋ' ಮತ್ತು 'ನಿಲ್ಲಿಸೋ' ಎಂಬ ಕ್ರಿಯಾಪದಗಳು ನಾಣ್ಣುಡಿಗಳಲ್ಲಿ ಬಳಕೆಯಾಗಿರುವುದು ಇಲ್ಲಿ ಕಂಡು ಬರುತ್ತದೆ. ಇದರಂತೆ ಗುಣವಾಚಕ ಪದಗಳು ಸಹ ನಾಣ್ಣುಡಿಗಳಲ್ಲಿ ಹೇರಳವಾಗಿ ಬಳಕೆಯಾಗಿವೆ.
ಉದಾಹರಣೆಗೆ :

ಹಸಿದು ಹಲಸಿನ ಹಣ್ಣು ತಿನ್ನು
ಉಂಡು ಮಾವಿನ ಹಣ್ಣು ತಿನ್ನು

ಎಂಬಲ್ಲಿ 'ಹಸಿದು' ಮತ್ತು 'ಉಂಡು' ಎಂಬ ಗುಣವಾಚಕ ಪದಗಳು ಬಳಕೆಯಾಗಿರುವುದನ್ನು ಕಾಣಬಹುದು. ಜೊತೆಗೆ ನುಡಿಬೆರಕೆ ಮತ್ತು ನುಡಿಪಲ್ಲಟ ದ್ವಿಭಾಷಿಕ ಸನ್ನಿವೇಶಗಳಲ್ಲಿ ಭಾಷಿಕರ ವ್ಯವಹಾರದಲ್ಲಿ ಕಂಡು ಬರುವ ಮುಖ್ಯ ಭಾಷಿಕ ಪ್ರಕ್ರಿಯೆಗಳಾಗಿ ನುಡಿಬೆರಕೆ ಮತ್ತು ನುಡಿಪಲ್ಲಟಗಳನ್ನು ಗುರುತಿಸಬಹುದು. ಜನರು ಆಡುವ ಭಾಷೆಯಲ್ಲಿ ಒಂದಕ್ಕಿಂತ ಹೆಚ್ಚು ಭಾಷೆಗಳು ಮಿಶ್ರ ಆಗುವುದರೊಂದಿಗೆ ನುಡಿಬೆರಕೆ, ನುಡಿಜಿಗಿತಗಳಾಗುತ್ತವೆ. ಹಾಗೆಯೇ ಸಂವಹನ ನಡೆಸುವ ಕಾಲಕ್ಕೆ ಅನ್ಯದೇಶಿಯ ಪದಗಳು ಕನ್ನಡದ ನುಡಿಗಳಲ್ಲಿ ಸರಾಗವಾಗಿ ಬಳಕೆಯಾಗುವುದನ್ನು ಇಲ್ಲಿ ಗಮನಿಸಬಹುದು. ಉದಾಹರಣೆಗೆ: 'ಮೊಬೈಲ್ ಇಲ್ಲದ ಮನೆಯಲ್ಲಿ ಸೊಸೆ ತಗೊಂಡು ಬಾ' ಎನ್ನುವಂಥ ನಾಣ್ಣುಡಿಯಲ್ಲಿ ಇಂಗ್ಲೀಷಿನ 'ಮೊಬೈಲ್' ಎನ್ನುವ ನುಡಿಯೊಂದು ಸೇರಿ ನುಡಿಬೆರಕೆಯಾಗಿರುವುದನ್ನು ಗಮನಿಸಬಹುದು.

ಇದರಂತೆ ಇಂದಿನ ತಲೆಮಾರಿನ ನಾಣ್ಣುಡಿಗಳು ಮತ್ತು ಪ್ರಸ್ತುತ ನಾಣ್ಣುಡಿಗಳಲ್ಲಿ ಕಂಡುಬರುವ ವಸ್ತುಧೋರಣೆ, ಶೈಲಿ, ನೆಲೆ, ಬೆಲೆ ಇವೆಲ್ಲ ಒಂದೇಯಾದರೂ ವಸ್ತುವಿನಲ್ಲಿ ಸ್ಥಳವ್ಯತ್ಯಾಸಕ್ಕನುಗುಣವಾಗಿ ಸಣ್ಣಪುಟ್ಟ ಮಾರ್ಪಾಟುಗಳಿದ್ದರೂ ಶೈಲಿಯಲ್ಲಿ ಅಲಂಕಾರ ವಿಶೇಷಗಳಲ್ಲಿ ಎರಡು ರೂಪದಲ್ಲಿ ಎಳ್ಳಷ್ಟೂ ವ್ಯತ್ಯಾಸವಿಲ್ಲ. ಉದಾಹರಣೆಗೆ : 'ಚಿಂತೆ ಇಲ್ಲದವನಿಗೆ ಸಂತೆಯಲ್ಲೂ ನಿದ್ದೆ' ಎನ್ನುವಂಥ ನಾಣ್ಣುಡಿಯಲ್ಲಿ ಪ್ರಸ್ತುತ ನಾಣ್ಣುಡಿಯಾದ 'ಇಂಟರ್‌ನೆಟ್ ಇಲ್ಲದವನಿಗೆ ಕೂತಲ್ಲೆ ನಿದ್ದೆ' ಎನ್ನುವ ಅಲ್ಪ ಸ್ವಲ್ಪ ವ್ಯತ್ಯಾಸವಾಗಿರುವುದು ಆಧುನಿಕತೆಯ ನಾಣ್ಣುಡಿಗಳಲ್ಲಿ ಕಂಡು ಬರುತ್ತದೆ. ಇದರಂತೆ ದೇಶಿಯ ಪದಗಳನ್ನೇ ಬಳಸಿಕೊಂಡು ಆಧುನಿಕ ಜನರು ಪ್ರಾಚೀನ ನಾಣ್ಣುಡಿಗಳಂತೆ ಹೊಸ ನಾಣ್ಣುಡಿಗಳನ್ನು ಸೃಷ್ಟಿಸಿಕೊಂಡಿರುವುದನ್ನು ಭಾಷಿಕವಾಗಿ ವಿಶ್ಲೇಸಿಸಬಹುದು. ಉದಾಹರಣೆಗೆ: 'ಒಗ್ಗರಣೆ ಹಾಕದೆ ಇದ್ದರೆ ಅಡುಗೆ ರುಚಿ ಇರಲ್ಲ' ಎನ್ನುವಂಥ ನಾಣ್ಣುಡಿಗೆ ಸರಿಸಮನಾಗಿ 'ಹಗರಣ ಮಾಡದೆ ಇದ್ರೆ ರಾಜಕೀಯ ಕುರ್ಚಿ ಸಿಗಲ್ಲ' ಎನ್ನುವ ಹಾಗೆ ಹೊಸ ನಾಣ್ಣುಡಿಗಳನ್ನು ಸೃಷ್ಟಿಸಿಕೊಂಡಿದ್ದಾರೆ. ಜೊತೆಗೆ ನಾಣ್ಣುಡಿಗಳನ್ನು ಬೇರೆ ಬೇರೆ ಕಾಲಕ್ಕೆ ತಕ್ಕಂತೆ ಬಳಕೆ ಮಾಡಿರುವುದನ್ನು ಕಾಣಬಹುದು. ಉದಾಹರಣೆಗೆ : 'ಮಾತು ಮನೆ ಕೆಡಿಸಿತ್ತು' ಎನ್ನುವ ಬದಲಾಗಿ 'ಫೇಸ್‌ಬುಕ್ ಪ್ರಪಂಚ ಕೆಡಿಸಿತ್ತು' ಎನ್ನುವ ಹಾಗೆ, ಪ್ರಾಚೀನ ನಾಣ್ಣುಡಿಗಳಿಗೆ ಪ್ರಸ್ತುತ ಪರ್ಯಾಯ ಪದಗಳನ್ನು ಬಳಸಿ ಹೊಸ ನಾಣ್ಣುಡಿಗಳನ್ನು ಬಳಕೆಗೆ ತಂದಿರುವುವುದನ್ನು ಕಾಣಬಹುದು. ಉದಾಹರಣೆ: 'ದಯವೇ

ಧರ್ಮದ ಮೂಲವಯ್ಯ' ಎಂಬಲ್ಲಿ 'ಹೈಟೆಕ್‌ಗೆ ಮೊಬೈಲ್ ಮೂಲವಯ್ಯ' ಎನ್ನುವಲ್ಲಿ ಪರ್ಯಾಯ ಪದಗಳನ್ನು ಬಳಸಿರುವುದು ಗಮನಿಸಬಹುದು.

ಕೆಲವು ನಾಣ್ಣುಡಿಗಳಲ್ಲಿ ಅರ್ಥವೂ ಬದಲಾಗುವುದುಂಟು, ಅರ್ಥವು ಬದಲಿಸಿದಂತೆ ಪ್ರಯೋಗದಲ್ಲಿ ಭಿನ್ನತೆ ಕಂಡು ಬರುತ್ತದೆ. ಉದಾಹರಣೆಗೆ: 'ಊರೆಲ್ಲ ದೋಚಿಕೊಂಡು ಹೋದ ಮೇಲೆ ದೊಡ್ಡಿ ಬಾಗಿಲು ಹಾಕಿದರಂತೆ' ಎನ್ನುವ ಬದಲು 'ವೈರಸ್ ಅಟ್ಯಾಕ್ ಆದಮೇಲೆ ಆ್ಯಂಟಿ ವೈರೆಸ್ ಹಾಕಿಸಿದರಂತೆ' ಎಂಬ ನಾಣ್ಣುಡಿಯನ್ನು ಗಮನಿಸಬಹುದು. ಹೊಸ ಕಾಲಕ್ಕೆ ತಕ್ಕಂತೆ ನಾಣ್ಣುಡಿಗಳನ್ನು ಸೃಷ್ಟಿಸಿಕೊಂಡು ತಮ್ಮ ಭಾಷೆಯನ್ನು ಬೆಳೆಸುತ್ತಿರುವುದು ಜೊತೆಗೆ ಜನಪದರ ಭಾಷೆಗೂ ಪ್ರಸ್ತುತ ಜನಸಾಮಾನ್ಯರ ಭಾಷೆಗೂ ಇರುವ ಭಾಷಾ ವೈಶಿಷ್ಟತೆಯನ್ನು ಇಲ್ಲಿ ಕಂಡು ಬರುತ್ತದೆ. ಕನ್ನಡ ಭಾಷೆಯ ಪ್ರಾಚೀನ ನಾಣ್ಣುಡಿಗಳಲ್ಲಿ ಮತ್ತು ಇತರ ಭಾಷೆಯ ಹೊಸ ಪದಗಳು ಕನ್ನಡದ ನಾಣ್ಣುಡಿಗಳಲ್ಲಿ ನುಡಿಬೆರಕೆಯಾಗಿ ಬಳಕೆಯಾಗಿರುವುದು ಕಂಡು ಬರುತ್ತದೆ, ಒಂದು ಅನ್ಯಭಾಷೆಯಿಂದ ಪದಗಳನ್ನು ಎರವಲು ಪಡೆದು ಕನ್ನಡ ಭಾಷೆಗೆ ತಕ್ಕಂತೆ ರೂಪಾಂತರಿಸಿ, ಭಾಷಾಂತರಿಸಿ, ನಮ್ಮ ಭಾಷೆಯಲ್ಲಿ ಬಳಸತೊಡಗುತ್ತೇವೆ ಅಥವಾ ಬಳಕೆಯ ಪದವೊಂದಕ್ಕೆ ಹೊಸ ಅರ್ಥಸಾಧ್ಯತೆಯನ್ನು ಕಲ್ಪಿಸುತ್ತೇವೆ. ಇದ್ದರಿಂದ ಹೊಸ ರೂಪುರೇಷಗಳು ಹುಟ್ಟಿಕೊಳ್ಳುತ್ತಾ ಹೊಸ ರಚನೆಯಾಗಿ ಬಳಕೆಗೆ ಬರುತ್ತವೆ. ಈ ಪ್ರಸ್ತುತ ಸಮಾಜದಲ್ಲಿ ಭಾಷೆಯು ಹೊಸ ಅವಿಷ್ಕಾರಗಳಂತೆ ದಿನ ದಿನಕ್ಕೆ ಶೈಲಿಯನ್ನು ಬದಲಿಸುತ್ತಾ ಸಾಗುತ್ತದೆ. ಹೀಗೆ ಒಂದು ಭಾಷೆಯ ಬದಲಾವಣೆಗೆ ಈ ಮೇಲಿನ ಒಳಅಂಶಗಳು ಕಾರಣವಾಗುತ್ತವೆ ಎಂಬುದರಲ್ಲಿ ಎರಡು ಮಾತಿಲ್ಲ. ಹೀಗೆ ನಾಣ್ಣುಡಿಗಳು ಆಧುನಿಕತೆಗೆ ಹೇಗೆ ರೂಪಗೊಂಡು ಜನಸಾಮಾನ್ಯರಲ್ಲಿ ಮೈಗೂಡಿಕೊಂಡಿವೆ ಎಂಬುದನ್ನು ಭಾಷಿಕವಾಗಿ, ಚಿಂತಿಸಿ ಸಮಗ್ರವಾಗಿ ವಿಶ್ಲೇಷಿಸಲಾಗಿದೆ.

**ಅಡಿಟಿಪ್ಪಣಿ**

೧. ಮಲ್ಲೇಪುರಂ ಜಿ. ವೆಂಕಟೇಶ (ಸಂ), ೨೦೦೭., ಗಾದೆಯ ಮಾತು, ಸೃಷ್ಟಿ ಪಬ್ಲಿಕೇಷನ್, ಬೆಂಗಳೂರು ಪುಟ-೨-೩

## ಅಧ್ಯಾಯ : ಐದು

## ಆಧುನಿಕ ತಂತ್ರಜ್ಞಾನದಲ್ಲಿ ನಾಣ್ಣುಡಿಗಳ ಬಳಕೆ

ಆಧುನಿಕ ತಂತ್ರಜ್ಞಾನದಲ್ಲಿ ಬಳಕೆಯಾದ ನಾಣ್ಣುಡಿಗಳಿಗೂ ಹಿಂದಿನ ನಾಣ್ಣುಡಿಗಳ ಬಳಕೆಗೆ ಅಲ್ಪ ಸ್ವಲ್ಪ ವ್ಯತ್ಯಾಸವಿದೆ. ಹಿಂದಿನ ನಾಣ್ಣುಡಿಗಳು ಅರ್ಥಗರ್ಭಿತವಾಗಿ ಜನಸಾಮಾನ್ಯರ ಜೊತೆ ತನ್ನ ಸತ್ವವನ್ನೂ ಹಂಚಿಕೊಂಡು ಹುಟ್ಟಿದಂತಹ ನಾಣ್ಣುಡಿಗಳಾದರೆ ಈಗಿನ ನಾಣ್ಣುಡಿಗಳು ಹೊಸಪದಗಳ ರಚನೆಯಿಂದ ಆಧುನಿಕತೆಗೆ ಅನುಗುಣವಾಗಿ ರೂಪಿತವಾದಂತಹವು. ಹಿಂದಿನ ನಾಣ್ಣುಡಿಗಳು ಮೇಲ್ನೋಟಕ್ಕೆ ಒಂದು ಅರ್ಥವನ್ನು ಕೊಟ್ಟರೆ ಅದರ ಒಳಗಿನ ಅರ್ಥ ಅದೇ ಆಗಿರಬಹುದು ಅಥವಾ ಬೇರೆಯಾಗಿರಬಹುದು, ಜೊತೆಗೆ ಅದರ ಹಿಂದೆ ಒಂದು ಚರಿತ್ರೆಯೇ ಅಡಕವಾಗಿರುತ್ತದೆ. ಆದರೆ ಆಧುನಿಕ ತಂತ್ರಜ್ಞಾನದ ನಾಣ್ಣುಡಿಗಳು ಒಂದಕ್ಕೊಂದು ಸಂಬಂಧವೇ ಇಲ್ಲದಂತಹ ನಾಣ್ಣುಡಿಗಳು ಆಗಿವೆ. ಅದಕ್ಕೆ ಅರ್ಥವೂ ಇಲ್ಲ ಹಿನ್ನೆಲೆಯೂ ಇಲ್ಲ ಅವು ಜನ ಸಾಮಾನ್ಯರ ಬಾಯಿಯಲ್ಲಿ ಹುಟ್ಟಿ ಕೇವಲ ಒಂದು ಮನರಂಜನೀಯವಾಗಿ ಬಳಕೆಯಾಗಿವೆ. ಸಾಮಾನ್ಯ ಜನರು ಕೆಲಸವಿಲ್ಲದ ಸಮಯದಲ್ಲಿ ಯಾವುದೋ ಒಂದು ನಾಣ್ಣುಡಿ ಗೀಚಿ ಫೇಸ್‌ಬುಕ್, ವಾಟ್ಸ್‌ಆಪ್‌ಗೆ ಕಳಿಸಿದರೆ ಅದೇ ಒಂದು ಉತ್ತಮ ನಾಣ್ಣುಡಿ ಆಗಿ ಜನಸಾಮಾನ್ಯರ ಮೇಲೆ ಪ್ರಭಾವ ಬೀರಬಹುದು. ಇಂತಹ ಆಧುನಿಕತೆಗೆ ಜನತೆಯ ಜ್ಞಾನ ಸೊರಗಿ, ಸೊತ್ತು ಹೋಗಿದೆ. ಆಧುನಿಕ ಯುಗದಲ್ಲಿ ಎಲ್ಲರೂ ಬುದ್ಧಿವಂತರೇ? ಯಾವುದಾದರೂ ಒಂದು ಕೆಲಸದಲ್ಲಿ ತೊಡಗಿಕೊಳ್ಳುತ್ತಾರೆ. ಈ ಹಿನ್ನೆಲೆಯಲ್ಲಿ ತಂತ್ರಜ್ಞಾನದ ಮುಖಾಂತರ ನಾಣ್ಣುಡಿಗಳ ಬಳಕೆಯನ್ನು ಮತ್ತು ಆಧುನಿಕತೆಯ ಹಿನ್ನೆಲೆಯಲ್ಲಿ ರೂಪಗೊಂಡ ನಾಣ್ಣುಡಿಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

### ೧. ಫೇಸ್‌ಬುಕ್‌ಗೆ ಬಂದವಳು ವಾಟ್ಸಪ್‌ಗೆ ಬರಲ್ವಾ

ಈ ಮೇಲಿನ ನಾಣ್ಣುಡಿ ಪ್ರಾಚೀನ ಕಾಲದ "ಊರಿಗೆ ಬಂದವಳು ನೀರಿಗೆ ಬರಲ್ವಾ" ಎಂಬ ನಾಣ್ಣುಡಿಯ ರೂಪಾಂತರವಾಗಿದೆ. ಅಧುನಿಕತೆಯ ಹಿನ್ನೆಲೆಯಲ್ಲಿ ಈ ನಾಣ್ಣುಡಿಯನ್ನು ಗಮನಿಸಿದರೆ ಇಂದು ಬದಲಾವಣೆಯ ಯುಗದಲ್ಲಿ ಪ್ರತಿಯೊಬ್ಬರು ಮೊಬೈಲ್‌ಫೋನ್, ಲ್ಯಾಪ್‌ಟಾಪ್, ಕಂಪ್ಯೂಟರ್ ಸಾಮಾನ್ಯವಾಗಿ ಬಳಸುತ್ತಿರುತ್ತಾರೆ. ಆದರೆ ಹಿಂದಿನ ಕಾಲದಲ್ಲಿ ಯಾವುದೇ ರೀತಿಯ ಅಧುನಿಕ ಸೌಲಭ್ಯಗಳಿರಲಿಲ್ಲ. ಹಾಗಾಗಿ

ಇಂದಿನ ದಿನಮಾನಗಳಲ್ಲಿ ಸಾಮಾನ್ಯವಾಗಿ ೧೦೦ ರಲ್ಲಿ ಶೇಕಡ ೭೫%ರಷ್ಟು ಜನ ಇಂಟರ್‌ನೆಟ್ ಬಳಸುತ್ತಾರೆ. ಸಾಮಾನ್ಯವಾಗಿ ಇಂಟರ್‌ನೆಟ್ ಬಳಸುವುದರಿಂದ ಮುಂಜಾನೆ ಎದ್ದ ಕೂಡಲೇ ಅಥವಾ ಬಿಡುವು ಸಿಕ್ಕಾಗಲೆಲ್ಲ ಫೇಸ್‌ಬುಕ್ ನೋಡುವುದು ಸರ್ವೇಸಾಮಾನ್ಯವಾಗಿದೆ. ಆದ್ದರಿಂದ ಫೇಸ್‌ಬುಕ್ ನೋಡುವ ಸಂದರ್ಭದಲ್ಲಿ ವಾಟ್ಸಪ್‌ಗೆ ಹೋಗಲೇಬೇಕಾಗುತ್ತದೆ. ಇದ್ದರಿಂದಲೇ 'ಫೇಸ್‌ಬುಕ್‌ಗೆ ಬಂದವಳು ವಾಟ್ಸಪ್‌ಗೆ ಬರಲ್ವಾ' ಎಂಬ ನಾಣ್ಣುಡಿ ಹುಟ್ಟಿಕೊಂಡಿರಬಹುದು. ಇಂತಹ ನಾಣ್ಣುಡಿಗಳ ಸಂಭಾಷಣೆಯು ಕೇವಲ ಸಮಾನ ವಯಸ್ಕರಲ್ಲಿ ಹೆಚ್ಚಾಗಿ ಕಂಡುಬರುತ್ತದೆ.

**೨. ಮಿಸ್‌ಕಾಲ್‌ಗೆ ಹೋದ ಮಾನ, ಕಾಲ್ ಮಾಡಿದರೂ ಬರಲ್ಲ.**

'ಅಡಿಕೆಗೆ ಹೋದ ಮಾನ, ಆನೆ ಕೊಟ್ಟರೂ ಬಾರದು?' ಎಂಬಂತೆ ಆಧುನಿಕ ನಾಣ್ಣುಡಿಯನ್ನು ನೋಡಿದರೆ ಅಂತಹದೇ ಅರ್ಥವನ್ನು ಪಡೆಯಬಹುದು. ಅಂದರೆ ಯಾವುದಾದರೂ ಒಬ್ಬ ಜಿಪುಣ ಅಥವಾ ದುಂದುಗಾರ, ಜುಗ್ಗರು ಯಾವಾಗಲೂ ಮಿಸ್‌ಕಾಲ್ ಮಾಡುತ್ತಿರುತ್ತಾರೆ. ಅಂತವರು ಒಂದೆಡೆಯಾದರೆ ಕೆಲವರು ಅದರಲ್ಲಿ ಸಾಕಷ್ಟು ಸಾರಿ ಕರೆ ಮಾಡಿದರು ಸ್ವೀಕರಿಸದೇ ಇದ್ದ ಸಂದರ್ಭದಲ್ಲಿ ಮಿಸ್‌ಕಾಲ್ ಆಗಿರುತ್ತದೆ. ಇಂತಹ ಸಂದರ್ಭದಲ್ಲಿ ಮರಳಿ ಕರೆ ಮಾಡಿದರು ಕರೆ ಸ್ವೀಕರಿಸುವವರು ಅದನ್ನು ತುಂಬಾ ವ್ಯಂಗ್ಯವಾಗಿ ಸ್ವೀಕರಿಸುತ್ತಾರೆ. ಮತ್ತೆ ಯಾವುದೋ ತಪ್ಪು ಮಾಡಿದೇವೆನೋ ಅನುವಂಗೆ ನೋಡುತ್ತಿರುತ್ತಾರೆ. ಹೀಗಾಗಿ ಒಂದು ಬಾರಿ ಕರೆ ಮಾಡಿದಾಗ ಸ್ವೀಕರಿಸಿದ ಸಂದರ್ಭದಲ್ಲಿ ಕೆಲವು ಗ್ರಾಹಕರು ತುಂಬಾ ನಿರಾಸಕ್ತರಾಗಿ ಉತ್ತರ ಕೊಡುವಂತಹ ಸಂದರ್ಭಗಳು ಒದಗುವಾಗ ಈ ಮೇಲಿನಂತೆ 'ಮಿಸ್‌ಕಾಲ್‌ಗೆ ಹೋದ ಮಾನ, ಕಾಲ್ ಮಾಡಿದರು ಬರುವುದಿಲ್ಲ' ಎಂಬುದು ಸಮಂಜಸವೆನಿಸುತ್ತದೆ. ಒಂದು ಮೊಬೈಲ್ ಇಟ್ಟುಕೊಂಡು ಕರೆನ್ಸಿ ಹೋಗುತ್ತದೆ ಎಂದು ಎಲ್ಲರಿಗೂ ಕಾಲ್ ಮಾಡದೇ ಬರೀ ಮಿಸ್ ಕಾಲ್ ಮಾಡುತ್ತಾ ಹೋದರೆ ಯಾರಾದರೂ ಅವನನ್ನು ನೋಡಿ ಜಿಪುಣ ಅನ್ನುತ್ತಾರೆ ವಿನಾ ಬೇರೆ ಅನ್ನುವುದಿಲ್ಲ. ಆದುದರಿಂದಲೇ ಪ್ರತಿಬಾರಿಯು ಮಿಸ್ ಕಾಲ್ ಮಾಡುವವನಿಗೆ ಸಾಟಿಯಾಗಿ ಇದನ್ನು ಸೃಷ್ಟಿಸಿರಬಹುದು.

**೩. ಗೂಗಲ್ ಮ್ಯಾಪ್ ಇದ್ದರೆ ಮಾರ್ಗ**

'ಮನಸ್ಸಿದ್ದರೆ ಮಾರ್ಗ' ಎಂಬ ನಾಣ್ಣುಡಿಯಂತೆ ಇದು ರೂಪಿತವಾಗಿದೆ. 'ಗೂಗಲ್ ಮ್ಯಾಪ್ ಇದ್ದರೆ ಮಾರ್ಗ'. ಈಗಿನ ಕಾಲಕ್ಕೆ ತುಂಬಾ ಹತ್ತಿರವಾದಂತಹ ನಾಣ್ಣುಡಿ. ಈ ಆಧುನಿಕ ಪ್ರಪಂಚದಲ್ಲಿ ತಂತ್ರಜ್ಞಾನ ಎಷ್ಟು ಮುಖ್ಯವಾದದ್ದು ಎಂಬುದನ್ನು ಈ ನಾಣ್ಣುಡಿ ತಿಳಿಸುತ್ತದೆ. ಇಂಟರ್‌ನೆಟ್ ಕನೆಕ್ಷನ್ ಮೂಲಕ ಗೂಗಲ್ ಮ್ಯಾಪ್‌ನಿಂದ ಪ್ರಪಂಚದ ಯಾವುದೇ ಮೂಲೆಯ ವಿಷಯ ಬೇಕಾದರೂ ಕ್ಷಣಮಾತ್ರದಲ್ಲಿ ತಲುಪಬಹುದು ಅಥವಾ ನೋಡಬಹುದು. ಪ್ರಸ್ತುತ ದಿನಗಳಲ್ಲಿ ಈ ಗೂಗಲ್ ಮ್ಯಾಪ್ ಇಲ್ಲದಿದ್ದರೆ ಸಾರ್ವಜನಿಕ ಮತ್ತು ಖಾಸಗೀ ವಲಯಗಳು ತಮ್ಮ ದೈನಂದಿನ ಕೆಲಸಕಾರ್ಯಗಳನ್ನು ನಿರ್ವಹಿಸಲು ಸಾಧ್ಯವಿಲ್ಲ ಹಾಗಾಗಿ ಹಿಂದೆ ಮನಸ್ಸೊಂದಿದ್ದರೆ ಏನೆಲ್ಲ ಕಾರ್ಯ ನಿರ್ವಹಿಸಬಹುದಿತ್ತು ಆದರೆ ಪ್ರಸ್ತುತ ತಂತ್ರಜ್ಞಾನ ಮಾನವನ ಮನಸ್ಸನ್ನು

ಬಿಗಿ ಮುಷ್ಠಿಯಲ್ಲಿ ಹಿಡಿದು ನಿಲ್ಲಿಸಿದೆ. ಇದ್ದರಿಂದಲೇ ಜನಸಾಮಾನ್ಯರು ತಂತ್ರಜ್ಞಾನದ ಮೊರೆ ಹೋಗುತ್ತಿದ್ದಾರೆ. ಈ ಗೂಗಲ್ ಮ್ಯಾಪ್‌ನಿಂದ ನಾವು ಕೂತ ಜಾಗದಲ್ಲೆ ಇಡೀ ವಿಶ್ವವನ್ನೇ ಸುತ್ತಾಡಬಹುದು ಅಥವಾ ನೋಡಬಹುದು.

### ೪. ಹೈಟೆಕ್‌ಗೆ ಮೊಬೈಲ್ ಮೂಲವಯ್ಯ

'ದಯವೇ ಧರ್ಮದ ಮೂಲವಯ್ಯ' ಅದಕ್ಕೆ ಸರಿ ಹೊಂದುವ ಈಗಿನ ನಾಣ್ಣುಡಿಯನ್ನು ಗಮನಿಸಿದರೆ ಅದಕ್ಕೆ ಸರಿಸಮವಾಗಲಾರದು. ಆದರೂ ಸಹ ಅದಕ್ಕೆ ಹೊಂದುವಂತೆ ಜನಸಾಮಾನ್ಯರು ಬಳಕೆಮಾಡಿದ್ದಾರೆ. ಇಂದು ಆಧುನಿಕ ಯುಗದಲ್ಲಿ ಪ್ರತಿ ಮಾನವನು ಯಂತ್ರ ಮಾನವನಾಗುತ್ತಿದ್ದಾನೆ. ತನಗೆ ಬೇಕಾದುದನ್ನು ಕುಳಿತಲ್ಲೇ ಪಡೆಯಬೇಕೆನ್ನುವ ಹಂಬಲ ಮಾನವ ದಿನೇ ದಿನೇ ಮೆದುಳಿಗೆ ಕೆಲಸ ಕೊಡುತ್ತಿದ್ದಾನೆ ಹೊರತು ಕೈಕಾಲುಗಳಿಗಲ್ಲ. ಕೆಲಸವೇ ಇಲ್ಲದಂತಾಗಿ ಆದ್ದರಿಂದ ಮನುಷ್ಯ ಪ್ರತಿಮನೆಯಲ್ಲೂ ಕಂಪ್ಯೂಟರ್ ಹೈಪ್ಯಾಡ್, ಆಂಡ್ರ್ಯಡ್ ಮೊಬೈಲ್‌ಗಳು, ಮನುಷ್ಯನ ಜೀವನಕ್ಕೆ ಆಧಾರವಾಗಿರುವುದೇ ಇಂತಹ ನಾಣ್ಣುಡಿಯ ಹುಟ್ಟಿಗೆ ಕಾರಣವಾಗಿರಬಹುದು.

### ೫. ಮೊಬೈಲ್ ಇಲ್ಲದ ಮನೆಯಿಂದ ಸೊಸೆ ತಗೊಂಡು ಬಾ

ಮೊಬೈಲ್ ಎನ್ನುವುದು ಪ್ರತಿ ಮಾನವ ಬಳಸುವಂತಹ ಒಂದು ಸಾಧನ. ಮೊಬೈಲ್ ಇಲ್ಲದಿದ್ದರೆ ಜೀವನವೇ ಇಲ್ಲದಂತಹ ಪರಿಸ್ಥಿತಿ ಇಂದು ಜನಸಾಮಾನ್ಯರಲ್ಲಿ ಮನೆಮಾಡಿದೆ. ಇದರಿಂದ ಪ್ರತಿ ಮನೆಯಲ್ಲೂ ಮೊಬೈಲ್ ಇರುವುದು ಸರ್ವೇಸಾಮಾನ್ಯ. ಇದರಿಂದ ಮೊಬೈಲ್ ಇಲ್ಲದ ಮನೆಯಿಂದ ಸೊಸೆಯನ್ನು ತಾ ಎಂದರೆ ಇಂದು ಸಾಕ್ಷರತ ಪ್ರಮಾಣ ಎಷ್ಟು ಅವಶಕವೋ ಅಷ್ಟೇ ಪ್ರಮಾಣದಲ್ಲಿ ಆಧುನಿಕತೆಯ ತಂತ್ರಜ್ಞಾನದ ಜ್ಞಾನವು ಅಷ್ಟೇ ಅವಶ್ಯಕವಾಗಿರುವುದರಿಂದಾಗಿ ಅಕ್ಷರ ಜ್ಞಾನವನ್ನು ಹೊಂದಿಲ್ಲದಿದ್ದರೂ ಸಹ ತಂತ್ರಜ್ಞಾನದ ಪರಿಕರಗಳನ್ನು ಬಳಸುವ ಜ್ಞಾನ ಮುಖ್ಯವಾಗುತ್ತದೆ. ಇದರಿಂದಲೇ ಮೊಬೈಲ್ ಇಲ್ಲದ ಮನೆಯಿಂದ ಸೊಸೆ ತಗೊಂಡು ಬಾ ಎಂಬ ನಾಣ್ಣುಡಿ ಹುಟ್ಟಿರಬಹುದು. ಏಕೆಂದರೆ ಇಂದು ಪ್ರತಿಮನೆಯಲ್ಲೂ ಮೊಬೈಲ್ ಇರುವುದೇ ಇದಕ್ಕೆ ಕಾರಣವಾಗಿರಬಹುದು. ಇದು 'ಸಾವಿಲ್ಲದ ಮನೆಯಿಂದ ಸಾಸಿವೆ ತಗೊಂಡು ಬಾ' ಎಂಬ ನಾಣ್ಣುಡಿಯ ಮಾದರಿಯಾಗಿದೆ. ತಂತ್ರಜ್ಞಾನದಲ್ಲಿ ನಾವು ಎಷ್ಟು ಮುಂದುವರೆದಿದ್ದೇವೆ ಎಂದರೆ ಒಂದು ತುತ್ತು ಅನ್ನ ಸಿಗದವನ ಕೈಯಲ್ಲಿ ಸಹ ಮೊಬೈಲ್ ಇರುವುದನ್ನು ಗಮನಿಸಬಹುದು. ಅತಿ ಕೆಳವರ್ಗದಿಂದ ಹಿಡಿದು ಮೇಲ್ವರ್ಗದ ಕುಟುಂಬಗಳಲ್ಲಿ ಮೊಬೈಲ್ ಇರುವುದನ್ನು ನೋಡಬಹುದು. ಹಾಗಾಗಿ ಇಂದು ಮೊಬೈಲ್ ಇಲ್ಲದ ಮನೆಯನ್ನು ನೋಡುವುದು ಅಪರೂಪವಾಗಿದೆ.

### ೬. ಪೇಪರ್ ಚಿಕ್ಕದಾದರೂ ಉತ್ತರ ದೊಡ್ಡದು

ಆಧುನಿಕ ತಂತ್ರಜ್ಞಾನದಿಂದಾಗಿ ವಿದ್ಯಾರ್ಥಿಗಳು ಎಷ್ಟು ಆಲಸ್ಯತನದಿಂದ ಇರುತ್ತಾರೆಂದರೆ ಏನನ್ನು (ಕೆಲವರು) ಓದದೆ ಇದ್ದರೂ ಪರೀಕ್ಷೆ ಸಮಯದಲ್ಲಿ ಬುಕ್ಲೆಟ್ ತುಂಬುವಷ್ಟು ವಿಷಯವನ್ನು ಬರೆದಿರುತ್ತಾರೆ. ಸೋಶಿಯಾಲಾಜಿ ಬುಲ್ಶಾಲಾಜಿ ಎನ್ನುವಾಗೆ

ತನ್ನಲ್ಲಿ ಇರುವ ಇಲ್ಲದಿರುವ ವಿಷಯಗಳನ್ನು ಬರೆದಿರುತ್ತಾರೆ. ತನಗೆ ಗೊತ್ತಿರುವ ಪ್ರಶ್ನೆಗೆ ಉತ್ತರ ಚಿಕ್ಕದಿದ್ದರೂ ಅದನ್ನು ರಬ್ಬರಿನಂತೆ ಎಳೆದು ಎಳೆದು ಬರೆಯುವುದರಲ್ಲಿ ಚಾಣಾಕ್ಷತನವನ್ನು ಮೆರೆದಿರುತ್ತಾರೆ. ಈಗಿನ ಕಾಲದ ಭಾಷೆಯ ಬದಲಾವಣೆಯನ್ನು ನೋಡಿ ಪೇಪರ್ ಚಿಕ್ಕದಾದರೂ ಉತ್ತರ ದೊಡ್ಡದು ಅಲ್ಲದೆ ಮೊಬೈಲ್ ಚಿಕ್ಕದಾದರೂ ಸಹಾಯ ದೊಡ್ಡದು ಎಂದಿದ್ದರೆ ಚೆನ್ನಾಗಿರುತ್ತಿತ್ತು. ಅಂದರೆ ಮೊಬೈಲ್ ನೋಡಲು ಚಿಕ್ಕದಾದರು ಅದರಿಂದಾಗುವ ಉಪಯೋಗ ಮಾತ್ರ ದೊಡ್ಡದು ಆದರಿಂದಲೇ ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದೆನಿಸಿರಬಹುದು.

### ೭. ವೈರಸ್ ಅಟ್ಯಾಕ್ ಆದ ಮೇಲೆ ಆಂಟಿ ವೈರಸ್ ಹಾಕಿಸಿದಂತೆ

'ಊರೆಲ್ಲಾ ದೋಚಿಕೊಂಡು ಹೋದ ಮೇಲೆ ಕೋಟೆ ಬಾಗಿಲು ಹಾಕಿದಂತೆ' ಇದರಂತೆ 'ವೈರಸ್ ಅಟ್ಯಾಕ್ ಆದ ಮೇಲೆ ಆಂಟಿ ವೈರಸ್ ಹಾಕಿಸಿದರೆ ಏನು ಪ್ರಯೋಜನ' ಎಂಬ ನಾಣ್ಣುಡಿ ಹುಟ್ಟಿಕೊಂಡಿದೆ. ಈಗಿನ ಯುಗದಲ್ಲಿ ಎಲ್ಲರೂ ಸರ್ವೆಸಾಮಾನ್ಯವಾಗಿ ಕಂಪ್ಯೂಟರ್, ಲ್ಯಾಪ್‌ಟಾಪ್, ಮೊಬೈಲ್ ಬಳಸುತ್ತಾರೆ ಎನ್ನುವ ಅರ್ಥದಲ್ಲಿ ರೂಪಾಂತರವಾಗಿದೆ. ಕಂಪ್ಯೂಟರ್‌ರನ್ನು ಹೆಚ್ಚಾಗಿ ಬಳಸುವುದರಿಂದ ವೈರಸ್ ತಗುಲುವುದು ಸಾಮಾನ್ಯ ಆದ್ದರಿಂದ ಮುನ್ನೆಚ್ಚರಿಕೆಯಾಗಿ ಆಂಟಿ ವೈರಸ್ ಹಾಕಿಸಬೇಕು. ಆಂಟಿ ವೈರಸ್ ಹಾಕಿಸದೇ ಕಂಪ್ಯೂಟರ್ ಬಳಸುತ್ತಾ ಹೋದರೆ ಕಂಪ್ಯೂಟರ್ ಕೆಟ್ಟುಹೋಗುತ್ತದೆ. ಅಂದರೆ ಕೆಟ್ಟು ಹೋದ ಮೇಲೆ ಆಂಟಿ ವೈರಸ್ ಹಾಕಿಸಿದರೇನು ಪ್ರಯೋಜನ? ಇದರಿಂದಲೇ ಈ ನಾಣ್ಣುಡಿ ಬಳಕೆಗೆ ಬಂದಿರಬಹುದು. ಆದ್ದರಿಂದಾಗಿ ಊರಿನಲ್ಲಿ ಎಲ್ಲವನ್ನು ಕದ್ದು ಹೋದ ಮೇಲೆ ಕೋಟೆ ಬಾಗಿಲು ಹಾಕಿಸಿದರೆ ಏನು ಪ್ರಯೋಜನವಾಗುತ್ತದೆಯೋ ಹಾಗೆಯೇ ಕಂಪ್ಯೂಟರ್, ಮೊಬೈಲ್ ಇತರೆ ತಾಂತ್ರಿಕ ವಸ್ತುಗಳು ಆಧುನಿಕ ತಂತ್ರಜ್ಞಾನಕ್ಕೆ ಎಷ್ಟು ಮುಖ್ಯವೋ ಅಷ್ಟೇ ಅಪಾಯಕಾರಿಯಾಗಿರುತ್ತವೆ. ಕಾರಣ ಹಿಂದೆ ನಾವು ಬರೆದ ದಾಖಲೆಗಳನ್ನು ಸಂಗ್ರಹಿಸಿ, ಸಂರಕ್ಷಿಸುತ್ತಿದ್ದ ಉಪಯೋಗಗಳಿದ್ದು, ಈಗ-ತಂತ್ರಜ್ಞಾನದ ಫಲದಿಂದ ಅಂತಹ ಬರೆದ ದಾಖಲೆಗಳನ್ನು ಅದರಲ್ಲಿ ಅಡಗಿಸಲು ಸಾಧ್ಯವಾಗಿದ್ದು, ಆ ಕಂಪ್ಯೂಟರ್‌ನ್ನು ಮುಂಜಾಗ್ರತಾ ಕ್ರಮಗಳ ಮೂಲಕ ಸಂರಕ್ಷಿಸಬೇಕಾಗುತ್ತದೆ. ಹಾಗಾಗದಿದ್ದಲ್ಲಿ ಕಂಪ್ಯೂಟರ್‌ಗೆ ವೈರಸ್ ಅಟ್ಯಾಕ್ ಆಗಿ ಅದರಲ್ಲಿರುವ ಫೈಲ್‌ಗಳನ್ನು ನಾಶಮಾಡಿ ಬಿಡುತ್ತದೆ. ಆಗ ಆಂಟಿ ವೈರಸ್ ಹಾಕಿಸಿದರೂ ಪ್ರಯೋಜನವಿಲ್ಲ. ಆದರಿಂದಲ್ಲೇ ವೈರಸ್ ಅಟ್ಯಾಕ್ ಆದ ಮೇಲೆ ಆಂಟಿ ವೈರಸ್ ಹಾಕಿಸಿದರೇನು? ಎಂಬ ಅಪಹಾಸ್ಯಕ್ಕೆ ಒಳಗಾಗಿರುವಂತಹ ನಾಣ್ಣುಡಿಯಾಗಿದೆ.

### ೮. ಕೂದಲು ಇದ್ದರೆ ಮಾತ್ರ ತಲೆ ಬಾಚು

'ಕೂದಲು ಇದ್ದರೆ ತಲೆ ಬಾಚು' ಎನ್ನುವ ಈಗಿನ ನಾಣ್ಣುಡಿಯು ಅಷ್ಟು ಸಮಂಜಸವಲ್ಲದಿದ್ದರೂ ಸಹ ಈಗಿನ ಕಾಲದಲ್ಲಿ ಕೂದಲು ಇಲ್ಲದಿದ್ದರೂ ಶೋಕಿ ಮಾಡುವುದು ಜಾಸ್ತಿ ಅಂದರೆ ಕೂದಲು ಬದಲು ಟೋಪನ್ (ವಿಗ್) ಹಾಕಿಕೊಂಡು ಪದೇ ಪದೇ ತಲೆ ಬಾಚುತ್ತಾ ಹೋದರೆ ಅದು ಕಿತ್ತು ಹೋಗುತ್ತವೆ ಅಥವಾ

ಹಾಳಾಗುತ್ತವೆ. ಇದು ಕೂದಲು ಇಲ್ಲದವರನ್ನು ಕುರಿತು ಅಪಹಾಸ್ಯ ಮಾಡುವ ನಾಣ್ಣುಡಿಯಾಗಿದೆ. ಈ ನಾಣ್ಣುಡಿಯು 'ಹಾಸಿಗೆ ಇದ್ದಷ್ಟು ಕಾಲು ಚಾಚು' ಎಂಬುದರ ರೂಪಾಂತರವಾಗಿದೆ.

**೯. ಹುಡುಗರ ಮನಸು ಚೆನ್ನ ಹುಡುಗಿಯರ ಮಾತು ಚೆನ್ನ**

ಇದು ಸಮಂಜಸವಾದುದಲ್ಲ ಯಾರು ಎಂತಹ ಮನಸ್ಸು ಉಳ್ಳವರಾಗಿದ್ದರೆಂದು ಊಹಿಸುವುದು ಕಷ್ಟ. ಹುಡುಗಿ ತನ್ನ ಮೋಹಕ ಮಾತುಗಳಿಂದ ಹುಡುಗನ ಮನಸನ್ನು ಗೆಲ್ಲುತ್ತಾಳೆ. ಅವಳು ಆಡುವ ಮಾತುಗಳಿಂದ ಹುಡುಗ ತನ್ನ ಸರ್ವಸ್ವವನ್ನು ಕೊಡಲು ಸಿದ್ಧನಿರುತ್ತಾನೆ. ಆದ್ದರಿಂದಲೇ ತಿಳಿದವರು ಹುಡುಗಿಯರ ಬಣ್ಣದ ಮಾತುಗಳಿಗೆ ಮರುಳಾಗಬೇಡಿ ಎಂದು ಹೇಳಿರಬಹುದು. ಇದರಿಂದ ಇಂತಹ ನಾಣ್ಣುಡಿ ಯುವಕರಲ್ಲಿ ಹುಟ್ಟಿರಬಹುದು. ಇದನ್ನು 'ಬಡವರ ಮನೆ ಊಟ ಚೆನ್ನ, ದೊಡ್ಡವರ ಮನೆ ನೋಟ ಚೆನ್ನ' ಎಂಬ ನಾಣ್ಣುಡಿಯಂತೆ ಬಳಕೆ ಮಾಡಿದ್ದಾರೆ.

**೧೦. ಮದ್ವೆ ಮನೆಗೆ ಯಡಿಯೂರಪ್ಪನ ಕರಿಬಾರ್ದು**

**ಸತ್ತೋರ ಮನೆಗೆ ಸದಾನಂದಗೌಡನ ಕರಿಬಾರ್ದು**

ಈ ಮೇಲಿನ ನಾಣ್ಣುಡಿ ರಾಜಕೀಯ ವ್ಯಕ್ತಿಗಳಿಗೆ ಸಂಬಂಧಿಸಿದಂತಹ ನಾಣ್ಣುಡಿಯಾಗಿದೆ. ಯಡಿಯೂರಪ್ಪ ಮದುವೆ ಮನೆಗೆ ಹೋದಾಗ ಗಂಟುಮುಖ ಕಟ್ಟಿಕೊಂಡಿರುತ್ತಾರೆ. ಅದೇ ರೀತಿ ಸದಾನಂದಗೌಡರು ಸತ್ತೋರ ಮನೆಗೆ ಹೋದಾಗ ಅವರ ಮುಖ ನಗುಮುಖದಿಂದ ಕೂಡಿರುತ್ತದೆ. ಏಕೆಂದರೆ ಅವರು ಯಾವಾಗಲೂ ಇತರರೊಂದಿಗೆ ನಗುಮುಖದಲ್ಲಿ ಸಂಭಾಷಣೆಯಲ್ಲಿ ತೊಡಗಿರುವುದೇ ನೋಡುವ ಜನಸಾಮಾಸ್ಯರಿಗೆ ಅವರು ಭಾವುದ್ವೇಗಕ್ಕೆ ಒಳಗಾಗದವರಂತೆ ಕಂಡು ಬರುವುದರಿಂದಲ್ಲೇ ಇಂತಹ ನಾಣ್ಣುಡಿ ಉದ್ಭವಿಸಿರಬಹುದು. ಇದರಿಂದಲೇ 'ಮದ್ವೆ ಮನೆಗೆ ಯಡಿಯೂರಪ್ಪನ ಕಾರಿಬಾರ್ದು, ಸದಾನಂದ ಗೌಡನ ಸತ್ತೋರ ಮನೆಯ ಕಾರಿಬಾರ್ದು' ಎಂಬ ನಾಣ್ಣುಡಿ ಹುಟ್ಟಿರಬಹುದು.

**೧೧. ಮಾತನಾಡದೇ ಮೌನವಾಗಿದ್ದರೆ ಮೂಕನಂತೆ**

**ಮಾತು ಮೀರಿದರೆ ಮೂರ್ಖನಂತೆ**

ಈ ಮೇಲಿನ ನಾಣ್ಣುಡಿಯನ್ನು ಗಮನಿಸಿದಾಗ ಮಾತು ಆಡುವರ ಮತ್ತು ಮಾತು ಆಡದೇ ಇರುವುದರ ಪರ ಆಡುವ ಒಂದು ನಾಣ್ಣುಡಿ ಯಾವುದೋ ಒಂದು ತಪ್ಪು ಮಾಡಿ ಸಿಕ್ಕಿ ಬಿದ್ದವನನ್ನೂ ಕೇಳಿದರೆ ಆ ವ್ಯಕ್ತಿ ಯಾವುದೇ ರೀತಿಯ ಪ್ರತಿಕ್ರಿಯೆ ತೋರದೇ ಮೌನವಾಗಿರುತ್ತಾನೆ. ಆಗ ಅವನನ್ನು ಮೂಕನೆಂದು ಹೆಸರು ಇಟ್ಟಿರುತ್ತಾರೆ. ಇನ್ನೊಂದು ರೀತಿಯಲ್ಲಿ ಯಾವುದೋ ಒಂದು ಕೆಲಸವನ್ನು ಮಾಡುವಾಗ ನೋಡಿದಂತಹ ವ್ಯಕ್ತಿ ಮಾತಾಡಿಸಿದರು ಮಾತನಾಡುವುದಿಲ್ಲ ಅಥವಾ ಮಾತು ಬರದೇ

ಇರಬಹುದು ಅಥವಾ ಇನ್ಯಾವುದರ ಬಗ್ಗೆ ಭಯವಿರಬಹುದು. ಇದರಿಂದಲ್ಲೇ ಆತ ಮೌನವಾಗಿದ್ದರೆ ಅವನನ್ನು ಮೂಕನೆಂದು ಹೇಳುತ್ತಾರೆ. ಉದಾಹರಣೆಗೆ: ಒಮ್ಮೆ ಯಾವುದೋ ಒಂದು ವಿಷಯಕ್ಕೆ ಸಂಬಂಧಿಸಿದಂತೆ ತಂದೆ ಮಗನಿಗೂ ವಿರೋಧ ಉಂಟಾಗುತ್ತದೆ. ಆಗ ತಂದೆಯ ಮಾತನ್ನು ಮಗ ಮೀರಿ ಸಾಲ ಮಾಡುತ್ತಾನೆ. ತಂದೆ ಎಷ್ಟು ಬೇಡ ಬೇಡ ಎಂದು ಹೇಳಿದರೂ ಕೇಳದೇ ತನ್ನ ಹಟ ಸಾಧಿಸಲು ತನ್ನ ಆಸ್ತಿಯನ್ನೆಲ್ಲಾ ಕಂಪನಿಗೆ ಮಾರಿಬಿಡುತ್ತಾನೆ. ಆದರೆ ಆ ಕಂಪನಿಯ ಮಾಲೀಕ ಜಮೀನನ್ನು ತನ್ನ ಹೆಸರಿಗೆ ಮಾಡಿಸಿಕೊಂಡು ಹಣಕೊಡದೆ ಸತಾಯಿಸಿ ಕೊನೆಗೆ ಬೇರೆಯವರಿಗೆ ಮಾರಿ ಪರಾರಿಯಾಗುತ್ತಾನೆ. ಆಗ ತಂದೆಯ ಮಾತನ್ನು ಮಗ ಮೀರಿ ಮೂರ್ಖನಾಗುತ್ತಾನೆ. ಆದ್ದರಿಂದಲೇ ಹಿರಿಯರು ಹೇಳಿದ ಮಾತುಗಳು ಸ್ವಲ್ಪವಾದರೂ ಕೇಳಬೇಕು ಎನ್ನುವುದು.

### ೧೨. ಬ್ಯಾಗ್ಸ್ ಗುಟ್ಟು ಇಸುಸ್ ರಟ್ಟು

'ಸಂಸಾರದ ಗುಟ್ಟು ವ್ಯಾದಿ ರಟ್ಟು' ಎಂಬ ನಾಣ್ಣುಡಿಯಂತೆ ರೂಪಗೊಂಡಿದೆ. ಒಬ್ಬ ಗಂಡ ಹೆಂಡತಿ ಜೀವನದಲ್ಲಿ ಅನೇಕ ಏಳು ಬೀಳುಗಳನ್ನು ಕಂಡು ಸುಖವಾಗಿ ಜೀವನ ನಡೆಸುವ ಆದರ್ಶ ದಂಪತಿಗಳಿಗೆ ಒಮ್ಮೆ ಯಾವುದೋ ಒಂದು ವಿಷಯಕ್ಕೆ ಇಬ್ಬರ ನಡುವೆ ಜಗಳವಾಗುತ್ತದೆ. ಅವರಲ್ಲಿರುವ ಒಂದು ಗುಟ್ಟಾದ ವಿಷಯವೊಂದು ಜಗಳದಲ್ಲಿ ಬಯಲಿಗೆ ಬೀಳುತ್ತದೆ. ಅದುವರೆಗೂ ಇದ್ದ ಇಬ್ಬರ ನಡುವಿನ ಪ್ರೀತಿ, ವಿಶ್ವಾಸ ಕುಗುತ್ತದೆ. ಸಂಸಾರದಲ್ಲಿ ಒಡಕು ಉಂಟಾಗುತ್ತದೆ. ಇದರಿಂದ ಗಂಡ ಹೆಂಡಿರಲ್ಲಿ ಯಾವುದೇ ಜಗಳವಿದ್ದರು ತಮ್ಮ ತಮ್ಮಲ್ಲಿಯೇ ಇಟ್ಟುಕೊಳ್ಳಬೇಕು ಅದನ್ನು ಬೇರೆಡೆಗೆ ಬಿಟ್ಟುಕೊಡಬಾರದು. ಅದರಂತೆಯ 'ಬ್ಯಾಗ್ಸ್ ಗುಟ್ಟು ಇಸುಸ್ ರಟ್ಟು' ಅಂದರೆ ಬ್ಯಾಗ್ಸ್ ಉತ್ತಮವಾಗಿ ಬಾಳಿಕೆ ಬರಬೇಕಾದರೆ ಅದರ ಇಸುಸ್ ಬಿಗಿಯಾಗಿದ್ದರೆ ಅದು ಬಹಳ ದಿನ ಬಾಳಿಕೆ ಬರಲು ಸಾಧ್ಯ.

### ೧೩. ಕೈ ಕೆಸರಾದರೆ ಕೈ ತೊಳೆದುಕೊಳ್ಳಿ

'ಕೈ ಕೆಸರಾದರೆ ಬಾಯಿ ಮೊಸರು' ಎಂಬ ಹಿಂದಿನ ನಾಣ್ಣುಡಿಗೂ ಪ್ರಸ್ತುತ ನಾಣ್ಣುಡಿಗೂ ಹೋಲಿಕೆ ಮಾಡಲು ಸಾಧ್ಯವಿಲ್ಲ. ಹಿಂದೆ ಮೈಮುರಿದು ಶ್ರಮವಹಿಸಿ ದುಡಿದರೆ ಸುಖವಾಗಿ ಉಣ್ಣಬಹುದು ಎಂಬಂತಹ ಅರ್ಥವನ್ನು ಕೊಡುತ್ತದೆ. ಆದರೆ ಇಂದು ಕಾಲ ಬದಲಾಗಿದೆ ಆದ್ದರಿಂದಲೇ 'ಕೈಕೆಸರಾದರೆ ಕೈ ತೊಳೆದುಕೊಳ್ಳಿ' ಎಂದು ಅಪಹಾಸ್ಯಕಾರವಾಗಿ ಟೀಕಿಸಿದಂತಹ ನಾಣ್ಣುಡಿಯಾಗಿದೆ. ಇಂದು ಮಾನವ ಆಧುನಿಕನಾಗುತ್ತಾ ಯಂತ್ರ ಮಾನವನಾಗುತ್ತಿದ್ದಾನೆ. ಪ್ರತಿಯೊಂದು ಕೆಲಸವನ್ನು ಯಂತ್ರದಿಂದಲೇ ಮಾಡುತ್ತಿದ್ದಾನೆ. ಆದ್ದರಿಂದಲೇ ಕೈಯಿಂದ ಕೆಲಸ ಮಾಡುವ ದಿನಗಳು ದೂರವಾಗುತ್ತಾ ಇವೆ. ಅದ್ದರಿಂದಲೇ 'ಕೈಕೆಸರಾದರೆ ಕೈ ತೊಳೆದುಕೊಳ್ಳಿ' ಎಂಬ ನಾಣ್ಣುಡಿ ರೂಢಿಗೆ ಬಂದಿರಬಹುದು.

136995

### ೧೪. ಉಂಡು ಮಾವಿನ ಹಣ್ಣು ತಿನ್ನು

'ಹಸಿದು ಹಲಸಿನ ಹಣ್ಣು ತಿನ್ನು' ಎಂಬ ನಾಣ್ನುಡಿಯಂತೆ ತೋರುತ್ತಿದೆ. ಹಸಿವಿದ್ದಾಗ ಹಲಸಿನ ಹಣ್ಣು ತಿಂದರೆ ಯಾವುದೇ ರೀತಿಯ ತೊಂದರೆಯಾಗುವುದಿಲ್ಲ ತುಸು ಹೆಚ್ಚೇ ತಿಂದರು ಪರವಾಗಿಲ್ಲ. ಈ ಮಾತು ಸಹಜವಾದುದೇ ಸರಿ ಉಂಡು ಮಾವಿನ ಹಣ್ಣು ತಿನ್ನು ನಾವು ಊಟ ಮಾಡಿದ ಮೇಲೆ ಮಾವಿನ ಹಣ್ಣು ತಿನ್ನುವುದು ಉಚಿತ ಅಂದರೆ ಮಾವಿನಹಣ್ಣು ತಿನ್ನಲು ಅತ್ಯಂತ ರುಚಿಯಾಗಿದ್ದರೂ ಸಹ ಅತಿಹೆಚ್ಚು ತಿಂದರೆ ಮಾವಿನಹಣ್ಣು ಆರೋಗ್ಯಕ್ಕೆ ಒಳ್ಳೆಯದಲ್ಲ ಆದ್ದರಿಂದಲೇ ಊಟ ಮಾಡಿದ ಮೇಲೆ ಮಾವಿನ ಹಣ್ಣು ತಿಂದರೆ ಕಡಿಮೆ ತಿನ್ನುವುದರಿಂದ ಆರೋಗ್ಯಕ್ಕೆ ಒಳ್ಳೆಯದು ಮನಸ್ಸಿಗೂ ಒಳ್ಳೆಯದು ಎಂಬರ್ಥದಲ್ಲಿ ಬಳಕೆಯಾಗಿರಬಹುದು.

### ೧೫. ಎ.ಟಿ.ಎಂ ಮಿಶನ್‌ಗೆ ಕಾರ್ಡ್ ಹಾಕಿದರೆ ಹಣ ಬರುತ್ತೆ

### ಗೌರ್ನಮೆಂಟ್ ಹಾಸ್ಪಿಟಲ್ ವಾರ್ಡ್‌ಗೆ ಸೇರಿಸಿದ್ರೆ ಹೆಣ ಬರುತ್ತೆ

ಈ ನಾಣ್ನುಡಿ ಇತ್ತೀಚಿನ ದಿನಮಾನಗಳಲ್ಲಿ ನಡೆಯುವ ವಿಷಯದ ಮೇಲೆ ಅವಲಂಬಿತವಾಗಿದೆ. ಎಟಿಎಂ ಮಿಶನ್‌ಗೆ ಕಾರ್ಡ್ ಹಾಕಿದರೆ ಹಣ ಬರುತ್ತೆ ನಿಜ. ಪ್ರಸ್ತುತ ದಿನಮಾನಗಳಲ್ಲಿ ತಂತ್ರಜ್ಞಾನದ ಫಲದಿಂದಾಗಿ ತ್ವರಿತ ವೇಗದಲ್ಲಿ ಜನಸಾಮಾನ್ಯರು ಹಣವನ್ನು ಪಡೆಯಲು ಬ್ಯಾಂಕ್‌ಗಳು ಎಟಿಎಂ ಕೇಂದ್ರಗಳನ್ನು ತೆರೆದಿದ್ದು ಜನಸಾಮಾನ್ಯರಿಗೆ ಉಪಯೋಗವಾಗುತ್ತವೆ. ಅದೇ ರೀತಿ ಸರ್ಕಾರ ಇಂದು ಖಾಸಗಿ ಆಸ್ಪತ್ರೆಗಳಿಗಿಂತಲೂ ಹೆಚ್ಚು ಖರ್ಚುಮಾಡಿ ಸರ್ಕಾರಿ ಆಸ್ಪತ್ರೆಗಳಿಗೆ ಆಧುನಿಕ ಸೌಲಭ್ಯಗಳನ್ನು ಒದಗಿಸಿದರೂ ಸಹ ಅಲ್ಲಿನ ಅಧಿಕಾರಿವರ್ಗ ಸಾರ್ವಜನಿಕರ ಜೊತೆ ಬೇಜವಾಬ್ದಾರಿ ತನದಿಂದ ನಡೆದುಕೊಳ್ಳುವುದರಿಂದ ಗೌರ್ನಮೆಂಟ್ ಆಸ್ಪತ್ರೆಗೆ ಹೋಗುವುದಕ್ಕೂ ಮುಜುಗರಪಡುತ್ತಾರೆ. ಅದ್ದರಿಂದಲೇ 'ಗೌರ್ನಮೆಂಟ್ ಹಾಸ್ಪಿಟಲ್ ವಾರ್ಡ್‌ಗೆ ಸೇರಿಸಿದ್ರೆ ಹೆಣ ಬರುತ್ತೆ' ಎಂಬ ನಾಣ್ನುಡಿ ಹುಟ್ಟಿಕೊಂಡಿದೆ.

### ೧೬. ಟೈಮ್ ಮುಗಿದ ಮೇಲೆ ಮ್ಯಾನೇಜರ್ ಬಂದ ಹಾಗೆ

'ಶಿವ ಪೂಜೆ ಮಧ್ಯೆ ಕರಡಿ ಬಿಟ್ಟ ಹಾಗೆ' ಸಂವಾದಿಯಾಗಿ ಹುಟ್ಟಿರುವ ಈಗಿನ ನಾಣ್ನುಡಿಯನ್ನು ಗಮನಿಸಿದಾಗ ಬ್ಯಾಂಕ್ ಅಥವಾ ಇನ್ಯಾವುದೇ ಕಛೇರಿಯಲ್ಲಿ ಮ್ಯಾನೇಜರ್ ಹುದ್ದೆಯು ಮಹತ್ವವಾದ ಪಾತ್ರವಾಗಿದೆ. ಪ್ರತಿಯೊಂದು ಕೆಲಸದ ಮಾರ್ಗದರ್ಶನಕ್ಕೂ ಮ್ಯಾನೇಜರ್ ಇದ್ದೇ ಇರುತ್ತದೆ. ಆದರೆ ಸಮಯ ಮೀರಿದ ಮೇಲೆ ಮ್ಯಾನೇಜರ್ ಬಂದರೆ ಕಛೇರಿಯ ಕೆಲಸಗಳು ಹೇಗೆ ತಾನೇ ಸರಾಗವಾಗಿ ನಡೆಯಲು ಸಾಧ್ಯ ಹೇಳಿ. ಒಂದು ರಥವನ್ನು ನಡೆಸಬೇಕಾದರೆ ಸಾರಥಿ ಎಷ್ಟು ಮುಖ್ಯವೋ ಒಂದು ಕಛೇರಿ ನಡೆಯುವಾಗ ಮ್ಯಾನೇಜರ್ ಅಷ್ಟೇ ಮುಖ್ಯವಾದ ಪಾತ್ರ ವಹಿಸುತ್ತಾನೆ. ಆದರೆ ಅವನೇ ಇಲ್ಲವಾದಾಗ ಕಛೇರಿ ನಡೆಯುವುದಾದರೂ ಹೇಗೆ. ಆದ್ದರಿಂದಲೇ ಶಿವಪೂಜೆ ಮಧ್ಯೆ ಕರಡಿ ಬಿಟ್ಟ ಹಾಗೆ ನಾಣ್ನುಡಿಯಂತೆ ಇದು ಉತ್ತಮವಾದ ನಾಣ್ನುಡಿಯಾಗಿದೆ.

ಪ್ರೈವೆಟ್ ಅಥವಾ ಇನ್ನಿತರೆ ಸೆಕ್ಟರ್‌ಗಳಲ್ಲಿ ಮ್ಯಾನೇಜರ್ ಆಗಿ ಅಧಿಕಾರ ನಿರ್ವಹಿಸುವ ಅಲ್ಲಿನ ವರ್ಕರ್ಸ್ ಬೆಳಗಿನಿಂದ ಸಾಯಂಕಾಲದವರೆಗೆ ಕೆಲಸ ಮಾಡುತ್ತಿದ್ದು ಅವನು ಮಾತ್ರ ಸರಿಯಾದ ಸಮಯಕ್ಕೆ ಬಾರದೆ ಸರಿಯಾದ ಸಂಬಳವನ್ನು ಪಡೆಯುತ್ತಿರುತ್ತಾನೆ. ಯಾವುದೇ ಒಂದು ಶುಭಕಾರ್ಯ ನಡೆಯುವಾಗ ಅಶುಭ ಒದಗಿದಂತೆ ಈ ನಾಣ್ಣುಡಿ ಕಂಡುಬರುತ್ತದೆ.

### ೧೭. ಇಂಟರ್‌ನೆಟ್ ಇಲ್ಲದವನಿಗೆ ಕೂತಲ್ಲೆ ನಿದ್ದೆ

'ಇಂಟರ್‌ನೆಟ್ ಇಲ್ಲದವನಿಗೆ ಕೂತಲ್ಲೇ ನಿದ್ದೆ' ಈ ನಾಣ್ಣುಡಿಯನ್ನು ಗಮನಿಸಿದಾಗ ಸಮಾಜದಲ್ಲಿ ಎಲ್ಲರ ಕೈಯಲ್ಲೂ ಮೊಬೈಲ್ ಇರುವುದು ಸರ್ವೇಸಾಮಾನ್ಯ. ಮೊಬೈಲ್ ಇದ್ದರೆ ಅದಕ್ಕೆ ಇಂಟರ್‌ನೆಟ್ ಇದ್ದರಂತೂ ಯಾವುದಾದರೂ ಒಂದು ವಿಳಾಸವನ್ನು ಹುಡುಕುತ್ತಲೇ ಇರುತ್ತಾರೆ. ಅಥವಾ ಯಾವುದಾದರೂ ಒಂದು ಕೆಲಸ ಕಾರ್ಯದಲ್ಲಿ ತೊಡಗಿರುತ್ತಾರೆ. ಅಂತಹ ಸಮಯದಲ್ಲಿ ನಿದ್ದೆ ಹೇಗೆ ತಾನೇ ಬರುತ್ತದೆ. ಆದರೆ ಇಂಟರ್‌ನೆಟ್ ಇಲ್ಲದಿದ್ದರೆ ನಿದ್ದೆ ಬರುತ್ತದೆನ್ನುವ ಭ್ರಮೆ ಆಧುನಿಕ ಜನಸಾಮಾನ್ಯರಲ್ಲಿ ಇರಬಹುದು. ಇಂತಹ ತಪ್ಪು ಕಲ್ಪನೆಯಿಂದಲ್ಲೇ ಈ ನಾಣ್ಣುಡಿ ಬಳಕೆಗೆ ಬಂದಿರಬಹುದು. ಆದರೆ ಪ್ರತಿಯೊಬ್ಬರೂ ಇಂಟರ್‌ನೆಟ್ ಬಳಸಬೇಕೆನ್ನುವ ತವಕವೇನೋ ತಿಳಿಯದು. ಜನರಿಗೆ ತಂತ್ರಜ್ಞಾನದ ಹುಚ್ಚು ಎಷ್ಟಿದೆಯೆಂದರೆ ಕೆಲವರು ಬೆಳಿಗ್ಗೆ ಎದ್ದಕೂಡಲೆ ಮೊಬೈಲ್‌ನಲ್ಲಿ ಫೇಸ್‌ಬುಕ್, ವ್ಯಾಟ್ಸ್‌ಆಫ್ ನೋಡದಿದರೆ ಅವರಿಗೆ ದಿನ ಬೆಳಗಾಗುವುದಿಲ್ಲವೆನೋ ಅದರಲ್ಲೂ ಅವನ ಮೊಬೈಲ್‌ನಲ್ಲೂ ಇಂಟರ್‌ನೆಟ್ ಇಲ್ಲದಿದ್ದರೆ 'ಕೂತಲ್ಲೇ ನಿದ್ದೆ' ಎಂಬಂತಹ ಪರಿಸ್ಥಿತಿ ಜನಸಾಮಾನ್ಯರಲ್ಲಿ ಉಂಟಾಗಿದೆ. ೨೪*೭ ನ್ಯೂಸ್ ಇರುವಂತೆ ೨೪*೭ ಇಂಟರ್‌ನೆಟ್ ಚಾಲ್ತಿಯಲ್ಲಿರಬೇಕು. ಆಧುನಿಕ ಜನಸಾಮಾನ್ಯರಿಗೆ ಈ ನಾಣ್ಣುಡಿ ಅನ್ವಯಿಸುವಂತೆ ತೋರುತ್ತದೆ. ಇದು 'ಚಿಂತೆ ಇಲ್ಲದವನಿಗೆ ಸಂತೆಯಲ್ಲಿ ನಿದ್ದೆ' ಎಂಬ ಪ್ರಾಚೀನ ನಾಣ್ಣುಡಿಯಂತೆ ತೋರುತ್ತದೆ.

### ೧೮. ಕೂತು ಬ್ರೌಸ್ ಮಾಡುವವನಿಗೆ ಜಿಯೋಸಿಮ್ ಕೂಡ ಸಾಲದು

'ಕೂತು ಬ್ರೌಸ್ ಮಾಡುವವನಿಗೆ ಜಿಯೋಸಿಮ್ ಕೂಡ ಸಾಲದು'. ಯಾವಾಗಲೂ ಕುಳಿತು ಆ ವಿಳಾಸ ಈ ವಿಳಾಸ ಬರೆದು ಬ್ರೌಸ್ ಮಾಡುತ್ತಲ್ಲೇ ಕಾಲ ಕಳೆಯುವವನಿಗೆ ಅನ್ವಯಿಸುವಂತಹ ನಾಣ್ಣುಡಿ. ಅಂದರೆ ಇತ್ತೀಚಿಗೆ ಜಿಯೋಸಿಮ್ ಸಂಸ್ಥಾಪಕರು ಮಿತಿ ಇಲ್ಲದಷ್ಟು ಉಚಿತ ಇಂಟರ್‌ನೆಟ್ ಕೊಟ್ಟಿರುವುದರಿಂದ ಎಲ್ಲರೂ ಜಿಯೋಸಿಮ್‌ನ್ನು ಬಳಸುತ್ತಿದ್ದಾರೆ. ಈಗಿನ ಕಾಲದಲ್ಲಿ ಪ್ರತಿಯೊಂದನ್ನು ಅಂತರ್‌ಜಾಲದಲ್ಲಿ ನೋಡುವ, ಹುಡುಕುವ, ಪ್ರವೃತ್ತಿ ಎದುರಾಗಿರುವುದರಿಂದ ೨೪ ಘಂಟೆಗಳು ಇಂಟರ್‌ನೆಟ್ ಇದ್ದರೂ ಅವನಿಗೆ ಸಾಲದು. ಉಚಿತ ಇಂಟರ್‌ನೆಟ್ ನೀಡಿದರು. ಬಳಕೆ ಮಾಡುವವನಿಗೆ ಜಿಯೋಸಿಮ್ ಕೂಡ ಸಾಲದು. ಅದರಲ್ಲೂ ನಿಂತರೂ ಬ್ರೌಸಿಂಗ್, ಕೂತರೂ ಬ್ರೌಸಿಂಗ್ ಹೀಗೆ ಕಂಡ ಕಂಡಲ್ಲಿ ಬ್ರೌಸಿಂಗ್ ಮಾಡುವುದು, ಇಂಟರ್‌ನೆಟ್

ಬಳಸುವುದು ಇಂದಿನ ಕಾಲದ ಯುವಕರು ಮೈಗೂಡಿಸಿಕೊಂಡಿದ್ದಾರೆ. ಇದು 'ಕೂತು ಹುಣ್ಣುವವನಿಗೆ ಕುಡಿಕೆ ಹೊನ್ನು ಸಾಲದು' ಎನ್ನುವ ನಾಣ್ನುಡಿಯ ರೂಪಾಂತರವಾಗಿದೆ.

### ೧೯. ಹೊಟ್ಟೆಗೆ ಹಿಟ್ಟಿಲ್ಲವೆಂದರೂ ಮೊಬೈಲ್‌ಗೆ ನೆಟ್ ಇರಬೇಕು.

'ಹೊಟ್ಟೆಗೆ ಹಿಟ್ಟಲ್ಲವೆಂದರೂ ಜುಟ್ಟಿಗೆ ಮಲ್ಲಿಗೆ ಹೂ' ಮುಡಿದುಕೊಂಡರು ಎಂಬ ಪ್ರಾಚೀನ ನಾಣ್ನುಡಿಯಂತೆ, ಪ್ರಸ್ತುತ ನಾಣ್ನುಡಿ 'ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಮೊಬೈಲ್‌ಗೆ ನೆಟ್ ಇರಬೇಕು' ಎಂದು ರೂಪಾಂತರಗೊಂಡಿದೆ. ಇಲ್ಲಿ ಹೊಟ್ಟೆಯ ಪ್ರಶ್ನೆ ಬರುವುದಿಲ್ಲ, ಏಕೆಂದರೆ ಇಂದಿನ ದಿನಗಳಲ್ಲಿ ಪ್ರತಿಯೊಬ್ಬರೂ ನೆಟ್ ಹಾಕಿಸಿಕೊಳ್ಳಬೇಕು. ಅನೇಕ ರೀತಿಯ ಸೌಲಭ್ಯಗಳು ಇನ್ನೊಬ್ಬರ ಸಹಾಯವಿಲ್ಲದೇ ಮಾಹಿತಿ ತಿಳಿಯಬೇಕೆನ್ನುವ ಹಂಬಲ ಇಂದಿನ ಜನಸಾಮಾನ್ಯರಲ್ಲಿ ಹುಟ್ಟಿರಬಹುದು. ಇಂತಹ ಜನಸಾಮಾನ್ಯರ ಹಂಬಲವೇ ಈ ನಾಣ್ನುಡಿಯ ಉಗಮಕ್ಕೆ ಕಾರಣ. ಇಂತಹ ನಾಣ್ನುಡಿ ಉತ್ತಮವಾದುದೇ ಆದರೆ ಎಲ್ಲರಿಗೂ ನೆಟ್ ಬಳಸಲು ಸಾಧ್ಯವಿರಬೇಕಲ್ಲ.

### ೨೦. ಬಿ.ಎ ಮಾಡೋದಕ್ಕಿಂತ ಬೀದಿ ಸುತ್ತೋದು ಲೇಸು

ಇಂದಿನ ಹೈಟೆಕ್ ಯುಗದಲ್ಲಿ ಎಲ್ಲ ರಂಗದಲ್ಲಿ ಕೌಶಲ್ಯ ತರಬೇತಿ ಟೆಕ್ನಿಕಲ್ ಕೋರ್ಸ್‌ಗಳು ಮುಂತಾದವು ಹೆಚ್ಚಾಗಿ ಬಳಕೆಗೆ ಬರುತ್ತಲಿದ್ದು ಇಂದು ಕಲಾ ವಿಭಾಗದ ವಿದ್ಯಾರ್ಥಿಗಳು ನೂರಕ್ಕೆ ತೊಂಬತ್ತು ಅಂಕ ತೆಗೆದರೂ ಬಿ.ಎ ಪದವಿಗೆ ಇಂದು ಬೆಲೆ ಎಂಬುದಿಲ್ಲ. ಎಲ್ಲಾ ರಂಗಗಳಲ್ಲಿ ಬಿ.ಎ ಓದುವವರನ್ನು ಆಯ್ಕೆಮಾಡಿಕೊಳ್ಳುತ್ತೇವೆ ಎಂದು ಕೇವಲ ಜಾಹೀರಾತು ರೇಡಿಯೋಗಳಲ್ಲಿ ಟಿ.ವಿ.ಗಳಲ್ಲಿ ಹೇಳುತ್ತಿದ್ದಾರೆಯೇ ಹೊರತು ಬಿ.ಎ. ಮಾಡಿದವನಿಗೆ ಯಾವುದೇ ಬೆಲೆ ಎಂಬುದಿಲ್ಲ. ಕೇವಲ ಡಿಗ್ರಿಗಳನ್ನು ಕುತ್ತಿಗೆಗೆ ಸಿಕ್ಕಿಸಿಕೊಂಡು ಊರೆಲ್ಲ ಸುತ್ತಿ ತಿಂದು ಮಲಗಬೇಕೇ ಹೊರತು ಯಾವುದೇ ರೀತಿಯ ಕೆಲಸವಂತೂ ದೊರೆಯುವುದಿಲ್ಲ. ಒಮ್ಮೆ ದೊರೆತರು ಸಾಮಾನ್ಯವಾದ ಗಾರ್ಡ್ ಮತ್ತು ಕಡಿಮೆ ವೇತನದ ಕೆಲಸ ದೊರೆಯುತ್ತದೆ. ಇದರಿಂದಲೇ ಬಿ.ಎ. ಮಾಡುವುದಕ್ಕಿಂತ ಬೀದಿ ಸುತ್ತುವುದು ಮೇಲು ಎಂದು ಹೇಳಿರಬಹುದು. ದೇಶದಲ್ಲಿ ಇಂದು ಬಿ.ಎ. ಪದವಿಧರರ ಸಂಖ್ಯೆಯನ್ನು ನೋಡಿದರೆ ಅಬ್ಬಾ ಎನಿಸುತ್ತದೆ. ಇಂದು ಕೇವಲ ಶೇಕಡವಾರು ಶಿಕ್ಷಣದಲ್ಲಿ ಅಭಿವೃದ್ಧಿ ಸಾಧಿಸುತ್ತೇವೆ ಎಂದು ನಾವು ಹೇಳಿಕೊಳ್ಳಬೇಕಷ್ಟೆ ಆದರೆ ಅದು ಸಾಧಿಸಿರುವುದು ಅಷ್ಟಕಷ್ಟೆ. ಸಾಮಾನ್ಯ ಕೂಲಿಕಾರರಿಗೆ ಕೊಡುವಂತಹ ಸಂಬಳಕ್ಕೆ ಇಂದು ಬಿ.ಎ ಪದವಿಧರನನ್ನು ಪರಿಗಣಿಸುತ್ತಾರೆ. ಇದರಿಂದಲೇ ಬಿ.ಎ ಮಾಡುವುದಕ್ಕಿಂತ ಬೀದಿ ಸುತ್ತಿ ಯಾವುದಾದರೂ ಒಂದು ಕೆಲಸ ನೋಡಿಕೊಂಡರೆ ತನ್ನ ಭವಿಷ್ಯವನ್ನಾದರೂ ರೂಪಿಸಿಕೊಳ್ಳಬಹುದು.

### ೨೧. ಗಂಡ ಹೆಂಡತಿ ಜಗಳ ವೈಪೈ ಕನೆಕ್ಟ್ ಆಗೋತನಕ

'ಗಂಡ ಹೆಂಡತಿ ಜಗಳ ಉಂಡು ಮಲಗೊತನಕ' ಎಂಬ ಪ್ರಾಚೀನ ನಾಣ್ಣುಡಿಯಂತೆ, ಪ್ರಸ್ತುತ 'ಗಂಡ ಹೆಂಡತಿ ಜಗಳ ವೈಪೈ ಕನೆಕ್ಟ್ ಆಗುವ ತನಕ' ಎಂಬ ನಾಣ್ಣುಡಿ ಬಳಕೆಗೆ ಬಂದಿದೆ. ಇಂದಿನ ಕಾಲದಲ್ಲಿ ಗಂಡ ಮತ್ತು ಹೆಂಡತಿ ಇಬ್ಬರೂ ಮೊಬೈಲ್ ಬಳಸುವುದರಿಂದ ಗಂಡ ಹೆಂಡತಿ ಪ್ರತಿಬಾರಿಯೂ ಮೇಸೆಜ್ ಮತ್ತು ಫೋನ್ ಮಾಡುವುದು. ವಾಟ್ಸ್‌ಪ್, ಫೇಸ್‌ಬುಕ್ ಬಳಸುವುದು ಸಾಮಾನ್ಯ. ಗಂಡ ಹೆಂಡತಿ ಜಗಳ ಹಿಂದಿನ ಕಾಲದಂತಲ್ಲಾ ಹೀಗಿನ ಕಾಲದಲ್ಲಿ ಗಂಡ ಹೆಂಡತಿ ಜಗಳವಾಡುವುದು ಮೊಬೈಲ್‌ಗಾಗಿ ಏಕೆಂದರೆ ಇಲ್ಲಿ ಇಬ್ಬರೂ ಮೊಬೈಲ್ ಬಳಸುವುದರಿಂದ ಇಬ್ಬರ ನಡುವೆ ಎಷ್ಟೇ ಕೋಪವಿದ್ದರೂ ಮೊಬೈಲ್‌ನಲ್ಲಿ ವೈಪೈಕನೆಕ್ಟ್ ಆಗೊವರಿಗೆ ಮಾತ್ರ ಎಂಬುದನ್ನು ಈ ನಾಣ್ಣುಡಿ ಸೂಚಿಸುತ್ತದೆ.

### ೨೨. ಫೇಸ್‌ಬುಕ್ ಪ್ರಪಂಚ ಕೆಡಿಸಿತು

ಒಳ್ಳೆಯ ಮಾತು ಮನಸ್ಸುಗಳನ್ನು ಸೇರಿಸಿದರೆ ಕೆಟ್ಟ ಮಾತು ಮನೆಯನ್ನು ಕೆಡಿಸುತ್ತದೆ. ಅದರಂತೆಯೇ ಇಂದಿನ ದಿನಮಾನಗಳಲ್ಲಿ ಎಲ್ಲರೂ ಫೇಸ್‌ಬುಕ್ ಬಳಸುವುದು ಸಾಮಾನ್ಯ ಇದರಿಂದ ಪ್ರಪಂಚದಲ್ಲಿ ಒಬ್ಬರಿಗೊಬ್ಬರು ಜಗಳ ಮಾಡುವಂತಾಗಿದೆ. ಅನೇಕ ಸೈಬರ್ ಅಪರಾಧಗಳಾಗುತ್ತಿವೆ. ಪ್ರಸ್ತುತ ಫೇಸ್‌ಬುಕ್‌ನಲ್ಲಿ ಒಳ್ಳೆಯ ವಿಚಾರಗಳಿಗಿಂತ ಮನೆ ಹಾಳುಮಾಡುವ ವಿಚಾರಗಳೇ ಜಾಸ್ತಿ ಬರುತ್ತಿರುವುದನ್ನು ಕಾಣಬಹುದು ಯಾವುದೇ ಒಂದು ವಿಚಾರವನ್ನು ತನ್ನಲ್ಲೇ ಇರಿಸಿಕೊಳ್ಳದೆ ಅದನ್ನು ಫೇಸ್‌ಬುಕ್‌ಗೆ ಅಪ್‌ಲೋಡ್ ಮಾಡಿದಾಗ ಆ ವಿಚಾರ ಇಡೀ ಪ್ರಪಂಚದಾದ್ಯಂತ ಸುಳಿದಾಡಿ ಕೆಲವರ ಅವಮಾನಕ್ಕೆ ಕೆಂಗಣ್ಣಿಗೆ ಗುರಿಯಾಗಿರುವುದನ್ನು ನೋಡಬಹುದು. ಇದ್ದರಿಂದಲೇ 'ಮಾತು ಮನೆ ಕೆಡಿಸಿತು' ಎಂಬಂತೆ 'ಫೇಸ್‌ಬುಕ್ ಪ್ರಪಂಚ ಕೆಡಿಸಿತು' ಎಂದಿರಬಹುದು.

### ೨೩. ಹಗರಣ ಮಾಡ್ದೆ ಇದ್ರೆ ರಾಜಕೀಯ ಕುರ್ಚಿ ಸಿಗಲ್ಲ

'ಒಗ್ಗರಣೆ ಹಾಕದೆ ಇದ್ದರೆ ಅಡುಗೆ ರುಚಿ ಬರಲ್ಲ' ಎಂಬ ಪ್ರಾಚೀನ ನಾಣ್ಣುಡಿಯಂತೆ ಹೊಸ ನಾಣ್ಣುಡಿ ರೂಪಿತವಾಗಿದೆ. ಸಾಮಾನ್ಯವಾಗಿ ಅಡುಗೆ ರುಚಿ ಇರಬೇಕಾದರೆ ಒಗ್ಗರಣೆ ಹಾಕಿದರೆ ಹೇಗೆ ರುಚಿ ಕಾಣುತ್ತದೋ ಹಾಗೇ ಹಾಕದೇ ಇದ್ದರೆ ಸಾಂಬಾರು ರುಚಿಯೇ ಇರುವುದಿಲ್ಲವಾದ್ದರಿಂದ ರಾಜಕೀಯದಲ್ಲಿಯೂ ಸಹ ಹಾಗೇ ರಾಜಕೀಯದಲ್ಲಿ ಅನೇಕ ಹಗರಣಗಳು ನಡದೇ ಇರುತ್ತವೆ. ನಡೆಯದೇ ಇದ್ದರೇ ರಾಜಕೀಯ ನಡೆಸುವುದು ಕಷ್ಟವೆನಿಸುತ್ತದೆ. ಯಾವುದೇ ಸರ್ಕಾರ ಉತ್ತಮವಾಗಿ ನಡೆಯುತ್ತದೆ ಎಂದರೆ ಆ ಪಕ್ಷದಲ್ಲಿರುವ (ಸರ್ಕಾರದಲ್ಲಿರುವ) ಶಾಸಕರಿಗೆಲ್ಲ ಹಣವನ್ನು ನೀಡಿ ಯಾವುದೇ ಶಾಸಕ ತಿರುಗಿ ಬೀಳದಂತೆ ಮಾಡುತ್ತಾರೆ. ಯಾವುದಾದರೂ ಒಂದು ಹಗರಣವನ್ನು ಮಾಡಿ ಹಣಗಳಿಸಿದರೆ ಆ ಹಣದಿಂದ ಎಂತವರನ್ನು ಸಹ ದಾರಿಗೆ

ತರಬಹುದು. ಉದಾಹರಣೆಗೆ: ಬಿ.ಜೆ.ಪಿ. ಸರ್ಕಾರ ಆಡಳಿತದಲ್ಲಿರುವಾಗ ಎಷ್ಟು ಹಗರಣಗಳು ನಡೆದಿದ್ದವು. ಅವು ಬಯಲಿಗೆಳೆದಾಗ ಎಷ್ಟು ಸಾವಿರ ಕೋಟಿ ಕಬ್ಬಿಣದ ಹಗರಣ ಬಯಲಿಗೆ ಬಿತ್ತು ಅಲ್ಲದೆ ಇನ್ನು ಅನೇಕ ಹಗರಣಗಳು ಬಯಲಿಗೆ ಬಿದ್ದರು. ಇದರಿಂದ ಯಡಿಯೂರಪ್ಪ, ಕರುಣಾಕರರೆಡ್ಡಿ, ಜನಾರ್ಧನರೆಡ್ಡಿ ಮುಂತಾದವರು ಜೈಲುವಾಸ ಮಾಡಿದ್ದು ತಿಳಿದಿದ್ದೇ ಇದೆ. ಇಂದು ಹಗರಣ ಮಾಡದೇ ಇದ್ದರೆ ರಾಜಕೀಯ ಕುರ್ಚಿ ಸಿಗುವುದಿಲ್ಲ ಎನ್ನುವುದು. ಜನಸಾಮಾನ್ಯರಿಗೆ ತಿಳಿದಂತಹ ವಿಷಯ. ಇದಕ್ಕೆ ಕರ್ನಾಟಕ ರಾಜಕೀಯವೇ ಉತ್ತಮ ನಿದರ್ಶನ. ಪ್ರಸ್ತುತ ದಿನಗಳಲ್ಲಿ ರಾಜಕೀಯವು ಅರಾಜಕೀಯತೆಯಿಂದ ಕೂಡಿದ್ದು. ರಾಜಕಾರಣಿಗಳು ಜನಸಾಮಾನ್ಯರನ್ನು ವಂಚಿಸಿ ನಾಟಕೀಯವಾಗಿ ತಮ್ಮ ಅಧಿಕಾರವನ್ನು ಚಲಾಯಿಸುತ್ತಾರೆ. ಅಧಿಕಾರಕ್ಕೆ ಬರಬೇಕಾದರೆ ಒಂದಲ್ಲ ಒಂದು ರೀತಿಯಲ್ಲಿ ಅವರು ಹಗರಣ ಮಾಡಿರುತ್ತಾರೆ ಎಂಬುದಕ್ಕೆ ತಮಿಳುನಾಡಿನಲ್ಲಿ 'ಅಮ್ಮ ಎನಿಸಿಕೊಂಡ ಜಯಲಲಿತಾ' ಅವರೇ ಸಾಕ್ಷಿ.

**೨೪. ಮಂತ್ರಕ್ಕಿಂತ ಉಗುಳು ಜಾಸ್ತಿ, ಲೈಕ್‌ಗಿಂತ ಕಾಮೆಂಟ್ ಜಾಸ್ತಿ.**

ಹಿಂದಿನ ಕಾಲದಲ್ಲಿ ಮಾಟ ಮಂತ್ರದ ಬಗ್ಗೆ ಹೆಚ್ಚು ನಂಬಿಕೆ ಇತ್ತು. ಅಂತಹ ಸಮಯದಲ್ಲಿ ಅವರು ಮಂತ್ರ ಕಲಿತಿರುತ್ತಾರೋ ಇಲ್ಲವೋ ಗೊತ್ತಿಲ್ಲ ಆದರೆ ಯಾವುದೇ ಒಂದು ಮಾತುಗಳನ್ನು ಆಡುತ್ತಲೇ ಇರುತ್ತಾರೆ. ನಾವು ವೇದ ಶಾಸ್ತ್ರಗಳನ್ನು ತಿಳಿದಿದ್ದರೆ ಇವರು ಮಂತ್ರ ಹೇಳುತ್ತಿದ್ದಾರೆ ಎಂದು ತಿಳಿಯುತ್ತಿತ್ತು. ಆದರೆ ಅ ಮಂತ್ರಗಳೇ ತಿಳಿಯದೇ ಇರುವಾಗ ಅವನು ಮಂತ್ರ ಹೇಳುತ್ತಾನೆ ಎನ್ನುವುದು ಏನು ಗ್ಯಾರಂಟಿ. ಈ ನಾಣ್ಣುಡಿ ಕೇವಲ ಮಂತ್ರದ ಪ್ರಶ್ನೆಯೊಂದೇ ಅಲ್ಲ ಮಂತ್ರ ಹೇಳುವಾಗ ಮಾತುಮಾತಿಗೂ ತೂ ತೂ ಅಂತ ಅನ್ನುತ್ತಲೇ ಇರುತ್ತಾರೆ. ಆದ್ದರಿಂದಲೇ 'ಮಂತ್ರಕ್ಕಿಂತ ಉಗುಳು ಜಾಸ್ತಿ, ಲೈಕ್‌ಗಿಂತ ಕಾಮೆಂಟ್ ಜಾಸ್ತಿ' ಎಂದು ಹೇಳಿರಬಹುದು. ಹೀಗಿನ ಕಾಲದಲ್ಲಿ ಇದು ಹೆಚ್ಚಾಗಿ ನಡೆಯುತ್ತದೆಂದರೆ ತಪ್ಪಾಗಲಾರದು. ಕಾರಣ ಉದಾಹರಣೆಗೆ ಒಬ್ಬ ಕೆಳಜಾತಿಯ ಹುಡುಗಿ ಒಬ್ಬ ಮೇಲ್ಜಾತಿಯ ಹುಡುಗ ಮದುವೆಯಾದರೆ ಅವನನ್ನು ಹಿಯ್ಯಾಳಿಸುವವರೇ ಜಾಸ್ತಿ ಅವರ ಪ್ರೀತಿಯನ್ನು ಅರ್ಥ ಮಾಡಿಕೊಳ್ಳುವವರ ಸಂಖ್ಯೆ ಕಡಿಮೆ ಇದರಿಂದ ಒಳ್ಳೆಯ ಮಾತನ್ನು ಯಾರೂ ಸಹ ಒಪ್ಪುವುದಿಲ್ಲ ಅವನನ್ನು ಹಾಸ್ಯ ಪ್ರವೃತ್ತಿಯಿಂದಲೇ ನೋಡುತ್ತಿರುತ್ತಾರೆ. ಬರವಣಿಗೆ ಕೌಶಲ್ಯ ಮತ್ತು ಸಂವಹನ ಸಾಮರ್ಥ್ಯ ಕಡಿಮೆಯಾಗುತ್ತಿರುವುದರಿಂದಾಗಿ ಇಂದು ಮಾನವ ಸಂಬಂಧಗಳು ಸಹ ತುಂಬಾ ಸಂಕೀರ್ಣವಾಗುತ್ತ ಹೋಗುತ್ತವೆ. ಹಾಗಾಗಿ ಪ್ರಸ್ತುತ ತಂತ್ರಜ್ಞಾನ ಯುಗದಲ್ಲಿ ಫೇಸ್‌ಬುಕ್ ಎಂಬ ಒಂದು ಚಿಕ್ಕ ಆಫ್‌ನಿಂದಾಗಿ ಇಡೀ ಪ್ರಪಂಚವೇ ಒಂದು ಕುಟುಂಬದಂತಿದ್ದು ಅದರಲ್ಲಿ ಎಲ್ಲರೂ ಪಾಲುದಾರರಾಗುವ ಅವಕಾಶವಿದೆ. ಆದರೆ ಅದರಲ್ಲೂ ಫೋಟೋ ಇನ್ನಿತರೆ ಅಂಶಗಳನ್ನು ಹ್ಯಾಡ್ ಮಾಡಿದಾಗ ಅದಕ್ಕೆ ಒಳ್ಳೆಯ ಪ್ರತಿಕ್ರಿಯೆ ಬದಲು ಕಾಮೆಂಟ್‌ಗಳು ಜಾಸ್ತಿ ಆ ಕಾಮೆಂಟ್‌ಗಳಲ್ಲಿ ಒಳ್ಳೆಯ ಸಜೇಷನ್ ಇರುವುದಿಲ್ಲ ಅದು ಆಗಿರಬೇಕಿತ್ತು, ಹೀಗಿರಬೇಕಿತ್ತು ಎಂಬ ಮಾತುಗಳೇ ಹೆಚ್ಚು.

### ೨೫. ಬೋಳತಲೆಗೆ ಎಣ್ಣೆ ಒತ್ತಬೇಡ

ಜಿಯೋ ಸಿಮ್‌ಗೆ ಕರೆನ್ಸಿ ಹಾಕಿಸದರೇನು ಬಿಟ್ಟರೇನು ೨ಳ ಘಂಟೆ ಇಂಟರ್‌ನೆಟ್ ಉಚಿತ. ಹಾಗೆ ಕೂದಲು ಇಲ್ಲದವರು ತಲೆಗೆ ಎಣ್ಣೆ ಹಾಕಿದರೇನು ಬಿಟ್ಟರೇನು ಅವನು ಬೋಳತಲೆಗೆ ಎಣ್ಣೆ ಹಾಕಿ ಬಾಚಿಕೊಳ್ಳಲು ಕೂದಲುಗಳಿಲ್ಲ ಎಂಬರ್ಥದಲ್ಲಿ ಈ ಮೇಲಿನ ನಾಣ್ನುಡಿ ಬಳಕೆಯಾಗಿರಬಹುದು.

### ೨೬. ಬೆಂಗಳೂರಿಗೆ ಬಂದವನೇ ಬಹದ್ದೂರ

ಜನಗಳು ವಲಸೆ ಹೋಗುವುದು ಸಾಮಾನ್ಯವಾಗಿದ್ದು ಕೆಲ ವರ್ಷಗಳ ಹಿಂದೆ ಹಳ್ಳಿಯ ಯುವಕನೊಬ್ಬ ಬೆಂಗಳೂರಿಗೆ ಹೋಗಿ ೨-೩ ತಿಂಗಳ ನಂತರ ಬಂದರೆ ಸಾಕು ಅವನಿಗೆ ಊರಿನ ಜನರು ನೀಡುವ ಗೌರವ ಮತ್ತು ನೋಡುವ ದೃಷ್ಟಿಕೋನ ಭಿನ್ನತೆಯಿಂದ ತೋರುತ್ತದೆ. ಆದರೆ ಅವನು ಬೆಂಗಳೂರಿನಲ್ಲಿ ಕೂಲಿಕೆಲಸ ಮಾಡಿದರೂ ಪರವಾಗಿಲ್ಲ ಅವನು ಬೆಂಗಳೂರಲ್ಲಿ ಕೆಲಸ ಮಾಡುತ್ತಿದ್ದಾನೆ ಎಂಬುದೇ ದೊಡ್ಡ ವಿಚಾರವಾಗಿರುತ್ತದೆ. ಅದರಿಂದ್ದಲೇ ಹಳ್ಳಿಯಿಂದ ಪಟ್ಟಣಕ್ಕೆ ಬಂದಂತಹ ವ್ಯಕ್ತಿಗೆ ಅನ್ವಯವಾಗುವಂತೆ ಈ ನಾಣ್ನುಡಿ ತೋರುತ್ತದೆ.

### ೨೭. ಕರೆನ್ಸಿ ಹಾಕಲು ವರುಷ, ಮುಗಿಸಲು ನಿಮಿಷ

ಈ ಮೇಲಿನ ನಾಣ್ನುಡಿ 'ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ' ಎನ್ನುವ ನಾಣ್ನುಡಿಯಂತೆ ತೋರುತ್ತದೆ. ಕಷ್ಟಪಟ್ಟು ದುಡಿದು ಸಂಪಾದಿಸಿದ ಹಣವನ್ನು ಕೂಡಿಟ್ಟುಕೊಂಡು ಮೊಬೈಲ್‌ಗೆ ಕರೆನ್ಸಿ ಹಾಕಿಸುತ್ತವೆ. ಕರೆನ್ಸಿ ಹಾಕಿಸಲು ಸಮಯ ಜಾಸ್ತಿಬೇಕು ಅದನ್ನು ಮುಗಿಸಲು ಕೆಲವೇ ಕ್ಷಣಗಳು ಸಾಕು. ಇದರಂತೆ 'ವ್ಯಾಪರ ನಿಮಿಷ ಆರಂಭ ವರುಷ' ಚರ್ಚೆ ಇಲ್ಲದಿದ್ದರೆ ಕೇವಲ ಒಂದೇ ನಿಮಿಷದಲ್ಲಿ ವ್ಯಾಪರ ಮುಗಿದು ಹೋಗುತ್ತದೆ.

### ೨೮. ತನ್ನ ಮೇಲೆ ತಾನೇ ಅಪವಾದ ಹಾಕಿಕೊಂಡಂತೆ

ಬೇರೆಯವರು ನಮಗೆ ಕೇಡನ್ನು ಬಾಯಿಸುವುದುಂಡು, ಅದರ ಬಗೆಗೆ ನಾವು ಜಾಗರೂತರಾಗಿರಬೇಕು. ಇದು ನಿಜ ಆದರೆ ಆನೆಕ ವೇಳೆ ನಾವೇ ನಮಗೆ ಕೆಟ್ಟದನ್ನು ಮಾಡಿಕೊಳ್ಳುವ ಸಾಧ್ಯತೆ ಇದೆ. ಆಗ ಯಾರನ್ನೂ ನಾವು ದೂರುವ ಆಗಿಲ್ಲ. 'ದಾರಿಯಲ್ಲಿ ಹೋಗುವ ಮಾರಿಯನ್ನು ಮೇ ಮೇಲೆ ಹಾಕಿಕೊಂಡಂತೆ' ಎಂಬ ಮೂರ್ಖತನವನ್ನು ಈ ನಾಣ್ನುಡಿ ಎತ್ತಿತೋರಿಸುತ್ತದೆ.

### ೨೯. ಅಜ್ಜಿಗೆ ಅರಿವೆ ಚಿಂತೆ, ಮೊಮ್ಮಗಳಿಗೆ ಟಿ.ವಿ. ಚಿಂತೆ

ಇತ್ತೀಚಿನ ದಿನಗಳಲ್ಲಿ ಟಿ.ವಿ.ಯಲ್ಲಿ ಪ್ರಸಾರವಾಗುವ ರಿಯಾಲಿಟಿ ಶೋ, ಧಾರವಾಹಿ, ಸಿನಿಮಾ, ನ್ಯೂಸ್, ಹಾಡು, ಕ್ರೀಡೆ ಇನ್ನು ಮುಂತಾದ ಮನರಂಜನೆ

ಕಾರ್ಯಕ್ರಮಗಳು ನೋಡಿ ಆನಂದ ಪಡಬೇಕೆಂಬುದಷ್ಟೇ ವಿನಾ, ವಸ್ತ್ರದ ಚಿಂತೆ ಮೊಮ್ಮಗಳಿಗೆ ಇರುವುದಿಲ್ಲ. ಈ ಆಧುನಿಕತೆಯಲ್ಲಿ ಪ್ರತಿಯೊಬ್ಬರಿಗೂ ಟಿ.ವಿ ಹುಚ್ಚು ಇರುವುದರಿಂದ ಕೂತಲ್ಲೇ ದಿನನಿತ್ಯ ಪ್ರಸಾರವಾಗುವ ಕಾರ್ಯಕ್ರಮಗಳನ್ನು ತಪ್ಪದೇ ವಿಕ್ಷೀಸುತ್ತಾರೆ. ಆದ್ದರಿಂದ ಈ ನಾಣ್ಣುಡಿ ಹುಟ್ಟಿಕೊಂಡಿರಬಹುದು.

**೩೦. ರೇಡಿಯೋಕ್ಕೊಂದು ಕಾಲ, ಟಿ.ವಿಗೊಂದು ಕಾಲ**

ಹಿಂದಿನ ಕಾಲದಲ್ಲಿ ರೇಡಿಯೋ ಮುಖಾಂತರ ವಾರ್ತೆಗಳು, ಹಾಡು ಇನ್ನು ಮುಂತಾದ ಕಾರ್ಯಕ್ರಮಗಳನ್ನು ಜನಸಾಮಾನ್ಯರು ಶ್ರಾವಣ ಮಾಧ್ಯಮದ ಮೂಲಕ ಕೇಳಿ ಸಂತೋಷ ಪಡುತ್ತಿದ್ದರು. ಈಗ ಮನೆಗೊಂದು ಟಿ.ವಿ. ದೃಶ್ಯ ಮಾಧ್ಯಮದ ಮೂಲಕ ಟಿ.ವಿ.ಯಲ್ಲಿ ಪ್ರಸಾರವಾಗುವ ಅನೇಕ ಕಾರ್ಯಕ್ರಮಗಳ ಛಾಯಚಿತ್ರಗಳನ್ನು ವೀಕ್ಷಿಸಬಹುದು. ಈ ನಾಣ್ಣುಡಿ 'ಅತ್ತೆಗೊಂದು ಕಾಲ ಸೊಸೆಗೊಂದು ಕಾಲ' ಎಂಬ ನಾಣ್ಣುಡಿಯ ರೂಪವಾಗಿ ಆಧುನಿಕ ಯುಗದಲ್ಲಿ ಬೆಳಕಿಗೆ ಬಂದಿರುತ್ತದೆ.

**೩೧. ಅಭ್ಯರ್ಥಿ ಮೇಲೆ ದ್ವೇಷ, ಪಾರ್ಟಿ ಮೇಲೆ ಪ್ರೀತಿ**

ಇಂದಿನ ರಾಜಕೀಯದಲ್ಲಿ ಅಭ್ಯರ್ಥಿಯ ಮೇಲೆ ದ್ವೇಷವಿದ್ದರೂ ಪಾರ್ಟಿ ಮೇಲೆ ಪ್ರೀತಿ ಇರುತ್ತದೆ. ಉದಾಹರಣೆಗೆ ಬಿ.ಜೆ.ಪಿ. ಪಕ್ಷದಲ್ಲಿ ಯಡಿಯೂರಪ್ಪ ಮತ್ತು ಈಶ್ವರಪ್ಪ ನಡುವಿನ ಭಿನ್ನಮತವೇ ಇದಕ್ಕೆ ಉತ್ತಮ ನಿದರ್ಶನವಾಗಿರುತ್ತದೆ. ಅಭ್ಯರ್ಥಿಯ ಮೇಲೆ ಎಷ್ಟೇ ದ್ವೇಷವಿದ್ದರೂ ಪಕ್ಷದ ಮೇಲೆ ಪ್ರೀತಿ ಇರುತ್ತದೆ. ಆದ್ದರಿಂದ ಈ ನಾಣ್ಣುಡಿ 'ಅಕ್ಕಿಯ ಮೇಲೆ ಆಸೆ, ನೆಂಟರ ಮೇಲೆ ಪ್ರೀತಿ' ಎಂಬುದರ ರೂಪವಾಗಿರುತ್ತದೆ.

**೩೨. ಆಕಾರ ನೋಡಿದ, ಸ್ವೀಕಾರ ಮಾಡಿದ**

ಆಧುನಿಕ ಯುಗದಲ್ಲಿ ಜೀವನ ಸಂಗಾತಿಯನ್ನು ಆಯ್ಕೆ ಮಾಡುವಾಗ ಹೆಚ್ಚಿನವರು ಮರುಳಾಗುವುದು ಬಾಹ್ಯ ರೂಪಕ್ಕೆ, ಒಳಗಿನ ಗುಣ ಸ್ವಭಾವಗಳನ್ನು ಸೂಕ್ಷ್ಮವಾಗಿ ಅವಲೋಕಿಸುವವರು ತೀರಾ ವಿರಳ. ಇದರಿಂದಾಗಿ ಅನೇಕರು ಮೋಸ ಹೋಗುತ್ತಾರೆ, ಬದುಕಿನ ಉದ್ದಕ್ಕೂ ಪಶ್ಚಾತ್ತಾಪ ಪಡುತ್ತಾರೆ. ಆಕಾರವೆಂದರೆ ಸ್ವರೂಪ, ತೋರಿಕೆ, ವ್ಯಕ್ತಿಯ ಎತ್ತರ, ಮುಖದ ಅಂದ ಚೆಂದ, ಶರೀರದ ಬಣ್ಣ, ಪೋಷಾಕಿನ ಸೊಬಗು ಇತ್ಯಾದಿಗಳನ್ನು ಕಂಡು ಮಾರು ಹೋಗುವವರು ನಿಜ ಗುಣ ಬಯಲಾದಾಗ ಪರಿತಪ್ಪಿಸಿದವರಂತಾಗುತ್ತಾರೆ. ಇದ್ದರಿಂದಲ್ಲೇ ಇಂತಹ ನಾಣ್ಣುಡಿ ಜನ್ಮತಾಳಿರಬಹುದು.

**೩೩. ಕೈ ಹಿಡಿಯುವಾಗ ಅಗ್ನಿಸಾಕ್ಷಿ, ಕೈ ಕೂಡುವಾಗ ಆತ್ಮಸಾಕ್ಷಿ.**

ಮದುವೆಯಲ್ಲಿ ವಧು-ವರ ಸೇರಿ ನೂರಾರು ಜನರ ಮಧ್ಯೆ ಶಾಸ್ತ್ರ ಮತ್ತು ಸಂಪ್ರಾದಾಯದ ಪ್ರಕಾರ ಅಗ್ನಿಸಾಕ್ಷಿಯಾಗಿ ಮದುವೆಯಾಗುತ್ತಾರೆ. ಆಗ ಅದು ಅಗ್ನಿಸಾಕ್ಷಿ, ಕೆಲವು ದಿನಗಳ ನಂತರ ಇಬ್ಬರ ನಡುವೆ ವೈಮನಸ್ಸು ಉಂಟಾದಾಗ ಡೈವರ್ಸ್ ಪಡೆಯಲು

ನ್ಯಾಯಲಯದ ಮೆಟ್ಟಿಲೇರುತ್ತಾರೆ, ಆತ್ಮಸಾಕ್ಷಿಯಾಗಿ ಇಬ್ಬರೂ ಒಪ್ಪಿಕೊಂಡೇ ಈ ನಿರ್ಧಾರಕ್ಕೆ ಬಂದಿದ್ದೆವೆಂದು ಹೇಳುವುದುಂಟು. ಇದರಿಂದಲೇ ಇಂತಹ ನಾಣ್ಣುಡಿ ಈಗಿನ ಕಾಲದಲ್ಲಿ ಉದ್ಭವಿಸಿರಬಹುದು.

**೩೪. ನಾಯಿ ಮೇಲಿರೋ ಪ್ರೀತಿ ತಾಯಿ ಮೇಲಿಲ್ಲ,**

ಇತ್ತೀಚಿನ ದಿನಗಳಲ್ಲಿ ಪ್ರತಿ ಮನೆಯಲ್ಲೂ ನಾಯಿಯನ್ನು ಸಾಕಿರುವುದನ್ನು ಕಾಣಬಹುದು. ಅದರ ಲಾಲನೆ-ಪಾಲನೆ ಹೆತ್ತತಾಯಿಗಿಂತ ಹೆಚ್ಚಾಗಿ ನಾಯಿ ಮೇಲೆ ಪ್ರೀತಿ ತೋರಿಸುತ್ತಾರೆ. ಅದರೆ ಜನ್ಮ ನೀಡಿದ ತಾಯಿಯನ್ನು ಹೆತ್ತಮಕ್ಕಳೇ ಕಡೆಗಣಿಸುತ್ತಾರೆ. ನಾಯಿ ಮೇಲೆ ತೋರಿಸುವ ಪ್ರೀತಿ, ತಾಯಿ ಮೇಲೆ ತೋರಿಸುವುದಿಲ್ಲ. ಆದರಿಂದಲೇ ಈ ಮೇಲಿನ ನಾಣ್ಣುಡಿ ರಚನೆಯಾಗಿರಬಹುದು.

**೩೫. ಪ್ರಾಥಮಿಕ ಶಾಲೆಯಲ್ಲಿ ಬಗ್ಗದವ ವಯಸ್ಕರ ಶಿಕ್ಷಣದಲ್ಲಿ ಬಗ್ಗಿಯಾನೇ**

ಶಿಕ್ಷಣ ಎನ್ನುವುದೊಂದು ನಿರಂತರ ಪ್ರಕ್ರಿಯೆ, ಕಲಿಯುವಿಕೆಗೆ ಆದಿಯಿದ್ದರೂ ಅಂತ್ಯವಿಲ್ಲ. ಪ್ರತಿಯೊಬ್ಬ ಜ್ಞಾನಾರ್ಥಿ (ವಿದ್ಯಾರ್ಥಿ) ಪ್ರಾಥಮಿಕ ಹಂತದಲ್ಲಿಯೇ ಕಲಿಕೆಯನ್ನು ತನ್ನ ಹವ್ಯಾಸವೆಂದು ಓದುವುದು, ಬರೆಯುವುದು, ಅಭ್ಯಾಸ ಮಾಡುವುದು ಮಾಡುತ್ತಲೆ ಇರಬೇಕು. ವಯಸ್ಕರ ಶಿಕ್ಷಣದಲ್ಲಿ ಕಲಿಯಲು ಸಾಧ್ಯವಿಲ್ಲ ಎಂಬರ್ಥವನ್ನು ಎತ್ತಿ ತೋರಿಸುವಂತಹ ನಾಣ್ಣುಡಿಯಾಗಿದೆ.

**೩೬. ವಿದ್ಯೆ ಬಲ್ಲವನಿಗೆ ನೌಕರಿಯಿಲ್ಲ, ಆಟ ಬಲ್ಲವನಿಗೆ ಆಯ್ಕೆಯಿಲ್ಲ.**

'ಊಟ ಬಲ್ಲವನಿಗೆ ರೋಗವಿಲ್ಲ, ಮಾತು ಬಲ್ಲವನಿಗೆ ಜಗಳವಿಲ್ಲ' ಎಂಬ ಪ್ರಾಚೀನ ನಾಣ್ಣುಡಿಯಂತೆ ತೋರಿದರು. ಇದರ ಅರ್ಥವೇ ಬೇರೆ, ಇಂದಿನ ಕಾಲದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸರ್ಕಾರದ ಕೆಲಸ ದೊರಕುವುದು ಕಷ್ಟ, ಏಕೆಂದರೆ ಯಾವುದೇ ಕ್ಷೇತ್ರದಲ್ಲಾಗಲಿ ಸರ್ಕಾರಿ ಕೆಲಸಬೇಕಾದರೆ ಮೊದಲು ಅವನ ಪ್ರತಿಭೆಗಿಂತ ಹಣ ಮುಖ್ಯ. ಅದೇರೀತಿ ಒಂದು ಕ್ರೀಡೆಯಲ್ಲಿ ಉತ್ತಮ ಪರಿಣಿತ ಹೊಂದಿರುವಂತಹ ಆಟಗಾರನಿಗೆ ಆಯ್ಕೆ ಸಮಿತಿ ತಂಡಕ್ಕೆ ಆಯ್ಕೆ ಮಾಡುವುದಿಲ್ಲ, ಏಕೆಂದರೆ ಇಂದಿನ ದಿನಮಾನಗಳಲ್ಲಿ ರಾಜಕೀಯ, ಹಣ, ಅಧಿಕಾರ, ಸಂಬಂಧ, ಜಾತಿಯತೇ ಅಧಿಕಾರಿಗಳಲ್ಲಿ ಮೈಗೂಡಿರುವುದರಿಂದ ಪ್ರತಿಭಾವಂತ ಆಟಗಾರ ಅವಕಾಶದಿಂದ ವಂಚಿತವಾಗುತ್ತಾನೆ. ಇದರಿಂದಲೇ ಇಂತಹ ನಾಣ್ಣುಡಿ ಹುಟ್ಟಿಕೊಂಡಿದೆ.

**೩೭. ಒಲಿದರೆ ಭಡ್ತಿ, ಮುನಿದರೆ ಕೆಡ್ತಿ.**

ಇಂದಿನ ಯುಗದ ಸರ್ಕಾರಿ ಕ್ಷೇತ್ರದಲ್ಲಿ ಕೆಲಸ ಮಾಡುವ ನೌಕರರಿಗರ ಸಂಬಂಧಿಸಿದಂತಹ ನಾಣ್ಣುಡಿಯಾಗಿದೆ. ಸರ್ಕಾರಿ ಕೆಲಸ ದೇವರ ಕೆಲಸವೆಂದು ನಿಷ್ಠೆಯಿಂದ ಕೆಲಸ ಕಾರ್ಯಗಳನ್ನು ಮಾಡುತ್ತಾ ಮೇಲಾಧಿಕಾರಿಗಳ ಜೊತೆ ಅವಿನಭಾವ

ಸಂಬಂಧವನ್ನು ಇಟ್ಟುಕೊಂಡು ಒಳ್ಳೇಯವನಂತೆ ತೋರಿದರೆ ಮಾತ್ರ ಮುಂಭಡ್ತಿ ಸಿಗುತ್ತದೆ. ಕೆಟ್ಟದಾಗಿ ನಡೆದುಕೊಂಡು, ಅಧಿಕಾರ ದುರುಪಯೋಗ ಮಾಡಿಕೊಂಡರೆ ಮುಂದಿನ ಹಾದಿ ಕಠಿಣತೆಯಿಂದ ತೋರುತ್ತದೆ ಎಂಬ ಸಂದೇಶವನ್ನು ಈ ನಾಣ್ಣುಡಿ ಸೂಚಿಸುತ್ತದೆ.

**೩೮. ತಾಳಿ ಕಟ್ಟೋಕೆ ಕೂಲಿ ಕೇಳಿದ**

ಇಂದು ಮದುವೆಯೆಂದರೆ ವ್ಯವಹಾರವೆಂಬುದಾಗಿದೆ. ಪ್ರತಿಯೊಬ್ಬರೂ ಮದುವೆಯಾಗಲೂ ವರದಕ್ಷಿಣೆ ಪಡೆಯುತ್ತಿರುವುದರಿಂದ ಈ ನಾಣ್ಣುಡಿ ರೂಪಗೊಂಡಿರಬಹುದು, ಬಡವರು ಬಗ್ಗರೆನದೇ ವರದಕ್ಷಿಣೆ ಕೇಳಿ ಪಡೆಯುತ್ತಾರೆ. ವರದಕ್ಷಿಣೆ ಕೊಡದಿದರೆ ತಾಳಿಕಟ್ಟೋದಿಲ್ಲ ಎಂದು ಹೆಣ್ಣು ಹೆತ್ತವರಿಗೆ ಬೆದರಿಕೆ ಹಾಕುತ್ತಾರೆ. ಆದರಿಂದಲೇ ನೊಂದ ಜನಸಾಮಾನ್ಯರು ಈ ರೀತಿಯ ನಾಣ್ಣುಡಿಯನ್ನು ಸೃಷ್ಟಿಸಿರಬಹುದು.

**೩೯. ತಿಳಿಯದವರ ಮುಂದೆ ಭಾಷಣ ಬೀಗಿದ ಹಾಗೆ.**

ತಿಳಿಯದವರು ಎಂದರೆ ವಿದ್ಯೆ ಬುದ್ಧಿ ಇಲ್ಲದ ಜನರು ಎಂಬರ್ಥ. ರಾಜಕೀಯ ವ್ಯಕ್ತಿಗಳು ಅದು ಹಾಗೆ, ಇದು ಹೀಗೆ ಎಂದು ಭಾಷಣ ಮಾಡಿದರೇನು ಪ್ರಯೋಜನ ತಿಳಿಯಾದ ಜನಸಾಮಾನ್ಯರು ಸುಮ್ಮನೆ ಚಪ್ಪಾಳೆ ತಟ್ಟುತ್ತಾರೆ ವಿನಾ, ಜನರ ಮೇಲೆ ಯಾವ ಪರಿಣಾಮವೂ ಬೀರುವುದಿಲ್ಲ. ಇದಕ್ಕೆ ಸಮಾನವಾದ ಪ್ರಾಚೀನ ನಾಣ್ಣುಡಿ 'ಕೋಣನ ಮುಂದೆ ಕಿನ್ನರಿ ಬಾರಿಸಿದ ಹಾಗೆ' ಎಂಬರ್ಥವನ್ನು ನೀಡುವಂತಹ ಹೊಸ ನಾಣ್ಣುಡಿಯಾಗಿ ಇಲ್ಲಿ ಕಂಡುಬಂದಿದೆ.

**೪೦. ಭ್ರಷ್ಟರ ಕೈಗೆ ಅಧಿಕಾರ ಕೊಟ್ಟ ಹಾಗೆ.**

ಈಗಿನ ಕಾಲದಲ್ಲಿ ಪ್ರಾಮಾಣಿಕವಾಗಿರುವ ವ್ಯಕ್ತಿಗೆ ಅಧಿಕಾರ ನೀಡದೇ ಸರ್ಕಾರ ಭ್ರಷ್ಟ ಅಧಿಕಾರಿಗಳಿಗೆ ಹೆಚ್ಚು ಮಣೆಹಾಕುತ್ತದೆ. ಇದಕ್ಕೆ ಉತ್ತಮ ನಿದರ್ಶನವೆಂದರೆ ಕೇಂದ್ರ ಲೋಕಸೇವಾ ಆಯೋಗದ ಅಧ್ಯಕ್ಷರು ಭ್ರಷ್ಟರೆಂದು ತಿಳಿದರೂ ಅವರ ಕೈಗೆ ಅಧಿಕಾರ ನೀಡಿಲಾಗಿದೆ. ಒಂದು ಸರ್ಕಾರವನ್ನು ನಡೆಸಬೇಕಾದರೆ ಹಣ ಬೇಕಾಗುತ್ತದೆ. ಆದ್ದರಿಂದಲೇ ಇಂತಹ ಅಧಿಕಾರಿಗಳನ್ನು ನೇಮಕ ಮಾಡುತ್ತಾರೆ. ಇದರಿಂದಲೇ ಸಾಮಾನ್ಯವಿದ್ಯಾವಂತರು ಈ ಮೇಲಿನ ನಾಣ್ಣುಡಿಯನ್ನು ಬಳಕೆಮಾಡಿರಬಹುದು. ಇದು 'ಕಳ್ಳನ ಕೈಯಲ್ಲಿ ಕೀಲಿ ಕೈ ಕೊಟ್ಟ ಹಾಗೆ' ನಾಣ್ಣುಡಿಯ ರೂಪಾಂತರವಾಗಿದೆ.

**೪೧. ಸ್ವಕ್ಷೇತ್ರವನ್ನು ಉದ್ಧಾರ ಮಾಡದವನು, ಪರ ಕ್ಷೇತ್ರವನ್ನು ಉದ್ಧಾರಮಾಡುವನೆ?**

ಒಬ್ಬ ರಾಜಕೀಯ ವ್ಯಕ್ತಿ ಹುಟ್ಟಿದ ಕ್ಷೇತ್ರವನೇ ಉದ್ಧಾರ ಮಾಡದೇ ಹುಟ್ಟಿದ ಕ್ಷೇತ್ರದಲ್ಲಿ ಜನರ ಸಮಸ್ಯೆಗಳನ್ನು ಅರಿತರು, ಜನಸಾಮಾನ್ಯರ ಸಮಸ್ಯೆಗಳನ್ನು ಬಗೆಹರಿಸಲು

ಸಾಧ್ಯವಾಗದಿದ್ದರೂ, ಪರಕ್ಷೇತ್ರವೆಂದರೆ ಅಪರಿಚಿತವಾದ ಕ್ಷೇತ್ರ ಅಥವಾ ಊರು ಎಂಥರ್ಧ. ಪರ ಕ್ಷೇತ್ರದ ಜನರ ಸಮಸ್ಯೆಗಳನ್ನು ಅರಿಯುವುದು ಹೇಗೆ? ಅವರ ಸಮಸ್ಯೆಗಳನ್ನು ಬಗೆಹರಿಸುವುದು ಸಾಧ್ಯವೆ? ಇದ್ದರಿಂದ ಈ ಮೇಲಿನ ನಾಣ್ಣುಡಿ ಹುಟ್ಟಿಕೊಂಡಿರಬಹುದು.

## ಅಧ್ಯಾಯ : ಆರು

## ಸಮಾರೋಪ

ಆಧುನಿಕ ನಾಣ್ಣುಡಿಗಳು ತುಂಬಾ ವಿಶಿಷ್ಟವಾಗಿವೆ. ಈ ನಾಣ್ಣುಡಿಗಳು ಆಧುನಿಕ ಜಗತ್ತಿನಲ್ಲಿ ಜನಸಾಮಾನ್ಯರು ಹೇಗೆ ಬಳಕೆ ಮಾಡುತ್ತಾರೆ, ನಾಣ್ಣುಡಿಗಳು ಹೇಗೆ ಭಿನ್ನತೆಯಿಂದ ಕೂಡಿವೆ. ಇವುಗಳ ಮುಖಾಂತರ ಕನ್ನಡ ಭಾಷೆಯ ಮೇಲೆ ಆಗುವ ಪರಿಣಾಮಗಳೇನು? ಎಂಬ ಪ್ರಶ್ನೆ ಇಲ್ಲಿ ಉದ್ಭವಿಸಿದೆ. ಜನಸಾಮಾನ್ಯರು ಕನ್ನಡ ಭಾಷೆಯ ಪದಗಳ ಜೊತೆ ಜೊತೆಗೆ ಆಧುನಿಕ ಯುಗದಲ್ಲಿ ಪ್ರಚಲಿತವಿರುವ ಪದಗಳನ್ನು ಬಳಸಿ ವ್ಯವಹಾರಿಕ ವಲಯದಲ್ಲಾಗಲಿ, ಕೌಟುಂಬಿಕ ವಲಯದಲ್ಲಾಗಲಿ ಭಿನ್ನವಾಗಿ ಬಳಕೆಮಾಡುತ್ತಾರೆ. ಇದರಂತೆ ಜನಸಾಮಾನ್ಯರು ತಾವು ಹುಟ್ಟಿ ಬೆಳೆದ ಪರಿಸರದ ಭಾಷೆಯ ಜೊತೆ ಜೊತೆಗೆ ಇಂಗ್ಲೀಶ್ ಪದಗಳನ್ನು ಬಳಸಿ ಆಧುನಿಕ ಜಗತ್ತಿಗೆ ಸಮನಾಗಿ ಕನ್ನಡದ ನಾಣ್ಣುಡಿಗಳನ್ನು ಬಳಸಿದ್ದಾರೆ ಎಂಬುದು ಇಲ್ಲಿ ಗಮನಾರ್ಹವಾಗಿದೆ.

ಜಾಗತೀಕರಣದ ಸಂಧರ್ಭದಲ್ಲಿ ನಾಣ್ಣುಡಿಗಳು ಭವಿಷ್ಯದಲ್ಲಿ ಏನಾಗಬಹುದು? ಎಂಬ ಯೋಚನೆ ಹಲವು ವಿದ್ವಾಂಸರಲ್ಲಿ ಜಿಜ್ಞಾಸೆ ಹುಟ್ಟಿರಬಹುದು. ಸಿನಿಮಾ, ದೂರದರ್ಶನ, ಕಂಪ್ಯೂಟರ್ ಇನ್ನು ಮುಂತಾದ ಅವಿಷ್ಕಾರಗಳ ನೆಲೆಯಿಂದ ಸಮಾಜದಲ್ಲಿ ಇಂದು ಅನುಕರಣೀಯ ಸಂಸ್ಕೃತಿ ಹೆಚ್ಚಾಗುತ್ತಿದೆ ಎಂಬುದಕ್ಕೆ ಈ ಆಧುನಿಕ ನಾಣ್ಣುಡಿಗಳೇ ಉತ್ತಮ ನಿದರ್ಶನವಾಗಿವೆ. ಮನುಷ್ಯ ಮಾತು ಕಲಿತಾಗಿನಿಂದಲೂ ನಾಣ್ಣುಡಿಗಳು ಹುಟ್ಟಿವೆ. ಹುಟ್ಟುತ್ತಲೂ ಇವೆ. ಆದರೆ ನಾಣ್ಣುಡಿಗಳು ಸ್ವರೂಪ ಕಾಲದಿಂದ ಕಾಲಕ್ಕೆ ಭಿನ್ನವಾಗುತ್ತಾ ಹೋಗಿರುವುದನ್ನು ಭಾಷಿಕ ಭಿನ್ನತೆಯನ್ನು ಇಲ್ಲಿ ಗುರುತಿಸಬಹುದು. ಕನ್ನಡ ಸಾಹಿತ್ಯದ ಜನಪದ ಪ್ರಕಾರದಲ್ಲಿ ಬಹು ಹಿಂದಿನಿಂದಲೂ 'ನಾಣ್ಣುಡಿ' ಕ್ರಿಯೆಯು ಒಂದು ಬಹುಮುಖ್ಯ ಆಡುನುಡಿಯಾಗಿ, ನುಡಿಮುತ್ತಾಗಿ ಸಾಮಾನ್ಯ ಜನರಲ್ಲಿ ಕೆಲಸ ನಿರ್ವಹಿಸುತ್ತಾ ಬಂದಿದೆ. ಸಮಾಜದ ಆಗು-ಹೋಗುಗಳ ನಡುವೆ ನಿರಂತರವಾಗಿ ಬೆಳೆಯುತ್ತಾ ಬಂದಿರುವಂತಹ ಪ್ರಮುಖ ಘಟ್ಟವಾಗಿದೆ. ಇದು ಜನಸಾಮಾನ್ಯರಲ್ಲಿ ತನ್ನ ಕರ್ತವ್ಯವನ್ನು ಜೀವಂತವಾಗಿ

ನಿರ್ವಹಿಸಿಕೊಂಡು ಬಂದಿದೆ. ಇಂತಹ ನಾಣ್ಣುಡಿ ಬೇರೆ ಬೇರೆ ಕಾಲಮಾನಗಳಲ್ಲಿ ಹೊಸ ರೂಪುರೇಷ ವಿನ್ಯಾಸವನ್ನು ಮೈಗೂಡಿಸಿಕೊಂಡು ವಿಶಿಷ್ಟವಾಗಿ ಬೆಳೆದಿರುವುದನ್ನು ಗಮನಿಸಬಹುದು.

ಪ್ರಸ್ತುತ ಸಂಪ್ರಬಂಧದಲ್ಲಿ ಪ್ರಾಚೀನ ನಾಣ್ಣುಡಿಗಳಿಗೂ ಮತ್ತು ಆಧುನಿಕ ನಾಣ್ಣುಡಿಗಳಿಗೂ ಇರುವ ಭಾಷಿಕ ಚಿಂತನೆಯನ್ನು ಕುರಿತು ವಿಶ್ಲೇಷಿಸುವುದು ಅಧ್ಯಯನದ ಮುಖ್ಯ ಉದ್ದೇಶಗಳಲ್ಲೊಂದಾಗಿದೆ. ಅಂದರೆ ಪ್ರಾಚೀನ ಪದಗಳಿಗೆ ಪರ್ಯಾಯವಾಗಿ ಆಧುನಿಕ ಪದಗಳನ್ನು ಬಳಸಿಕೊಂಡು ಪ್ರಾಚೀನ ಆಯಾ ನಾಣ್ಣುಡಿಗಳಿಗೆ ಒಗ್ಗೂವಂತೆ ಬಳಸಿ ಆಧುನಿಕ ಯುಗದಲ್ಲಿ ಹೊಸ ನಾಣ್ಣುಡಿಗಳ ಸೃಷ್ಟಿಗೆ ಜನಸಾಮಾನ್ಯರೇ ಕಾರಣರಾಗಿದ್ದಾರೆ. ನಾಣ್ಣುಡಿಗಳು ಜನರಿಂದಲ್ಲೇ ಜನರ ಮಧ್ಯದಲ್ಲಿ ಜನ್ಮತಾಳಿ ಜನರ ಮಾತಿನಲ್ಲಿ ಹಾಸುಹೊಕ್ಕಾಗಿ ಬಳಕೆಗೆ ಬಂದಿರುವುದು ಎಲ್ಲರಿಗೂ ತಿಳಿದಿರುವಂತಹ ವಿಷಯವೇ, ಆದರೆ ಆರಂಭದ ನಾಣ್ಣುಡಿಗಳಿಗೂ ಪ್ರಸ್ತುತ ನಾಣ್ಣುಡಿಗಳಿಗೂ ಭಾಷಿಕತೆಯಿಂದ ವಿಭಿನ್ನ ವ್ಯತ್ಯಾಸಗಳು ಕಂಡುಬರುತ್ತವೆ. ಪ್ರಸ್ತುತ ನಾಣ್ಣುಡಿಗಳು ಆಯಾಕಾಲಕ್ಕೆ, ಆಯಾ ಸಂದರ್ಭಕ್ಕೆ ಅನುಗುಣವಾಗಿ ಮಹತ್ವ ಪಡೆಯುತ್ತವೆ ಹೊರತು ದೀರ್ಘಕಾಲ ತನ್ನ ಮಹತ್ವವನ್ನು ಉಳಿಸಿಕೊಳ್ಳುವಲ್ಲಿ ವಿಫಲವಾಗುತ್ತವೆ. ಏಕೆಂದರೆ ಭಾಷೆಯೆಂಬ ಕುದುರೆ ದಿನ ದಿನಕ್ಕೆ ಬದಲಾಗುವುದೇ ಮೂಲ ಅಂಶವೆಂದು ಹೇಳಬಹುದು.

ಆಧುನಿಕ ನಾಣ್ಣುಡಿಗಳಿಗೂ ಮತ್ತು ಹಿಂದಿನ ಕಾಲದ ನಾಣ್ಣುಡಿಗಳಿಗೆ ಭಾಷೆಯ ದೃಷ್ಟಿಯಿಂದ ಸಾಹಿತ್ಯ ಸಮಾಜದ ದೃಷ್ಟಿಯಿಂದ ಅವಲೋಕಿಸಿದಾಗ ಆಧುನಿಕ ತಂತ್ರಜ್ಞಾನದ ನಾಣ್ಣುಡಿಗಳಿಗಿಂತ ಹಿಂದಿನ ಕಾಲದ ನಾಣ್ಣುಡಿಗಳು ಅರ್ಥಪೂರ್ಣವೂ ಆದರ್ಶವಾದವು ಆಗಿದ್ದವಲ್ಲದೆ ಎಲ್ಲರ ಮೆಚ್ಚುಗೆಯನ್ನು ಸಹ ಗಳಿಸಿವೆ. ಅದರ ಒಳಾರ್ಥಗಳನ್ನು ಗಮನಿಸಿದಾಗ ನಾವು ಜೀವನದ ಒಂದು ಆದರ್ಶ ಮನುಷ್ಯನ ಬದುಕನ್ನು ಕಟ್ಟಿಕೊಡುವ ಒಂದು ಜ್ಞಾನ ಭಂಡಾರದಂತೆ ಅವು ಮಾರ್ಗದರ್ಶನವಾಗಿವೆ.

ಮಾನವ ಜತೆಗಿರುವ ಎಲ್ಲ ಸಮಸ್ಯೆಗಳನ್ನು ಕುರಿತು ಹೇಳುವ ಉತ್ತಮವಾದ ಅಳತೆಗೋಲಾಗಿ ರೂಪಗೊಂಡಿದೆ. ಆಧುನಿಕ ತಂತ್ರಜ್ಞಾನದ ನಾಣ್ಣುಡಿಗಳು ಕೆಲವು ಸ್ವಲ್ಪಮಟ್ಟಿಗೆ ಒಳ್ಳೆಯ ನಾಣ್ಣುಡಿಗಳಾಗಿ ಪರಿಣಮಿಸಿವೆ. ಇವು ಅರ್ಥ ಜಟಿಲವಾದಂತಹ ನಾಣ್ಣುಡಿಗಳಾಗಿವೆ. ಇವು ಉತ್ತಮವಾದ ಜ್ಞಾನಿಗಳ ವರ್ಗದಿಂದ ಉದಯವಾಗಿವೆ ಎಂದು ಹೇಳಲು ಸಾಧ್ಯವಿಲ್ಲ. ಯಾವುದೇ ವಿಷಯ ಹಾಸ್ಯವಾಗಿ ಕಂಡರೆ ಅದನ್ನು ನಾಣ್ಣುಡಿಯಾಗಿ ಮಾರ್ಪಡಿಸುತ್ತಾರೆ. ಸುತ್ತಮುತ್ತಲ ಸಮಾಜದಲ್ಲಿ ನಡೆಯುವ ವಿಷಯಗಳನ್ನು ತನ್ನ ತೆಕ್ಕೆಗೆ ಸೇರಿಸಿಕೊಂಡು ಹುಟ್ಟಿರುವಂತಹ ನಾಣ್ಣುಡಿಗಳಾಗಿವೆ. ಹಿಂದಿನಕಾಲದ ನಾಣ್ಣುಡಿಗಳಿಗಿಂತ ತೀರ ಹೀನವಾಗಿವೆ ಎಂದೂ ಹೇಳಲು ಸಾಧ್ಯವಿಲ್ಲ.

ಆಧುನಿಕ ತಂತ್ರಜ್ಞಾನದ ನಾಣ್ಣುಡಿಗಳಿಗೂ ಮತ್ತು ಪ್ರಾಚೀನ ನಾಣ್ಣುಡಿಗಳಿಗೂ ಹೋಲಿಸಿದಾಗ ಪ್ರಾಚೀನ ನಾಣ್ಣುಡಿಗಳೇ ಉತ್ತಮವಾದಂತಹ ನಾಣ್ಣುಡಿಗಳಾಗಿ ಕಂಡು ಬಂದಿವೆ.

ಒಟ್ಟಾರೆ ವಸ್ತು, ಶೈಲಿ, ತಂತ್ರ, ಧೋರಣೆ ಮತ್ತು ನಿರೂಪಣೆಯ ದೃಷ್ಟಿಯಿಂದ ಆಧುನಿಕ ನಾಣ್ಣುಡಿಗಳು ಜನಸಾಮಾನ್ಯರ ಮೇಲೆ ಗಾಢವಾದ ಪರಿಣಾಮವನ್ನು ಬೀರುವಲ್ಲಿ ಯಶಸ್ವಿಯಾಗಿವೆ. ಇಂತಹ ನಾಣ್ಣುಡಿಗಳು ಮುಂದೆ ಎಂದಾದರೂ ಸಮಗ್ರ ಅಧ್ಯಯನಕ್ಕೆ ಈ ಸಂಪ್ರಬಂಧ ಪೂರಕವಾಗಬಲ್ಲದು ಎನ್ನುವ ಆಶಯ.

**ಅಧ್ಯಯನದ ಫಲಿತಗಳು :**

೧. ಇಂದಿನ ತಲೆಮಾರಿನ ನಾಣ್ಣುಡಿಗಳು ಮತ್ತು ಪ್ರಸ್ತುತ ನಾಣ್ಣುಡಿಗಳಲ್ಲಿ ಕಂಡುಬರುವ ವಸ್ತುಧೋರಣೆ, ಶೈಲಿ, ನೆಲೆ, ಬೆಲೆ ಇವೆಲ್ಲ ಒಂದೇಯಾದರೂ ವಸ್ತುವಿನಲ್ಲಿ ಸ್ಥಳವ್ಯತ್ಯಾಸಕ್ಕನುಗುಣವಾಗಿ ಸಣ್ಣಪುಟ್ಟ ಮಾರ್ಪಾಟುಗಳಿದ್ದರೂ ಶೈಲಿಯಲ್ಲಿ ಅಲಂಕಾರ ವಿಶೇಷಗಳಲ್ಲಿ ಎರಡು ರೂಪದಲ್ಲಿ ಎಳ್ಳಷ್ಟೂ ವ್ಯತ್ಯಾಸವಿಲ್ಲ. ಉದಾಹರಣೆಗೆ : 'ಚಿಂತೆ ಇಲ್ಲದವನಿಗೆ ಸಂತೆಯಲ್ಲೂ ನಿದ್ದೆ' ಎನ್ನುವಂಥ ನಾಣ್ಣುಡಿಯಲ್ಲಿ ಪ್ರಸ್ತುತ ನಾಣ್ಣುಡಿಯಾದ 'ಇಂಟರ್‌ನೆಟ್ ಇಲ್ಲದವನಿಗೆ ಕೂತಲ್ಲೆ ನಿದ್ದೆ' ಎನ್ನುವ ಅಲ್ಪ ಸ್ವಲ್ಪ ವ್ಯತ್ಯಾಸವಾಗಿರುವುದನ್ನು ಅಧ್ಯಯನದ ಮುಖಾಂತರ ಕಂಡುಕೊಳ್ಳಲಾಗಿದೆ.

೨. ಜನರು ಆಡುವ ಭಾಷೆಯಲ್ಲಿ ಒಂದಕ್ಕಿಂತ ಹೆಚ್ಚು ಭಾಷೆಗಳು ಮಿಶ್ರ ಆಗುವುದರೊಂದಿಗೆ ನುಡಿಬೆರಕೆ, ನುಡಿಜಿಗಿತಗಳಾಗುತ್ತವೆ. ಹಾಗೆಯೇ ಸಂವಹನ ನಡೆಸುವ ಕಾಲಕ್ಕೆ ಅನ್ಯದೇಶಿಯ ಪದಗಳು ಕನ್ನಡದ ನುಡಿಗಳಲ್ಲಿ ಸರಾಗವಾಗಿ ಬಳಕೆಯಾಗುವುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ. ಉದಾಹರಣೆಗೆ: 'ಮೊಬೈಲ್ ಇಲ್ಲದ ಮನೆಯಲ್ಲಿ ಸೊಸೆ ತಗೊಂಡು ಬಾ' ಎನ್ನುವಂಥ ನಾಣ್ಣುಡಿಯಲ್ಲಿ ಇಂಗ್ಲೀಷಿನ 'ಮೊಬೈಲ್' ಎನ್ನುವ ನುಡಿಯೊಂದು ಸೇರಿ ನುಡಿಬೆರಕೆಯಾಗಿರುವುದನ್ನು ಗಮನಿಸಬಹುದು.

೩. ಹೊಸ ಕಾಲಕ್ಕೆ ತಕ್ಕಂತೆ ನಾಣ್ಣುಡಿಗಳನ್ನು ಸೃಷ್ಟಿಸಿಕೊಂಡು ತಮ್ಮ ಭಾಷೆಯನ್ನು ಬೆಳೆಸುತ್ತಿರುವುದು ಜೊತೆಗೆ ಜನಪದರ ಭಾಷೆಗೂ ಪ್ರಸ್ತುತ ಜನಸಾಮಾನ್ಯರ ಭಾಷೆಗೂ ಇರುವ ಭಾಷಾ ವೈಶಿಷ್ಟತೆಯನ್ನು ಈ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೪. ದೇಶಿಯ ಪದಗಳನ್ನೇ ಬಳಸಿಕೊಂಡು ಆಧುನಿಕ ಜನರು ಪ್ರಾಚೀನ ನಾಣ್ಣುಡಿಗಳಂತೆ ಹೊಸ ನಾಣ್ಣುಡಿಗಳನ್ನು ಸೃಷ್ಟಿಸಿಕೊಂಡಿರುವುದನ್ನು ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ. ಉದಾಹರಣೆಗೆ: 'ಒಗ್ಗರಣೆ ಹಾಕದೆ ಇದ್ದರೆ ಅಡುಗೆ ರುಚಿ ಇರಲ್ಲ' ಎನ್ನುವಂಥ ನಾಣ್ಣುಡಿಗೆ ಸರಿಸಮನಾಗಿ 'ಹಗರಣ ಮಾಡದೆ ಇದ್ರೆ ರಾಜಕೀಯ ಕುರ್ಚಿ

ಸಿಗಲ್ಲ' ಎನ್ನುವ ಹೊಸ ನಾಣ್ಣುಡಿ ಸೃಷ್ಟಿಯಾಗಿರುವುದನ್ನು ಅಧ್ಯಯನದ ಮುಖಾಂತರ ಕಂಡುಕೊಳ್ಳಲಾಗಿದೆ.

೫. ನಾಣ್ಣುಡಿಗಳನ್ನು ಬೇರೆ ಬೇರೆ ಪ್ರದೇಶಗಳಿಗೆ, ಬೇರೆ ಬೇರೆ ಕಾಲಕ್ಕೆ ತಕ್ಕಂತೆ ಬಳಕೆ ಮಾಡಿರುವುದನ್ನು ಕಾಣಬಹುದು. ಉದಾಹರಣೆಗೆ : 'ಮಾತು ಮನೆ ಕೆಡಿಸಿತ್ತು' ಎನ್ನುವ ಬದಲಾಗಿ 'ಫೇಸ್‌ಬುಕ್ ಪ್ರಪಂಚ ಕೆಡಿಸಿತ್ತು' ಎನ್ನುವ ಹಾಗೆ ಬಳಕೆಯಾಗಿರುವುದನ್ನು ಗಮನಿಸಬಹುದು.

೬. ನಾಣ್ಣುಡಿಗಳು ಭಾಷೆಗೆ ಅಲಂಕಾರ ಪ್ರಿಯವಾಗಿದ್ದು ಆಯಾ ಜನಾಂಗದ ಸಂಸ್ಕೃತಿಯನ್ನು ಇತಿಹಾಸವನ್ನು ತಿಳಿಸುವ ಸಾಧನಗಳಾಗಿರುತ್ತವೆ. ನಾಣ್ಣುಡಿಗಳು ದೇಶ, ಕಾಲ, ಸಮಾಜ ಮತ್ತು ಸಂಸ್ಕೃತಿ ಪರಿಸ್ಥಿತಿಗನುಸರಿಸಿಯೇ ಹುಟ್ಟಿದವುಗಳಾಗಿರುವುದರಿಂದ ಅವುಗಳಲ್ಲಿ ಆಯಾ ದೇಶದ, ಆಯಾ ಸಮಾಜದ ಸಂಸ್ಕೃತಿಯೂ ಅಡಗಿರುವುದನ್ನು ಈ ಅಧ್ಯಯನದ ಮೂಲಕ ತಿಳಿಯಲಾಗಿದೆ.

೭. ನಾಣ್ಣುಡಿಗಳಿಗಿರುವ ಅರ್ಥವೂ ಬದಲಾಗುವುದುಂಟು, ಅರ್ಥವು ಬದಲಿಸಿದಂತೆ ಪ್ರಯೋಗವನ್ನು ಬದಲಿಸಬೇಕಾಗುವ ಪ್ರಸಂಗಗಳೂ ಈ ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ. ಉದಾಹರಣೆಗೆ: 'ಊರೆಲ್ಲ ದೋಚಿಕೊಂಡು ಹೋದ ಮೇಲೆ ದೊಡ್ಡಿ ಬಾಗಿಲು ಹಾಕಿದರಂತೆ' ಎನ್ನುವ ಬದಲು 'ವೈರಸ್ ಅಟ್ಯಾಕ್ ಆದಮೇಲೆ ಆ್ಯಂಟಿ ವೈರೆಸ್ ಹಾಕಿಸಿದರಂತೆ' ಎಂಬ ನಾಣ್ಣುಡಿಯನ್ನು ಗಮನಿಸಲಾಗಿದೆ.

೮. ಭಾಷೆಯಲ್ಲಿರುವ ಶಬ್ದಗಳಿಗೆ ಅರ್ಥವು ಅನೇಕ ಕಾರಣಗಳ ಮೂಲಕ ಬದಲಾಗುತ್ತಿರುತ್ತದೆ. ಒಮ್ಮೊಮ್ಮೆ ಮೂಲಾರ್ಥಕ್ಕೆ ವಿರುದ್ಧವಾಗಿ ಅರ್ಥವು ಕಂಡು ಬರುವುದನ್ನು ನೋಡಬಹುದು.

೯. ಪ್ರಾಚೀನ ನಾಣ್ಣುಡಿಗಳಿಗೆ ಪ್ರಸ್ತುತ ಪರ್ಯಾಯ ಪದಗಳನ್ನು ಬಳಸಿ ಹೊಸ ನಾಣ್ಣುಡಿಗಳನ್ನು ಬಳಕೆಗೆ ತಂದಿರುವುದನ್ನು ಈ ಅಧ್ಯಯನದ ಮೂಲಕ ಗಮನಿಸಲಾಗಿದೆ. ಉದಾಹರಣೆ: 'ದಯವೇ ಧರ್ಮದ ಮೂಲವಯ್ಯ' ಎಂಬಲ್ಲಿ 'ಹೈಟೆಕ್‌ಗೆ ಮೊಬೈಲ್ ಮೂಲವಯ್ಯ' ಎನ್ನುವ ಪರ್ಯಾಯ ಪದಗಳನ್ನು ಬಳಸಿರುವುದು ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ.

೧೦. ನಾಣ್ಣುಡಿಗಳು ಉತ್ಪ್ರೇಕ್ಷೆ, ಹಾಸ್ಯ, ಕಮನೀಯ ಕಾವ್ಯಧ್ವನಿ, ವ್ಯಂಗ್ಯ, ಡಾಂಬಿಕತೆಯಿಂದ ಕೂಡಿರುವುದನ್ನು ಕಾಣಬಹುದು. ನಾಣ್ಣುಡಿಗಳು ಬಾಹ್ಯವಿಸಂಗಾತಿಯ ಹಿಂದಿರುವ ಸಮಂಜಸ, ಸತ್ಯವನ್ನು ಬಿಚ್ಚುಡುತ್ತವೆ. ಪೂರ್ವಸ್ಥಿತಿಯಲ್ಲಿ ಉಂಟಾದ ಅರ್ಥವನ್ನು ಬಿಟ್ಟು ಇಂದಿನ ಸ್ಥಿತಿಗೆ ಅವುಗಳನ್ನು ಹೊಂದಿಸಿಕೊಂಡು ಬಳಸಲಾಗಿರುವುದು

ಅಧ್ಯಯನದಲ್ಲಿ ಕಂಡು ಬರುತ್ತದೆ. ಬೇರೊಂದು ಭಾಷೆಯವರೊಡನೆ ಬರುವ ಸಂಬಂಧದಿಂದಲೂ ಹೊಸ ಹೊಸ ನಾಣ್ಣುಡಿಗಳು ಪ್ರಚಾರದಲ್ಲಿ ಬರುತ್ತವೆ.

**ಅನುಬಂಧ :**

**ಪಾರಿಭಾಷಿಕ ಪದಗಳ ಪಟ್ಟಿ :**

| | | |
|---|---|---|
| ಫೇಸ್‌ಬುಕ್ | ಮಿಸ್‌ಕಾಲ್ | ವಾಟ್ಸ್ ಆಫ್ |
| ಕಾಲ್ | ಗೂಗಲ್‌ಮ್ಯಾಪ್ | ವೈರಸ್ |
| ಆಟ್ಯಾಕ್ | ಆಂಟಿ ವೈರಸ್ | ಇಂಟರ್‌ನೆಟ್ |
| ಎಲಿಜಿಬಲಿಟಿ | ಐಪ್ಯಾಡ್ | ಮೋಬೈಲ್ |
| ಲೈಕ್ | ಕಾಮೆಂಟ್ | ಟೈಮ್ |
| ಬ್ರೌಸ್ | ಜಿಯೋ ಸಿಮ್ | ನೆಟ್ |
| ವೈಪೈ ಕನೆಕ್ಟ್ | ಕರೆನ್ಸಿ | ಮೇಸೆಜ್ |
| ಡಿಗ್ರಿ | ಕಾರ್ಡ್ | ಗೌರ್ನಮೆಂಟ್ |
| ಹಾಸ್ಪಿಟಲ್ | ವಾರ್ಡ್ | ಪೇಪರ್ |
| ರೇಡಿಯೋ | ಟಿ.ವಿ. | ಬ್ಯಾಟರಿ |
| ಲಾಟರಿ | ರಿಯಾಲಿಟಿ ಶೋ | ಎ.ಟಿ.ಎಂ. ಮಷಿನ್ |
| ಇನ್‌ಪೂಯೆನ್ಸ್ | ಸಿನಿಮಾ | ನ್ಯೂಸ್ |
| ಮ್ಯಾಚ್ | ಕ್ಲಬ್ | ವಾಕಿಂಗ್ |
| ಕುಕಿಂಗ್ | ಬಿಲ್ | ರಿಸರ್ಚ್ |
| ಬ್ರಾಂದಿ | ಸ್ಟೇಷನ್ | ಛೇರ್ |
| ಛೇಂಬರ್ | ಕಮಿಟಿ | ಥಿಂಕ್ |
| ಹಾರ್ಮೋನಿಯಂ | ಫಿಲ್ | ಪೇಪರ್ |
| ಪಾಪರ್ | ಸ್ನೋ ಪೌಡರ್ | ಮುನಿಸಿಪಲ್ |
| ಸೈಬರ್ | ಸೂಪರ್ ವೈಸರ್ | ಮೋಟರ್ ಕಾರ್ |
| ಡಾಕ್ಟ್ರ | ನರ್ಸ್ | ಹೋಟೆಲ್ |
| ಪಾರ್ಟಿ | ಬ್ಯಾಂಕ್ | ರೇಸ್ |
| ಹ್ಯಾಪಿ | ಕಾಫಿ | ಸ್ಟೇನ್‌ಲೆಸ್ |
| ಸ್ಟೀಲ್ | ಪ್ಲಾಸ್ಟಿಕ್ | ಕರೆಂಟ್ |
| ವೋಟು | ಗಾರ್ಡ್ | ವರ್ಕರ್ಸ್ |
| ಪ್ರೈವೆಟ್ | ಸೆಕ್ಟರ್ | ಬ್ರೌಸಿಂಗ್ |
| ಟೆಕ್ನಿಕಲ್ | ಕೋರ್ಸ್ | ಡ್ರೈವರ್ಸ್ |
| ಟೋಪನ್ | ಅಪ್‌ಲೋಡ್ | ಶೇರ್ |
| ಸೀರಿಯಲ್ | ಫೋಟೋ | ಇನ್ಸ್ಟಾಗ್ರಾಮ್ |

**ಪರಾಮರ್ಶನ ಗ್ರಂಥಗಳು :**


- ಅರ್ತಿಕಜೆ ವಿ.ಬಿ., ೨೦೧೨, ***ಸಾವಿರದ ಗಾದೆಗಳು***, ಜ್ಞಾನಗಂಗಾ ಪುಸ್ತಕ ಮಳಿಗೆ, ಪುತ್ತೂರು
- ಈಶ್ವರಪ್ಪ ಪಂ.ಎಂ., ೨೦೧೩, ***ನಮ್ಮ ಸುತ್ತಿನ ಗಾದೆಗಳ ಸಮೀಕ್ಷೆ***, ಕಾವ್ಯಾಮೃತ ಪ್ರಕಾಶನ, ಕ್ಯಾತ್ಸಂದ್ರ, ತುಮಕೂರು
- ಕಾವ್ಯಪ್ರೇಮಿ (ಸಂ), ೨೦೦೫, ***ಜನಪ್ರಿಯ ಗಾದೆಗಳ ನಿಘಂಟು***, ಸಮಾಜ ಪುಸ್ತಕಾಲಯ, ಧಾರವಾಡ
- ಕಾಳೇಗೌಡ ನಾಗವಾರ, ೨೦೦೯, ***ಬೀದಿ ಮಕ್ಕಳು ಬೆಳೆದೂ***, ಸ್ವಪ್ನ ಬುಕ್ ಹೌಸ್, ಬೆಂಗಳೂರು
- ಕೆಂಪೇಗೌಡ ಕೆ., ೧೯೯೩, ***ಸಾಮಾನ್ಯ ಭಾಷಾ ವಿಜ್ಞಾನ,*** ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
- ಕೃಷ್ಣಪ್ಪ ರೆಡ್ಡಿ ಬಿ., ೨೦೧೨, ***ಗ್ರಾಮೀಣ ಗಾದೆಗಳು***, ಪ್ರೇಮ ಪ್ರಕಾಶನ, ದಾವಣಗೆರೆ
- ಗಂಗನಾಯಕ್ ಕೆ. ಎನ್., ೨೦೧೨, ***ಸಮಗ್ರ ಗಾದೆಗಳ ಸಂಪುಟ : ೧***, ಕುವೆಂಪು ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
- ಗೋಪಾಲ್ ಟಿ.ಎಸ್. ೨೦೧೩, ***ಕನ್ನಡ ನುಡಿಗಟ್ಟುಗಳು,*** ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು
- ಜವರೇಗೌಡ. ದೇ.(ಲೇ), ೨೦೦೪, ***ಗಾದೆ,*** ಶಂಕರ ನಾರಾಯಣ ತೀ.ನಂ.(ಸಂ), ಜನಪದ ಸಾಹಿತ್ಯ ಪ್ರಕಾರಗಳು, ಕರ್ನಾಟಕ ಜನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು
- ತಪಸ್ವಿಕುಮಾರ್ ಎನ್., ೧೯೭೨, ***ಕನ್ನಡ ಗಾದೆಗಳ ಸಮೀಕ್ಷೆ***, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
- ತಿಪ್ಪೇರುದ್ರಸ್ವಾಮಿ ಎಚ್., ೨೦೧೧, ***ಕರ್ನಾಟಕ ಸಂಸ್ಕೃತಿ ಸಮೀಕ್ಷೆ***, ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು
- ದಯಾನಂದ, ೨೦೧೬, ***ಕನ್ನಡ ರತ್ನಕೋಶ,*** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
- ನಾರಾಯಣ ಕೆ.ವಿ., ೨೦೦೦, ***ಭಾಷೆ : ವಿಶ್ವಕೋಶ,*** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
- ನಾರಾಯಣ ಕೆ.ವಿ., ಸುಜ್ಞಾನಮೂರ್ತಿ ಬಿ., ಅಶೋಕಕುಮಾರ ರಂಜೇರೆ, ೧೯೯೭, ***ದಿನದಿನ-೧***, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

- ಪರಶುರಾಮಯ್ಯ ಸಿ.ಕೆ., ೨೦೧೪, ***ಗಾದೆಗಳ ಅಂತರಂಗ***, ಅಭಿಮುಖ ಪ್ರಕಾಶನ, ಬೆಂಗಳೂರು
- ಪಾಂಡುರಂಗಬಾಬು ಡಿ. ೨೦೦೫, ***ನುಡಿನೋಟ,*** ಆಕಾಶ ಪ್ರಕಾಶನ, ಮೈಸೂರು
- ಪುಟ್ಟಸ್ವಾಮಿ ಕೀಲಾರ, ೨೦೧೨, ***ಅಂತರಂಗ***, ಕನ್ನಡ ಸಾಹಿತ್ಯ ಪರಿಷತ್ತು, ಮಂಡ್ಯ
- ಮಲ್ಲೇಪುರಂ ಜಿ. ವೆಂಕಟೇಶ (ಸಂ), ೨೦೦೭, ***ಗಾದೆಯ ಮಾತು***, ಸೃಷ್ಟಿ ಪಬ್ಲಿಕೇಷನ್, ಬೆಂಗಳೂರು
- ಮಹಾದೇವಯ್ಯ ಪಿ. ೨೦೧೪, ***ಕನ್ನಡ ನುಡಿ ಬಳಕೆಯ ನೆಲೆಗಳು.***, ಕನ್ನಡ ವಿಶ್ವವಿದ್ಯಾಲಯ, ಹಂಪಿ
- ಮಹಾದೇವಯ್ಯ ಪಿ., ೨೦೦೬, ***ದಿನದಿನ-೩***, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಮುಖ್ಯಮಂತ್ರಿ ಚಂದ್ರು, ಮುರಿಗೆಪ್ಪ ಎ. (ಪ್ರಧಾನ ಸಂಪಾದಕರು), ೨೦೧೦, ***ಆಡಳಿತ ಕನ್ನಡ***, ದೂರಶಿಕ್ಷಣ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಮೈಲಹಳ್ಳಿ ರೇವಣ್ಣ, ೨೦೧೨, ***ಜನಪದ ಗಾದೆ ಮತ್ತು ಒಗಟುಗಳು,*** ಪ್ರೇಮ ಪ್ರಕಾಶನ, ದಾವಣಗೆರೆ
- ರಾಮೇಗೌಡ, ೨೦೦೯, ***ನಮ್ಮ ಸುತ್ತಿನ ಗಾದೆಗಳು***, ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು
- ರಾಮಾನುಜನ್ ಎ.ಕೆ., ೧೯೭೩, ***ಗಾದೆಗಳು***, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
- ವಿಲ್ಯಂ ಮಾಡ್ತ, ೧೯೭೫, **ಕನ್ನಡ ಭಾಷೆಯ ರೂಪುರೇಷೆಗಳು**, ಕನ್ನಡ ಅಧ್ಯಯನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
- ವೆಂಕಟರಮಣಯ್ಯ (ಸಂ), ೧೯೯೭, ***ಆಧುನಿಕ ಗಾದೆಗಳು***, ಅಂಕುರ ಪ್ರಕಾಶನ, ಬೆಂಗಳೂರು
- ಶಂಕರಭಟ್ ಡಿ.ಎನ್. ೧೯೯೯, ***ಕನ್ನಡ ಪದಗಳ ಒಳರಚನೆ***, ಭಾಷಾ ಪ್ರಕಾಶನ, ಗಡಿಕಲ್ಲು, ಕೊಪ್ಪ
- ಶ್ರೀಧರ್ ಎಸ್. ಎನ್., ೧೯೯೩, ***ಕನ್ನಡ ಭಾಷೆಯ ಆಧುನೀಕರಣ***, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
- ಶ್ರೀಧರ್ ಎಸ್. ಎನ್., ೨೦೧೧, ***ಇಂದಿನ ಕನ್ನಡ ರಚನೆ ಮತ್ತು ಬಳಕೆ***, ಅಭಿನವ ಪ್ರಕಾಶನ, ಬೆಂಗಳೂರು.
- ಸಂಪಟೂರು ವಿಶ್ವನಾಥ, ೨೦೦೮, ***ಜನಪ್ರಿಯ ನೂರಾರು ಅರ್ಥ ಸಹಿತ ಗಾದೆಗಳು***, ವಸಂತ ಪ್ರಕಾಶನ, ಬೆಂಗಳೂರು

- ಸಾಂಬಮೂರ್ತಿ, ೨೦೦೧, *ದಿನದಿನ-೨*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಸಾಂಬಮೂರ್ತಿ, ೨೦೦೯, ***ಭಾಷಾ ತಂತ್ರಜ್ಞಾನ***, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ


- **ದಿನಪತ್ರಿಕೆಗಳು :**

ಪ್ರಜಾವಾಣಿ

ವಿಜಯ ಕರ್ನಾಟಕ

ವಿಜಯವಾಣಿ

ಕನ್ನಡ ಪ್ರಭ

ಸಂಯುಕ್ತ ಕರ್ನಾಟಕ ಇತ್ಯಾದಿ

- **ಸಾಮಾಜಿಕ ಜಾಲತಾಣಗಳು :**

ಫೇಸ್‌ಬುಕ್

ವಾಟ್ಸ್‌ಆಫ್

ಇಂಟರ್‌ನೆಟ್ ಮೂಲಕ

ಕಿರಿಗನ್ನಡ ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ,ಹಂಪಿ